
# ಲಂಕೇಶ್

ಸೆಪ್ಟೆಂಬರ್ 2, 2009 ರೂ. 12/-


ಹೊಳೆಗೆ ಹೊಸನೀರು

ತಾರಿಣಿ ಶುಭದಾಯಿನಿ







## ಮೂರುಸಾವಿರ ಮಠ ಗರಾಜಗೆ

## ಸಿರಿಗೆರೆ ಮಠ ಹೆರಾಜಗೆ



## ಲಾಯರ್ ಗಾಯಿತ್ರಿ ಬಲಿಯಾದ ಕಥೆ




ತೀರ್ಥಹಳ್ಳಿ ಅಮಿಡಿ ಕಿಡ್ನಾಪ್

ನಂದಿನಿ ಹಾಲಿಗೆ ಕೃಷ್ಣದೇವರಾಯನ ಮೂತಿ

KPSC ಆನ್‌ಲೈನ್ ಅರ್ಜಿ ರಂಪಾಟ



## 'ರಾಜ್' ಹೆಸರಿಗೆ ಪ್ರೇಮ್ ಮಸಿ!



# ಬರಗಾಲದಲ್ಲೂ ಯಡ್ಡಿ ಸರ್ಕಾರ ಪೀಟೀಲು ಕುಯ್ಯುತ್ತಿದೆ!

**ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ರಾಜ್ಯದ ಎಲ್ಲಕಡೆ ಮಳೆ ಬಿದ್ದಿಲ್ಲ ಎನ್ನುವುದೇ ಗೊತ್ತಾಗಿಲ್ಲ! ಕಳೆದ ವಾರದ ತನಕ ಶೋಭಾ ಕರಂದ್ಲಾಜೆ ಜೊತೆ ನದಿಗಳಿಗೆ ಬಾಗಿನ ನೀಡುತ್ತಿದ್ದ ಯಡ್ಡಿ ತಾನು ಮಠಮಾನ್ಯಗಳಿಗೆ ಬಜೆಟ್ಟಿನಲ್ಲಿ ಅನುದಾನ ನೀಡಿದ್ದರಿಂದಲೇ ಮಳೆ ಬಿತ್ತೆಂದು ನಾಚಿಕೆಗೆಟ್ಟು ಹೇಳುತ್ತಿದ್ದರು. ಆದರೆ ಯಾವಾಗ ಅಕ್ಕಪಕ್ಕದ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯದಲ್ಲಿನ ಬರಗಾಲ ಪರಿಹಾರಕ್ಕೆ ಕೇಂದ್ರದಿಂದ ನಿಧಿ ಬೇಕೆಂದು ಕೇಳಿದರೋ ಆಗ ತನ್ನ ರಾಜ್ಯವೂ ಬರ ಪರಿಸ್ಥಿತಿ ಎದುರಿಸುತ್ತಿದೆ ಎಂದು ಈ ಮನುಷ್ಯನಿಗೆ ಗೊತ್ತಾಯಿತು! ಈಗಲೂ ಕೇಂದ್ರದಿಂದ ಹಣ ಪಡೆಯಬಹುದು ಎಂಬ ಕಾರಣಕ್ಕೆ ಮುಖ್ಯಮಂತ್ರಿಗಳು ಬರದ ರಾಗ ಹಾಡುತ್ತಿದ್ದಾರೆಯೇ ವಿನಃ ಅಸಲು ರಾಜ್ಯ ಎಂಥಾ ಭೀಕರ ಪರಿಸ್ಥಿತಿ ಎದುರಿಸುತ್ತಿದೆ ಎಂಬ ಬಗ್ಗೆ ಅಂದಾಜಿಸಿಲ್ಲ. ಆದರೂ ರಾಜ್ಯದ 20 ಜಿಲ್ಲೆಗಳಲ್ಲಿ ಬರಗಾಲ ಇರುವುದರಿಂದ ಕೇಂದ್ರ 750 ಕೋಟಿ ನಿಧಿ ನೀಡಬೇಕೆಂದು ಆಗ್ರಹಿಸಲು ಪ್ರಾರಂಭಿಸಿದ್ದಾರೆ.**

ಕನ್ನಡ ನಾಡಿನ ಜೀವನದಿಗಳಾದ ಕಾವೇರಿ, ತುಂಗೆ, ಕಪಿಲೆಗಳು ತುಂಬಿ ಹರಿಯುತ್ತಿರುವ ಹೊತ್ತಿನಲ್ಲೇ ಕರ್ನಾಟಕದ ರೈತಾಪಿ ಕಳೆದೊಂದು ದಶಕದಲ್ಲೇ ಭೀಕರವಾದ ಬರಗಾಲವನ್ನೂ ಎದುರಿಸುತ್ತಿರುವುದು ವಿಪರ್ಯಾಸವಾದರೂ ಕಹಿಸತ್ಯ! ಮೇಲೆ ಹೇಳಿದ ನದಿಗಳು ನಾಡಿನ ಹತ್ತಾರು ಜಿಲ್ಲೆಗಳಲ್ಲಿ ಪ್ರವಹಿಸಿದರೂ ರಾಜ್ಯದ ಇಪ್ಪತ್ತು ಜಿಲ್ಲೆಗಳ 308 ಹೋಬಳಿಗಳು ಬರಗಾಲವನ್ನು ಎದುರಿಸುತ್ತಿವೆ. ಆದರೂ ಮಾಧ್ಯಮಗಳಾಗಲೀ, ಸರ್ಕಾರವಾಗಲೀ ಹಂದಿಜ್ವರಕ್ಕೆ ತಲೆಕೆಡಿಸಿಕೊಂಡಷ್ಟು ಅದಕ್ಕಿಂತಲೂ ಸಾವಿರ ಪಟ್ಟು ಹೆಚ್ಚಿನ ಪ್ರಮಾಣ ಮತ್ತು ಪ್ರಭಾವ ಬೀರುವ ಬರದ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಇದು ಸರ್ಕಾರದ ಮತ್ತು ಮಾಧ್ಯಮಗಳ ತಲೆಗಳಲ್ಲಿ ರೈತರಿಗೆ ಮತ್ತು ನಗರದ ಮೇಲುಮಧ್ಯಮವರ್ಗದವರಿಗೆ ಇರುವ ಸ್ಥಾನಗಳೇನೆಂಬುದನ್ನು ಸೂಚಿಸುತ್ತದೆ!

ಈ ಬಾರಿಯೂ ಕೃಷಿ ಕೈಕೊಡುವ ಸೂಚನೆ ಕಂಡಾಗಿನಿಂದ ಏಪ್ರಿಲ್‌ನಿಂದ ಆಗಸ್ಟ್ 15ರ ತನಕ ರಾಜ್ಯದಲ್ಲಿ 48 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ ಹಂದಿಜ್ವರಕ್ಕೆ ಬಲಿಯಾದವರ ಪಟ್ಟಿಯೇ ಪತ್ರಿಕೆಗಳ ಜಾಗವನ್ನು ಆಕ್ರಮಿಸಿಕೊಂಡಿದ್ದರಿಂದ ಈ ಆತ್ಮಹತ್ಯೆ ಸುದ್ದಿಯನ್ನು ಹಾಕಲು ಮಾಧ್ಯಮಗಳಲ್ಲಿ ಸ್ಥಳವಿರಲಿಲ್ಲ. ವಿಧಾನಸೌಧದ ಕಲ್ಲು ಗೋಡೆಗಳಿಗಂತೂ ಈ ಸುದ್ದಿ ಇನ್ನೂ ತಲುಪೇ ಇಲ್ಲ.

ಕಳೆದ ಜೂನ್ 6ರಂದು ಬೀದರ್‌ನಲ್ಲಿ ಮಳೆಯಾಗಿದ್ದನ್ನು ಬಿಟ್ಟರೆ ನಂತರದ ಎರಡು ತಿಂಗಳಲ್ಲಿ ಒಂದು ಹನಿ ಮಳೆ ಸುರಿದಿಲ್ಲ. ಈಗಾಗಲೇ ಹತ್ತಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಈ ಜಿಲ್ಲೆಯಲ್ಲಿ ಮಳೆಯ ವೈಫಲ್ಯದಿಂದಾಗಿ ಕಬ್ಬಿನ ಫಸಲು ಕಡಿಮೆ ಬರಬಹುದೆಂಬ ನಿರೀಕ್ಷೆ ಇರುವುದರಿಂದ ಅಲ್ಲಿನ ಸಕ್ಕರೆ ಕಾರ್ಖಾನೆಗಳು ಈಗಾಗಲೇ ಕಬ್ಬನ್ನು ಅರೆಯುವುದಿಲ್ಲ ಎಂದು ಘೋಷಿಸುತ್ತಿದ್ದಾರೆ. ಇದರಿಂದ ಇನ್ನಷ್ಟು ಭೀತಿಗೊಳಗಾಗಿರುವ ರೈತ ನೇಣು ಕುಣಿಕೆಯನ್ನು ಕೈಯಲ್ಲಿ ಹಿಡಿದುಕೊಂಡು ಕೊನೆಯ ಆಸರೆಯೇನಾದರೂ ದೊರೆಯಬಹುದೇ ಎಂದು ಕಾತುರದಿಂದ ಕಾಯುತ್ತಿದ್ದಾನೆ.


ಗುಲ್ಬರ್ಗ ಜಿಲ್ಲೆಯೂ ಮಳೆಕಂಡು ತಿಂಗಳು ಕಳೆಯುತ್ತಿದೆ. ಮುಖ್ಯವಾಗಿ ತೊಗರಿ ಬೆಳೆಯನ್ನೇ ಆಧರಿಸಿರುವ ಈ ಜಿಲ್ಲೆಯಲ್ಲಿ ಇನ್ನೂ ಕೃಷಿ ಚಟುವಟಿಕೆಯೇ ಪ್ರಾರಂಭವಾಗಿಲ್ಲ. ಬಿತ್ತನೆ ಬೀಜಕ್ಕಿಂತ ಬ್ಯಾಂಕುಗಳು ಜುಲುಮೆಯ ಸಾಲ ನೀಡಿ ಮಾರಿರುವ ಟ್ರಾಕ್ಟರ್ ಇನ್ನಿತ್ಯಾದಿ ಸಾಧನಗಳ ಸಂಖ್ಯೆಯೇ ಹೆಚ್ಚಿರುವ ಈ ಜಿಲ್ಲೆಯಲ್ಲಿ ಹೆಚ್ಚೂಕಡಿಮೆ ಪ್ರತಿಯೊಬ್ಬ ರೈತಾಪಿಯೂ ಸಾಲಗಾರನೇ. ಎಲ್ಲರಿಗೂ ತೊಗರಿಯೇ ಜೀವನಾಧಾರ. ಅದೇ ಈ ಬಾರಿ ಕೈಕೊಡುವಂತೆ ಕಾಣುತ್ತಿದೆ. ಇತ್ತೀಚೆಗೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಆಗಸ್ಟ್ ವೇಳೆಗೆ ಅರ್ಧಕ್ಕಿಂತಲೂ ಹೆಚ್ಚು ಮುಂಗಾರು ಮಳೆ ಸುರಿದುಬಿಡಬೇಕು. ಆಮೇಲೇನಿದ್ದರೂ ಹೆಚ್ಚುವರಿಯಷ್ಟೆ. ಆದರೆ ಆಗಸ್ಟ್ ಮುಗಿಯುತ್ತಾ ಬಂದಿದ್ದರೂ ಬಿತ್ತನೆಗಾಗುವಷ್ಟು ಮಳೆ ಇಲ್ಲಿಯತನಕ ಆಗಿಲ್ಲ.

ಇನ್ನು ಕಾವೇರಿ ತಪ್ಪಲಲ್ಲೇ ಇರುವ ದಕ್ಷಿಣದ ಜಿಲ್ಲೆಗಳ ಹಲವಾರು ಹೋಬಳಿಗಳು ಬರಗಾಲವನ್ನು ಅನುಭವಿಸುತ್ತಿರುವುದು ನಮ್ಮ ದೇಶದ ಕೃಷಿ ನಿರ್ವಹಣೆಯ ವೈಪರೀತ್ಯಕ್ಕೆ ಮತ್ತು ವಿಪರ್ಯಾಸಕ್ಕೆ ಸಾಕ್ಷಿಯಂತಿದೆ. ಮಂಡ್ಯವನ್ನೂ ಒಳಗೊಂಡಂತೆ ದಕ್ಷಿಣದ ಹಲವಾರು ಜಿಲ್ಲೆಗಳಲ್ಲಿ ಆಗಸ್ಟ್ ಮುಗಿಯುತ್ತಾ ಬಂದಿದ್ದರೂ ಇನ್ನೂ ಬಿತ್ತನೆ ಕಾರ್ಯವೇ ಪ್ರಾರಂಭವಾಗಿಲ್ಲ. ಗೌರಿ ಹಬ್ಬದ ಒಳಗೆ ಇನ್ನೊಂದು ಮಳೆ ಬರದಿದ್ದರೆ ಈ ಬಾರಿ ನಮ್ಮ ಗತಿ ಗಂಗಮ್ಮನ ಪಾಲೇ ಎಂಬುದು ಈ ಭಾಗದ ರೈತರ ಖಚಿತ ಅಭಿಪ್ರಾಯ.

ಈ ಬಾರಿ ಖಾರಿಫ್ ಬೆಳೆ ಅರ್ಧಕ್ಕಿಂತಲೂ ಹೆಚ್ಚು ವಿಫಲವಾಗುತ್ತದೆ ಎಂದು ಕೃಷಿ ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ. ಮಳೆಯ ಬಗ್ಗೆ ಈ ಕೃಷಿ ತಜ್ಞರು ಮಾಡುವ ಅಂದಾಜುಗಳು ಸದಾ ವಿಫಲವಾಗುವುದು ನಿಜವೇ ಆದರೂ ಬೆಳೆಹಾನಿಯ ಬಗ್ಗೆ ಅವರ ಅಂದಾಜು ತಪ್ಪುವುದಿಲ್ಲ!


ಬರಗಾಲ, ಮಳೆ ವೈಫಲ್ಯ ಇತ್ಯಾದಿಗಳು ಪ್ರಕೃತಿ ಸಹಜ ವಿದ್ಯಮಾನಗಳು. ಒಂದು ಅಂದಾಜಿನ ಪ್ರಕಾರ ಕಳೆದ ಎರಡು ಶತಮಾನಗಳಲ್ಲಿ ನಮ್ಮ ದೇಶ ತಲ್ಲಾ 20 ವರ್ಷಗಳ ಕಾಲ ಬರಗಾಲವನ್ನು ಮತ್ತು ಭೀಕರ ಕ್ಷಾಮ ಡಾಮರಗಳನ್ನು ಎದುರಿಸಿದೆ. ಉದಾಹರಣೆಗೆ 1918ರಲ್ಲಿ ಭಾರತ ಎದುರಿಸಿದ ಭೀಕರ ಬರಗಾಲದಿಂದ 2.5 ಕೋಟಿ ಜನ ಸತ್ತರು. ಆಗ ನಮ್ಮನ್ನು ಮನುಷ್ಯರು ಎಂದೂ ಪರಿಗಣಿಸದ ಬ್ರಿಟಿಷ್ ವಸಾಹತುಶಾಹಿಗಳು ಆಳುತ್ತಿದ್ದರು. ಅದೇ ಸಮಯದಲ್ಲೇ ಆಸ್ಟ್ರೇಲಿಯಾ ಮತ್ತು ಚೀನಾಗಳಲ್ಲೂ ಭೀಕರ ಬರಗಾಲ ಬಂದಿತ್ತು. ಆದರೆ ಇಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನ ಸತ್ತಂತೆ ಆ ದೇಶಗಳಲ್ಲಿ ಸತ್ತಿರಲಿಲ್ಲ.

ಅದಾದನಂತರವೂ ಭಾರತವನ್ನೂ ಒಳಗೊಂಡಂತೆ ಚೀನಾ ಮತ್ತು ಆಸ್ಟ್ರೇಲಿಯಾದಲ್ಲಿ ಏನಿಲ್ಲವೆಂದರೂ ಇಪ್ಪತ್ತು ಬಾರಿ ಮಳೆ ವೈಫಲ್ಯವಾಗಿದೆ. ಆದರೆ ಆ ದೇಶಗಳಲ್ಲಿ ಅವೆಲ್ಲಾ ಕೇವಲ ಮಳೆ ಬರಗಾಲವಾಗಿ ಮಾತ್ರ ಉಳಿದುಕೊಂಡರೆ ನಮ್ಮಲ್ಲಿ ಸರ್ವವ್ಯಾಪಿ ಬರಗಾಲವಾಗಿಯೇ ಮುಂದುವರೆದಿದೆ. ಏಕೆಂದರೆ ಆ ದೇಶಗಳಲ್ಲಿ ಬರಗಾಲವನ್ನು ಮಳೆ ಬರಗಾಲ, ಜಲ ಬರಗಾಲ, ಕೃಷಿ ಬರಗಾಲ, ಸಮಾಜೋ-ಆರ್ಥಿಕ ಬರಗಾಲವೆಂದು ವಿಂಗಡಿಸುತ್ತಾರೆ. ಅಂದರೆ ಸತತವಾಗಿ ಮಳೆ ವೈಫಲ್ಯವಾದರೆ ಅದು ಮಳೆ ಬರಗಾಲ. ಜಲದ ಮೂಲದ ಕೊರತೆಯಿಂದಾಗಿ ಮಣ್ಣಿನಲ್ಲಿರುವ ನೀರಿನ ಪಸೆ ಒಣಗುತ್ತಾ ಹೋದರೆ ಜಲ ಬರಗಾಲ. ಈ ಕಾರಣಗಳಿಂದ ಬೆಳೆ ವೈಫಲ್ಯವಾಗುವುದು ಬೆಳೆ ಬರಗಾಲ. ಆದರಿಂದಾಗಿ ಸಾಮಾಜಿಕ ಮತ್ತು ಆರ್ಥಿಕ ಏರುಪೇರುಗಳಾಗುವುದು ಸಮಾಜೋ-ಆರ್ಥಿಕ ಬರಗಾಲ. ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ಚೀನಾ ಮತ್ತು ಆಸ್ಟ್ರೇಲಿಯಾದಲ್ಲಿ ಮಳೆಯನ್ನು ಮಾತ್ರ ಆಧರಿಸದಂತೆ ಇತರ ಜಲಮೂಲ ಮತ್ತು ಜಲಸಂಗ್ರಹಗಳನ್ನು ಮಾಡಿಕೊಳ್ಳಲಾಯಿತು. ಇದರಿಂದ ಮಳೆ ಬರಗಾಲ ಜಲ ಬರಗಾಲವಾಗಿ ಮಾರ್ಪಡಲಿಲ್ಲ. ಅದೇರೀತಿ ಯಾವ ಕಾರಣಕ್ಕೂ ಬೆಳೆ ವೈಫಲ್ಯವಾಗದಂತೆ ಹಲವು ಕ್ರಮಗಳನ್ನು ತೆಗೆದುಕೊಂಡರಲ್ಲದೆ ಬೆಳೆ ವೈಫಲ್ಯದಿಂದಾಗಿ ರೈತಾಪಿ ಬೀದಿಗೆ ಬೀಳದಂತೆ ತಡೆಗಟ್ಟಲು ಸರ್ಕಾರ ಹಲವು




ಪರ್ಯಾಯ ಉಪಕ್ರಮಗಳನ್ನು ತೆಗೆದುಕೊಂಡದ್ದರಿಂದ ಮಳೆ ಬರಗಾಲ ಮಳೆಬರಗಾಲವಾಗಿಯೇ ಉಳಿಯಿತೇ ವಿನಃ ಸಮಾಜೋ-ಆರ್ಥಿಕ ಬರಗಾಲವಾಗಿ ಮಾರ್ಪಡಲಿಲ್ಲ. ನಮ್ಮ ದೇಶದಲ್ಲಿ ಆದಂತೆ ರೈತಾಪಿಯನ್ನು ಆತ್ಮಹತ್ಯೆಗೆ ದೂಡಲಿಲ್ಲ.

ಮಳೆ ವೈಫಲ್ಯ ಪ್ರಕೃತಿ ಸಹಜವೇ ಆದರೂ ಅದು ಮನುಷ್ಯ ಸಮಾಜದ ಮೇಲೆ ಉಂಟುಮಾಡುವ ಪರಿಣಾಮ ಮಾತ್ರ ಪ್ರಕೃತಿ ಸಹಜವಲ್ಲ. ಮೇಲೆ ಹೇಳಿದಂತೆ ಸರ್ಕಾರಗಳು ಜನಪರವಾಗಿದ್ದ ಪಕ್ಷದಲ್ಲಿ ಮಳೆ ಬರಗಾಲ ಕೃಷಿ ಮತ್ತು ಸಾಮಾಜಿಕ ಬರಗಾಲವಾಗಿ ಮಾರ್ಪಾಡಾಗದಂತೆ ತಡೆಗಟ್ಟಲು ಖಂಡಿತ ಸಾಧ್ಯ. ಈ ದೇಶದ ರೈತಾಪಿಗೆ ತನ್ನ ಸುತ್ತಮುತ್ತಲಿನ ಪ್ರಾಕೃತಿಕ ಪರಿಸರವನ್ನೂ ನಿರ್ವಹಣೆ ಮಾಡುವಂಥಾ ಅಧಿಕಾರವಿದ್ದಿದ್ದರೆ ಬರಗಾಲವೂ ನಿಯಂತ್ರಣಕ್ಕೆ ಬರುತ್ತಿತ್ತೇನೋ? ಆದರೆ ನಮ್ಮ ಸಂಪನ್ಮೂಲಗಳ ಬಳಕೆಯ ರೀತಿಯನ್ನು ನಿರ್ಧರಿಸುತ್ತಿರುವವರು ಲಾಭಕೋರ ಉದ್ಯಮಗಳು ಮತ್ತು ಅವರ ಪರವಾದ ಸರ್ಕಾರಗಳು. ಇಂದು ಪರಿಸರ ಸಮತೋಲನದಲ್ಲಿ ಏರುಪೇರು ಸಂಭವಿಸಿ ಪ್ರಾಕೃತಿಕ ವಿಕೋಪಗಳು ಸಂಭವಿಸುತ್ತಿರುವುದು ಉದ್ಯಮಿಗಳ ದುರಾಸೆ ಮತ್ತು ಲಾಭಕ್ಕಾಗಿ ಪ್ರಕೃತಿಯ ದುರ್ಬಳಕೆಯಿಂದಾಗಿಯೇ. ಆದರೆ ಅದರ ಫಲವನ್ನು ಮಾತ್ರ ಬಡವರು ಮತ್ತು ರೈತಾಪಿಯೇ ಅನುಭವಿಸಬೇಕು. ತಪ್ಪು ಒಬ್ಬರದ್ದು ಶಿಕ್ಷೆ ಮತ್ತೊಬ್ಬರಿಗೆ.



ಸರ್ಕಾರಗಳು ಬರಗಾಲದ ಸಂದರ್ಭದಲ್ಲಿ ಮೊಟ್ಟಮೊದಲು ಸಾವಿನ ದವಡೆಯಿಂದ ರೈತಾಪಿಯನ್ನು ಪಾರು ಮಾಡಲು ಕ್ರಮಗಳನ್ನು ಯೋಜಿಸಬೇಕು ಮತ್ತು ಅದಕ್ಕೆ ಬೇಕಾದ ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕು. ಆದರೆ ಹಸಿರುಶಾಲು ಹೊದ್ದು ರೈತಾಪಿಯ ಹೆಸರಲ್ಲಿ ಗದ್ದುಗೆ ಹಿಡಿದ ಯಡ್ಡಿ ಸರ್ಕಾರ ಆ ನಿಟ್ಟಿನಲ್ಲಿ ಏನು ಮಾಡುತ್ತಿದೆ?

ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ರಾಜ್ಯದ ಎಲ್ಲಾ ಕಡೆ ಮಳೆ ಬಿದ್ದಿಲ್ಲ ಎನ್ನುವುದೇ ಗೊತ್ತಾಗಿಲ್ಲ! ಕಳೆದ ವಾರದ ತನಕ ಶೋಭಾ ಕರಂದ್ಲಾಜೆ ಜೊತೆ ನದಿಗಳಿಗೆ ಬಾಗಿನ ನೀಡುತ್ತಿದ್ದ ಯಡ್ಡಿ ತಾನು ಮಠಮಾನ್ಯಗಳಿಗೆ ಬಜೆಟ್ಟಿನಲ್ಲಿ ಅನುದಾನ ನೀಡಿದ್ದರಿಂದಲೇ ಮಳೆ ಬತ್ತೆಂದು ನಾಚಿಕೆಗೆಟ್ಟು ಹೇಳುತ್ತಿದ್ದರು. ಆದರೆ ಯಾವಾಗ ಅಕ್ಕಪಕ್ಕದ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯದಲ್ಲಿನ ಬರಗಾಲ ಪರಿಹಾರಕ್ಕೆ ಕೇಂದ್ರದಿಂದ ನಿಧಿ ಬೇಕೆಂದು ಕೇಳಿದರೋ ಆಗ ತನ್ನ ರಾಜ್ಯವೂ ಬರ ಪರಿಸ್ಥಿತಿ ಎದುರಿಸುತ್ತಿದೆ ಎಂದು ಈ ಮನುಷ್ಯನಿಗೆ ಗೊತ್ತಾಯಿತು! ಈಗಲೂ ಕೇಂದ್ರದಿಂದ ಹಣ ಪಡೆಯಬಹುದು ಎಂಬ ಕಾರಣಕ್ಕೆ ಮುಖ್ಯಮಂತ್ರಿಗಳು ಬರದ ರಾಗ ಹಾಡುತ್ತಿದ್ದಾರೆಯೇ ವಿನಃ ಅಸಲು ರಾಜ್ಯ ಎಂಥಾ ಭೀಕರ ಪರಿಸ್ಥಿತಿ ಎದುರಿಸುತ್ತಿದೆ ಎಂಬ ಬಗ್ಗೆ ಅಂದಾಜಿಸಿಲ್ಲ. ಆದರೂ ರಾಜ್ಯದ 20 ಜಿಲ್ಲೆಗಳಲ್ಲಿ ಬರಗಾಲ ಇರುವುದರಿಂದ ಕೇಂದ್ರ 750 ಕೋಟಿ ನಿಧಿ ನೀಡಬೇಕೆಂದು ಆಗ್ರಹಿಸಲು ಪ್ರಾರಂಭಿಸಿದ್ದಾರೆ.

ಆದರೆ ಈವರೆಗೆ ನಮ್ಮ ರಾಜ್ಯದಲ್ಲಿ ಈ ಬರಗಾಲ ಯಾವ ಸ್ವರೂಪದಲ್ಲಿದೆ? ಅದರಿಂದ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಕೂಲಿ ಮತ್ತು ರೈತಾಪಿ ಬೀದಿಗೆ ಬೀಳಬಹುದು? ಇವರೆಲ್ಲರಿಗೂ ಕೂಲಿಗಾಗಿ ಕೂಳು ಯೋಜನೆಯಲ್ಲೋ ಅಥವಾ ಉದ್ಯೋಗ ಖಾತರಿ ಯೋಜನೆಯಲ್ಲೋ ಕೆಲಸವನ್ನಾದರೂ ಕೊಡಿಸಲು ಎಷ್ಟು ಹಣ ಬೇಕಾಗಬಹುದು? ರೇಷನ್ ಅಂಗಡಿಗಳಿಂದ ಕಡಿಮೆ ದರದಲ್ಲಿ ಈ ಬರ ಸಂತ್ರಸ್ತರಿಗೆ ಉಚಿತ ಧಾನ್ಯ ಸರಬರಾಜು ಮಾಡಲು ಯಾವ ರೀತಿ ಕ್ರಮಗಳನ್ನು ಹಾಕಿಕೊಳ್ಳಬೇಕು? ರೈತಾಪಿಯನ್ನು ಇದೇ ಸಮಯದಲ್ಲಿ ಹಿಂಡಿ ಹೀರಲು ಬರುವ ಸಾಲಗಾರರ ಶೂಲೆಯಿಂದ ಹೇಗೆ ಬಚಾವು ಮಾಡಬಹುದು? ಈ ಯಾವುದರ ಬಗ್ಗೆಯೂ ಸರ್ಕಾರ ಯಾವುದೇ ವರದಿಯನ್ನು ಕೇಳಿಲ್ಲ. ಯಾವ ಜಿಲ್ಲಾಡಳಿತವೂ ಇದರ ತಯಾರಿಗೆ ಮುಂದಾಗಿಲ್ಲ. ಕೃಷಿ ಮಂತ್ರಿಯಂತೂ ಪತ್ತೆಯೇ ಇಲ್ಲ.

ಈ ತಯಾರಿಗಳಿಲ್ಲದ ಕಾರಣದಿಂದಲೇ ಕಳೆದ ವರ್ಷ ನಮ್ಮ ರಾಜ್ಯಕ್ಕೆ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 1000 ಕೋಟಿ ರೂ. ಬಂದಿದ್ದರೂ ಅದರಲ್ಲಿ 300 ಕೋಟಿ ರೂ.ಗಳನ್ನು ವೆಚ್ಚ ಮಾಡಲಿಲ್ಲ. ಅರ್ಥಾತ್ ಒಂದು ಸ್ಪಷ್ಟ ಯೋಜನೆಯಿಲ್ಲದ ಕಾರಣ ಮತ್ತು ಸರ್ಕಾರ ಮುತುವರ್ಜಿ ವಹಿಸಿ ಅದನ್ನು ರೂಪಿಸದ ಕಾರಣ ಅಷ್ಟು ಹಣದ ನಿಜವಾದ ವಾರಸುದಾರರಾದ ಕೂಲಿ ಕಾರ್ಮಿಕರಿಗೆ ಅದು ತಲುಪಲೇ ಇಲ್ಲ. ಇದು ಸರ್ಕಾರದ ಬೇಜವಾಬ್ದಾರಿಯೆಂದರೆ ತಪ್ಪಾದೀತು. ಏಕೆಂದರೆ ಅದೇರೀತಿಯ ಬೇಜವಾಬ್ದಾರಿಯನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ನೈರ್ಮಲ್ಯ, ಹಂದಿಜ್ವರ ನಿಯಂತ್ರಣ ಇತ್ಯಾದಿಗಳ ಬಗ್ಗೆ ಸರ್ಕಾರ ತೋರಿಸುವುದಿಲ್ಲ.

ಇದೇ ಹೊತ್ತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಈ ಬೆಳೆ ವೈಫಲ್ಯವನ್ನೇ ಒಂದು ಅವಕಾಶವನ್ನಾಗಿ ಬಳಸಿಕೊಂಡು ಆಹಾರ ಧಾನ್ಯಗಳನ್ನು ಆಮದು ಮಾಡಲು ಮುಂದಾಗುತ್ತಿವೆ. ಏಕೆಂದರೆ ವಿಶ್ವದ ದೈತ್ಯ ಆಹಾರ ಮಾರಾಟ ಕಂಪನಿಗಳು ಭಾರತದ ಆಹಾರ ಮಾರುಕಟ್ಟೆಯನ್ನು ತಮಗೆ ತೆರೆದಿಡಲು ಕೇಳುತ್ತಿವೆ. ಕೇಂದ್ರ ಕೃಷಿ ಮಂತ್ರಿ ಈಗಾಗಲೇ ಆಹಾರ ಆಮದನ್ನು ಮಾಡಿಕೊಂಡು ಬೆಳೆ ವೈಫಲ್ಯವನ್ನು ಎದುರಿಸುವುದಾಗಿ ಹೇಳುತ್ತಿದ್ದಾರೆ. ವಾಸ್ತವವಾಗಿ ಆಹಾರ ದಾಸ್ತಾನು ಹೆಚ್ಚಿದ್ದಾಗಲೂ ಆಹಾರ ಧಾನ್ಯಗಳ ಬೆಲೆ ಮಾತ್ರ ಹೆಚ್ಚಾಗುತ್ತಲೇ ಹೋಗಿದ್ದಕ್ಕೆ ಕಾರಣ ವಿದೇಶಿ ಕಂಪನಿಗಳನ್ನು ಆಹಾರ ಧಾನ್ಯದ ಮಾರುಕಟ್ಟೆಯಲ್ಲಿ ಬಿಟ್ಟುಕೊಂಡಿದ್ದರಿಂದ. ಅವು ತಮ್ಮ ಲಾಭಕ್ಕಾಗಿ ಆ ಕಂಪನಿಗಳು ಆಹಾರ ಧಾನ್ಯಗಳ ಬೆಲೆಯಲ್ಲಿ ಜೂಜಾಟ ಪ್ರಾರಂಭಿಸಿದ್ದರಿಂದ ಈಗ ಭಾರತಕ್ಕೂ ಈ ಮಾರಿ ಪ್ರವೇಶಿಸುತ್ತಿದೆ. ಈ ಮಾರಿ H1N1 ಗಿಂತಲೂ ಭೀಕರವಾದದ್ದು.

ಇದರೊಡನೆ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ರೈತಾಪಿ ಬರಗಾಲ ಎದುರಿಸುತ್ತಿದ್ದರೂ ಅವರ ಮೇಲಿನ ಸಾಲಮನ್ನಾ ಮಾಡುವ ಪ್ರಶ್ನೆಯೇ ಇಲ್ಲವೆಂದು ಹೇಳಿದ್ದಾರೆ. ಇದೇ ಸರ್ಕಾರವೇ ಮೊನ್ನೆ ತನ್ನ ಬಜೆಟ್ಟಿನಲ್ಲಿ ಒಟ್ಟಾರೆಯಾಗಿ ಕಾರ್ಪೋರೇಟ್ ಉದ್ಯಮಪತಿಗಳಿಗೆ 1.56,000 ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ರಿಯಾಯಿತಿಯನ್ನು ನೀಡಿದೆ. ಇದು ಈವರೆಗೆ ರೈತಾಪಿಗೆ ಕೊಟ್ಟಿರುವ ಎಲ್ಲಾ ಬಗೆಯ ರಿಯಾಯತಿ ಮತ್ತು ಸಬ್ಸಿಡಿಗಳಿಗಿಂತಲೂ ಹೆಚ್ಚು.

ಪ್ರಧಾನಮಂತ್ರಿಯ ಪ್ರಕಾರ ಭಯೋತ್ಪಾದನೆ, ನಕ್ಸಲಿಸಮ್ ಇತ್ಯಾದಿಗಳು ದೇಶ ಎದುರಿಸುತ್ತಿರುವ ದೊಡ್ಡ ಆಂತರಿಕ ಸವಾಲುಗಳು. ಕಳೆದ 63 ವರ್ಷಗಳಲ್ಲಿ ಈ ಆಂತರಿಕ "ಸವಾಲಿನ" ಕಾರಣದಿಂದ ಒಂದು ಅಂದಾಜಿನ ಪ್ರಕಾರ ಮೂರು ಲಕ್ಷಕ್ಕೂ ಹೆಚ್ಚು ಜನ ಸಾವಿಗೀಡಾಗಿರಬಹುದು. ಆದರೆ ಸರ್ಕಾರವೇ ತನ್ನ ರೈತ ವಿರೋಧಿ ನೀತಿಗಳಿಂದ ಸೃಷ್ಟಿಸುತ್ತಿರುವ ಬರಗಾಲದಿಂದ ಈವರೆಗೆ ಏನಿಲ್ಲವೆಂದರೂ ಮೂರು ಕೋಟಿಗೂ ಹೆಚ್ಚು ಜನ ಸತ್ತಿದ್ದಾರೆ. ಅಂದರೆ ಈ ದೇಶದ ಎದುರಿಸುತ್ತಿರುವ ಆಂತರಿಕ ಸವಾಲು ಯಾವುದು ಎಂಬುದು ಸ್ಪಷ್ಟವಲ್ಲವೇ? ■

# ದೇಶ ವಿಭಜಿಸಿದ್ದು ಜಿನ್ನಾ ಅಲ್ಲ, ಹಿಂದೂ ಮಹಾಸಭಾ



## ಕಂಡಹಾಗೆ

ಗೌರಿ ಲಂಕೇಶ್

...ತೀಗ ಬಜೆಪಿಯಿಂದ ಉಚ್ಚಾಟನೆಗೊಂದಿರುವ ...ತ್ ಸಿಂಗ್ ಅವರು ಸಂದರ್ಶನವೊಂದರಲ್ಲಿ ...ಜೆಪಿ ಈಗ ಪರಿಶುದ್ಧವಾಗುಳಿದಿಲ್ಲ. ...ಾರದಾಹ ಅದನ್ನು ಕಳಂಕಿತಗೊಳಿಸಿದೆ" ...ದು ಟೀಕಿಸಿದ್ದಾರೆ. ಮಾತ್ರವಲ್ಲ, ತಮ್ಮದು ...ಯು ಸೇವೆ ಮಾಡುವ ಸ್ವಯಂಸೇವಕರ ... ಎಂದು ಹೇಳಿಕೊಳ್ಳುವ ಆರೆಸ್ಸೆಸ್ ಕೂಡ ...ಕಾಶವಾದಿಗಳ ಸಂಘ"ವಾಗಿದೆ ಎಂದಿದ್ದಾರೆ. ...ಯು ಪೂರ್ವಾರೂಪವಾಗಿದ್ದ ...ಂಘವನ್ನು ಸೇರಿ ಸ್ಥಾಪಿಸಿದ ...ದಲಿಗರಲ್ಲಿ ಸಿಂಗ್ ಪ್ರಮುಖರು. ...ರು ಸ್ವತಃ ಆರೆಸ್ಸೆಸ್ಸಿನ ...ರಾಗಿರದಿದ್ದರೂ ಕಳೆದ ...ವತ್ತು ವರ್ಷಗಳಿಂದ ಬಜೆಪಿಗೆ ... ಸಲ್ಲಿಸಿದ್ದಾರೆ. ಅಂತಹ ವ್ಯಕ್ತಿ ...ತ್ತು ಬಜೆಪಿಯನ್ನು ಮತ್ತದರ ...ರೂಪವಾದ ಆರೆಸ್ಸೆಸ್ ಅನ್ನು ... ಟೀಕಿಸುತ್ತಾರೆಂದರೆ ಅದು ...ರವಾದ ವಿಚಾರವಲ್ಲ.

...ಹೋಗಲಿ, ಸಿಂಗ್ ಅವರನ್ನು ... ಅವಮಾನಕರವಾಗಿ ...ಚ್ಚಾಟಿಸಿದ್ದರಿಂದ ಅವರು ...ಶದಲ್ಲಿ ಹೀಗೆ ಹೇಳಿರಬಹುದು ...ಟ್ಟುಕೊಂಡರೂ ಅವರು ...ನ್ನೊಂದು ಸಂದರ್ಶನದಲ್ಲಿ ಹೇಳಿರುವ ಮಾತು ...ಳ ಮುಖ್ಯವಾಗಿದೆ. ಪ್ರಸ್ತುತ ವಿವಾದದ ...ಬಂದು ಸಿಂಗ್ ಅವರು ಬರೆದಿರುವ ...nah: India, Partition-...ependence' ಪುಸ್ತಕವಾಗಿರುವುದರಿಂದ ...ರು ಹೀಗೆ ಹೇಳಿದ್ದಾರೆ: "ನಮ್ಮ ದೇಶದಲ್ಲಿ ...ತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ಇಲ್ಲಿ ...ಸುವುದು, ಸಂಶೋಧಿಸುವುದು, ಓದುವುದು, ...ಯುವುದು, ಚರ್ಚಿಸುವುದು, ವಾದಿಸುವುದು, ...ಭಿಪ್ರಾಯ ಹೊಂದಿರುವುದು ಎಲ್ಲವೂ ...ದ್ಧವಾಗಿದೆ. ಇಂತಹ ಭಾರತ ದುರದೃಷ್ಟಕರ ...ವಾಗುತ್ತದೆ; ಅಂಧಕಾರ ಕವಿದಿರುವ ...ವಾಗುತ್ತದೆ."


...ವಿಚಿತ್ರವೆಂದರೆ ಇವತ್ತು ತಮಗೆ ಸ್ವತಂತ್ರ ...ಪ್ರಾಯ ಹೊಂದಿರಲು ಅವಕಾಶವಿಲ್ಲ ಎಂದು ...ಳಿಡುತ್ತಿರುವ ಜಸ್ವಂತ್ ಸಿಂಗ್ ಅವರು ...ವರ್ಷಗಳ ಹಿಂದೆ ವಿದೇಶಿ ಸಂಶೋಧಕನೊಬ್ಬ ...ಜಿ ಬಗ್ಗೆ ವಿಭಿನ್ನ ನಿಲುವು ತಾಳಿದ ಎಂದು ... ಪರಿವಾರದವರು ಪುಣೆಯಲ್ಲಿ ಒಂದು ...ರ್ವ ಗ್ರಂಥಾಲಯವನ್ನೇ ನಾಶ ಮಾಡಿದಾಗ ...ದುಷ್ಕೃತ್ಯವನ್ನು ಖಂಡಿಸಿರಲಿಲ್ಲ; ...ಶಿ ಸಂಶೋಧಕನಿಗೂ ಸ್ವತಂತ್ರ ನಿಲುವು ...ವ ಹಕ್ಕಿದೆ ಎಂದು ಪ್ರತಿಪಾದಿಸಲಿಲ್ಲ. ಅಷ್ಟೇ ... ಎರಡು ವರ್ಷಗಳ ಹಿಂದೆ ಉತ್ತರ ...ಶದಲ್ಲಿ ವಿಚಾರವಾದಿ ಪೆರಿಯಾರ್ ಅವರ ...ವಾದಿತ ಪುಸ್ತಕವನ್ನು ನಿಷೇಧಿಸಬೇಕೆಂದು ...ಗಳು ಪಟ್ಟುಹಿಡಿದಿದ್ದಾಗಲೂ ಜಸ್ವಂತ್ ...ತಹ ನಿಲುವು ಭಾರತವನ್ನು ಅಂಧಕಾರಕ್ಕೆ ...ತ್ತದೆ" ಎಂದು ವಿರೋಧಿಸಿರಲಿಲ್ಲ. ಸಂಘ ...ನಾರದ ಕೊಡಲಿ ಏಟು ತನ್ನ ಬುಡಕ್ಕೆ ಬಿದ್ದಾಗ ...ತ್ರ ಅದರ ಫ್ಯಾಸಿಸ್ಟ್ ಧೋರಣೆ ಎಷ್ಟು ...ಯುಕಾರಿ ಎಂದು ಜಸ್ವಂತ್ ಸಿಂಗ್ ...ವರಿಗೆ ಅರ್ಥವಾಗುವುದು ದುರಂತವೇ

...ಅಂದಹಾಗೆ ಜಸ್ವಂತ್ ಸಿಂಗ್ ಅವರ ...ಚ್ಚಾಟನೆ ಕುರಿತಂತೆ ಚುರುಮುರಿ ಬ್ಲಾಗ್‌ನಲ್ಲಿ ...ಶಬ್ ಸೇನ್‌ಗುಪ್ತ ಎಂಬುವವರು ಹಲವು ...ಗಳನ್ನು ಎತ್ತಿದ್ದಾರೆ. ಅವು ...ಹಜವಾಗಿರುವುದರಿಂದ ಇಲ್ಲಿ ಅನುವಾದಿಸಿ ...ತ್ತಿದ್ದೇನೆ.

...* ತಾನು "ಹಿಂದೂ ಸಂಸ್ಕೃತಿ ಮತ್ತು ...ಪರೆಯನ್ನು ರಕ್ಷಿಸುವ ಪಕ್ಷ" ಎಂದು ...ಕೊಳ್ಳುವ ಬಿಜೆಪಿ ತನಗೆ 30 ವರ್ಷ ಸೇವೆ ...ದ 71 ವರ್ಷ ವಯಸ್ಸಿನ ನಿಯತ್ತಿನ ...ಅಳ"ನನ್ನು ಹೀಗೆ ನಡೆಸಿಕೊಳ್ಳುವುದು ...ನೇ?

* ಜಿನ್ನಾನನ್ನು ಇದೇರೀತಿ ಹಿಂದೊಮ್ಮೆ ಕೊಂಡಾಡಿದ್ದ ಅಧ್ವಾಣಿಯನ್ನು ಬಜೆಪಿ ತನ್ನ "ಭಾವಿ ಪ್ರಧಾನಿ" ಎಂದು ಬಿಂಬಿಸಿತ್ತು. ಆದರೆ ಅಂಥದ್ದೇ ತಪ್ಪು ಮಾಡಿದ್ದಕ್ಕೆ ಜಸ್ವಂತ್ ಅವರನ್ನು ಉಚ್ಚಾಟಿಸಿದ್ದು ಎಷ್ಟು ಸರಿ?

* ಚುನಾವಣೆ ಮುನ್ನ ಪ್ರಧಾನಿ ಮನಮೋಹನ್ ಸಿಂಗ್‌ರನ್ನು ಟಿವಿ ಚಾನಲ್‌ಗಳಲ್ಲಿ ವಾದವಿವಾದಕ್ಕೆ ಆಹ್ವಾನಿಸಿ ಅವರು ಅದನ್ನು




ತಿರಸ್ಕರಿಸಿದಾಗ ಅವರನ್ನು "ಹೇಡಿ", "ನಿಕಮ್ಮ" ಎಂದೆಲ್ಲ ಮೂದಲಿಸಿದ್ದ ಅಧ್ವಾಣಿ ಮತ್ತಾತನ ಗ್ಯಾಂಗಿಗೆ ನಿವೃತ್ತ ಸೈನ್ಯಾಧಿಕಾರಿ ಜಸ್ವಂತ್ ಸಿಂಗ್‌ರೊಂದಿಗೆ ಕೊಠಡಿಯೊಳಗೆ ಕೂತು ಚರ್ಚಿಸುವ ಧೈರ್ಯವೂ ಬಾರದಿದ್ದೇಕೆ?

* ಅಧ್ವಾಣಿ ತಮ್ಮ ಅಧ್ವಾನದ ಆತ್ಮಚರಿತ್ರೆಯಲ್ಲಿ "ಮಸೂದ್ ಅಜರ್ ಮತ್ತು ಇತರೆ ಭಯೋತ್ಪಾದಕರನ್ನು ಕಂದಾಹಾರ್‌ಗೆ ಕರೆದುಕೊಂಡು ಹೋಗುವ ಸರ್ಕಾರದ ನಿರ್ಧಾರದ ಬಗ್ಗೆ ನನಗೆ ಗೊತ್ತೇ ಇರಲಿಲ್ಲ" ಎಂದು ಸುಳ್ಳು ಹೇಳಿದ್ದರು. ಆಗ ಜಸ್ವಂತ್ ಸಿಂಗ್ "ಅಧ್ವಾಣಿಗೆ ಚೆನ್ನಾಗಿಯೇ ಗೊತ್ತಿತ್ತು. ಆ ನಿರ್ಧಾರವನ್ನು ಸಂಪುಟ ಸಭೆ ತೆಗೆದುಕೊಂಡಾಗ ಅಧ್ವಾಣಿ ಕೂಡ ಹಾಜರಿದ್ದರು" ಎಂದು ಹೇಳುವ ಮೂಲಕ ಅಧ್ವಾಣಿಗೆ ಮುಖಭಂಗ ಉಂಟುಮಾಡಿದ್ದರು. ಆ ಕಾರಣಕ್ಕೆ ಈಗ ಜಸ್ವಂತ್ ಸಿಂಗ್ ವಿರುದ್ಧ ಅಧ್ವಾಣಿ ಸೇಡು ತೀರಿಸಿಕೊಳ್ಳುತ್ತಿರಬಹುದೇ?

* 'ಕಾಂಗ್ರೆಸ್ ಪಕ್ಷದಲ್ಲಿ ಆಂತರಿಕ ಪ್ರಜಾತಂತ್ರ' ಎಂದಾಗೆಲ್ಲ ಹೊಟ್ಟೆ ಹಿಡಿದುಕೊಂಡು ನಗುವ ಬಜೆಪಿಯಲ್ಲೂ ಆಂತರಿಕ ಪ್ರಜಾತಂತ್ರವಿಲ್ಲ ಎಂದೇ ಈ ಪ್ರಕರಣದಿಂದ ಅರ್ಥೈಸಬಹುದಲ್ಲವೇ? ಅಷ್ಟೇ ಅಲ್ಲ, ಬಿಜೆಪಿಯಲ್ಲಿರುವ ಯಾರೂ ಸ್ವತಂತ್ರವಾಗಿ ಯೋಚಿಸುವಂತಿಲ್ಲ, ಬದಲಾಗಿ ನಾಗಪುರದಿಂದ ಆರೆಸ್ಸೆಸ್ ಕಳುಹಿಸುವ ಆದೇಶಗಳನ್ನು ಮಾತ್ರ ಬಜೆಪಿಗಳು ಪಾಲಿಸಬೇಕೆಂಬ ಧೋರಣೆ ಇದೆ ಎಂದಾಯಿತಲ್ಲವೇ?

********

ಜಿನ್ನಾ ಬಗ್ಗೆ ಜಸ್ವಂತ್ ಸಿಂಗ್ ತಮ್ಮ ಪುಸ್ತಕದಲ್ಲಿ ಏನೇನು ಬರೆದಿದ್ದಾರೆ ಎಂಬ ಕುತೂಹಲ ನಿಮ್ಮಂತೆ ನನಗೂ ಇದೆ. ಆದರೆ ಪುಸ್ತಕ ಇನ್ನು ಸಿಕ್ಕಿಲ್ಲ ಮತ್ತು ಅದರ 600 ಪುಟಗಳನ್ನು ಬೇಗನೆ ಓದಲಾಗುವುದಿಲ್ಲ. ಆದರೂ ಮತ್ತೊಂದು ಸಂದರ್ಶನದಲ್ಲಿ ಜಿನ್ನಾ ಕುರಿತು ಜಸ್ವಂತ್ ಸಿಂಗ್ ಆಡಿರುವ ಮಾತುಗಳ ಸಾರಾಂಶವನ್ನು ಇಲ್ಲಿ ನೀಡುತ್ತೇನೆ.

"ಭಾರತದ ಸ್ವಾತಂತ್ರ್ಯ ಚಳವಳಿಗೆ ಜಿನ್ನಾ ಎಷ್ಟು ಬದ್ಧರಾಗಿದ್ದರೆಂದರೆ ಗೋಪಾಲ್ ಕೃಷ್ಣ ಗೋಖಲೆ ಅವರನ್ನು ಹಿಂದೂ-ಮುಸ್ಲಿಮ್ ಐಕ್ಯತೆಯ ರಾಯಭಾರಿ ಎಂದು ಕರೆದಿದ್ದರು. ಸ್ವತಂತ್ರ ಭಾರತಕ್ಕೆ ಅವರು ಬ್ರಿಟಿಷರ ವಿರುದ್ಧ ಹೋರಾಡಿದರು. ಹಾಗೆಯೇ ಭಾರತದ ಮುಸಲ್ಮಾನರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಕಾಂಗ್ರೆಸ್ ವಿರುದ್ಧವೂ ಹೋರಾಡಿದರು.

ಜಿನ್ನಾ ಹಿಂದೂಗಳನ್ನು ದ್ವೇಷಿಸುತ್ತಿದ್ದರು ಎಂದೇ ಬಹಳಷ್ಟು ಜನ ನಂಬಿದ್ದಾರೆ. ಆದರೆ ಅದು ಸಂಪೂರ್ಣವಾಗಿ ಸುಳ್ಳು. ಅವರೆಂದೂ ಹಿಂದೂಗಳನ್ನು ದ್ವೇಷಿಸಲಿಲ್ಲ, ಹಿಂದೂ ಸಮುದಾಯದ ವಿರುದ್ಧ ಅವರು ಎಂದೂ ತಕರಾರುಗಳನ್ನು ವ್ಯಕ್ತಪಡಿಸಲಿಲ್ಲ.

ನಿಜವಾಗಿಯೂ ಜಿನ್ನಾ ಮಹಾನ್ ವ್ಯಕ್ತಿಯಾಗಿದ್ದರು. ಅವರ ವ್ಯಕ್ತಿತ್ವದ ಕೆಲ ಗುಣಗಳನ್ನು ನಾನು ಮೆಚ್ಚುತ್ತೇನೆ. ಮಹಾತ್ಮ ಗಾಂಧಿ ದಿವಾನರ ಪುತ್ರರಾಗಿದ್ದರು; ನೆಹರೂ ಸಾಹುಕಾರರ ಕುಟುಂಬದಲ್ಲಿ ಜನಿಸಿದ್ದರು. ಆದರೆ ಬಡ ಕುಟುಂಬದಲ್ಲಿ ಜನಿಸಿದ್ದ ಜಿನ್ನಾ ಕಷ್ಟಪಟ್ಟು ವಿದ್ಯಾಭ್ಯಾಸ ಪಡೆದು ತಮ್ಮ ವಿದ್ಯೆ ಮತ್ತು ಪರಿಶ್ರಮದಿಂದಲೇ ಸಮಾಜದಲ್ಲಿ ಸ್ಥಾನಮಾನ ಪಡೆದರು.

ಭಾರತದ ಮುಸಲ್ಮಾನರ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಹಿತಾಸಕ್ತಿಗಳನ್ನು ಕಾಪಾಡುವುದು ಜಿನ್ನಾ ಅವರ ಉದ್ದೇಶವಾಗಿತ್ತೇ ಹೊರತು ದೇಶದ ವಿಭಜನೆ ಅಲ್ಲ. ಭಾರತ ಒಂದು ಸಂಯುಕ್ತ ರಾಷ್ಟ್ರವಾಗಿದ್ದು ಅದರಲ್ಲಿ ಮುಸಲ್ಮಾನರಿಗೆ ಮೀಸಲಾತಿ ನೀಡಿದ್ದರೆ ಅವರು ಬೇರೆ ದೇಶ ಕೇಳುತ್ತಿರಲಿಲ್ಲ. ಎಷ್ಟರಮಟ್ಟಿಗೆ ಅಂದರೆ ಅವರು ಭಾರತದಲ್ಲೇ ಒಂದು ಪಾಕಿಸ್ತಾನ (ಮುಸಲ್ಮಾನರ ಪ್ರಾತಿನಿಧಿತ್ವ) ಇರಲಿ ಎಂದಿದ್ದರು. ಆದರೆ ಕೇಂದ್ರಾಡಳಿತ ವ್ಯವಸ್ಥೆ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ನೆಹರೂ ಇದಕ್ಕೆ ಒಪ್ಪದಿದ್ದಾಗ ಅವರು ವಿಧಿ ಇಲ್ಲದೆ ಪ್ರತ್ಯೇಕ ದೇಶ ಬೇಕೆಂದರು. ಅವತ್ತು ನೆಹರೂ ಅವರು ಸಂಸತ್ತಿನಲ್ಲಿ ಮುಸಲ್ಮಾನರಿಗೆ ಪ್ರಾತಿನಿಧಿತ್ವ ನೀಡುವುದಕ್ಕೆ ಒಪ್ಪಿದ್ದರೆ ದೇಶ ವಿಭಜನೆಯಾಗುತ್ತಿರಲಿಲ್ಲ.

ಮಹಾತ್ಮ ಗಾಂಧಿ ಕೂಡ "ಜಿನ್ನಾ ಓರ್ವ ಮಹಾನ್ ಭಾರತೀಯ" ಅಂದಿದ್ದರು. ಅದನ್ನು ಒಪ್ಪಿಕೊಳ್ಳಲು ನಾವು ಯಾಕೆ ಹಿಂಜರಿಯಬೇಕು? ಒಮ್ಮೆ ಗಾಂಧಿಯವರು ಮೌಂಟ್‌ಬ್ಯಾಟನ್ ಅವರಿಗೆ "ಭಾರತದ ಪ್ರಧಾನಿ ಸ್ಥಾನವನ್ನು ಜಿನ್ನಾ ಅವರಿಗೆ ನೀಡಿ" ಅಂದರು. ಆಗ ಮೌಂಟ್‌ಬ್ಯಾಟನ್ "ಏನು ತಮಾಷೆ ಮಾಡುತ್ತಿದ್ದೀರಾ ನೀವು?" ಎಂದು ಪ್ರಶ್ನಿಸಿದರು. ಆಗ ಗಾಂಧಿ ಅವರು "ಇಲ್ಲ ನಾನು ತಮಾಷೆ ಮಾಡುತ್ತಿಲ್ಲ. ಬದಲಾಗಿ ಗಂಭೀರವಾಗಿಯೇ ಹೇಳುತ್ತಿದ್ದೇನೆ. ನಾನು ಭಾರತದಾದ್ಯಂತ ಸುತ್ತಾಡಿ ಜನರನ್ನು ಒಪ್ಪಿಸುತ್ತೇನೆ" ಅಂದಿದ್ದರು. ಜಿನ್ನಾ ಮಹಾನ್ ವ್ಯಕ್ತಿ ಆಗಿದ್ದರಿಂದಲೇ ಗಾಂಧಿ ಹೀಗೆ ಹೇಳಿದ್ದರು.




ಭಾರತದಲ್ಲಿ ವಾಸಿಸುತ್ತಿರುವ ಮುಸಲ್ಮಾನರ ಕಣ್ಣುಗಳನ್ನು ನೋಡಿ. ಅಲ್ಲಿ ನಮಗೆ ಅವರು ಅನುಭವಿಸುತ್ತಿರುವ ಅಪಾರ ನೋವು ಕಾಣಿಸುತ್ತದೆ. ನಮ್ಮ ಆಳದಲ್ಲಿ ಅವರನ್ನು ಪರದೇಶಿಗಳಂತೆ ಪರಿಗಣಿಸುತ್ತೇವೆ ಮಾತ್ರವಲ್ಲ ದೇಶವನ್ನು ವಿಭಜಿಸಿದ ಮೇಲೂ ನಿಮಗೇನು ಬೇಕು ಎಂಬಂತೆ ಅವರನ್ನು ನೋಡುತ್ತೇವೆ. ಆದರೆ ಅವರೂ ಭಾರತೀಯ ಪ್ರಜೆಗಳು ಎಂಬುದನ್ನು ಮರೆಯುತ್ತೇವೆ."

ಇದನ್ನೆಲ್ಲ ಓದಿದಾಗ ನನಗನ್ನಿಸಿದ್ದು ಏನು ಗೊತ್ತಾ? ಈಗಾಗಲೇ ಹಲವಾರು ಪುಸ್ತಕಗಳನ್ನು ಬರೆದಿರುವ ಜಸ್ವಂತ್ ಸಿಂಗ್ ಅವರು ಜಿನ್ನಾ ಬಗ್ಗೆ ಕುತೂಹಲಗೊಂಡು ಸಂಶೋಧಿಸಲಾರಂಭಿಸಿದ್ದಾರೆ. ಸತತ ಐದು ವರ್ಷಗಳ ಕಾಲ ನಡೆದ ಆ ಸಂಶೋಧನೆಯಿಂದಾಗಿ ಅವರಿಗೆ ಜಿನ್ನಾರ ವ್ಯಕ್ತಿತ್ವ ಏನೆಂದು ಅರ್ಥವಾಗಿದೆ. ಅದನ್ನೇ ಅವರು ಬರೆದಿದ್ದಾರಲ್ಲದೆ "ನಾನು ಬರೆದಿರುವುದು ತಪ್ಪು ಎನ್ನುವುದಾದರೆ ಬೇರೆ ಯಾರಾದರೂ ಸಂಶೋಧನೆ ನಡೆಸಿ ಅದನ್ನು ಸಾಬೀತುಪಡಿಸಲಿ" ಎಂದು ಸವಾಲು ಹಾಕಿದ್ದಾರೆ. ಆದರೆ ದುರದೃಷ್ಟವಶಾತ್ ಅವರಿಗೆ ಕಂಡ ಜಿನ್ನಾ ಸಂಘ ಪರಿವಾರಕ್ಕೆ ಬೇಡವಾದ ಜಿನ್ನಾ. ಅದಕ್ಕೆ ಅವರನ್ನು ಹೀಗೆ ಅವಮಾನಕರವಾಗಿ ಉಚ್ಚಾಟಿಸಿದ್ದಾರೆ.


ಜಸ್ವಂತ್ ಸಿಂಗ್ ಅವರಿಗೆ ಈಗ ಸಕ್ರಿಯ ರಾಜಕೀಯದಿಂದ ಬಿಡುವು ಸಿಕ್ಕಿರುವುದರಿಂದ ಅವರು ದೇಶದ ವಿಭಜನೆಯಲ್ಲಿ ಹಿಂದೂತ್ವವಾದಿಗಳ ಪಾತ್ರ ಎಂತಹದ್ದಾಗಿತ್ತು ಎಂದು ಸಂಶೋಧಿಸಿ ತಮ್ಮ ಮುಂದಿನ ಪುಸ್ತಕ ಬರೆದರೆ ಚೆನ್ನಾಗಿರುತ್ತದೆ.

ಆ ಪುಸ್ತಕಕ್ಕೆ 1915 ರಲ್ಲಿ ಜನಿಸಿದ ಹಿಂದೂ ಮಹಾಸಭಾ ಹೇಗೆ ಕೋಮು ದ್ವೇಷವನ್ನು ಹೆಚ್ಚಿಸಿತು; ಲಾಲಾ ಲಜಪತ್‌ರಾಯ್ ಅವರು 1920 ರಲ್ಲಿ ಹಿಂದೂಗಳು ಮತ್ತು ಮುಸಲ್ಮಾನರು ಸೌಹಾರ್ದಯುತವಾಗಿ ಬದುಕಲಾಗುವುದಿಲ್ಲ ಎಂದೇ ಪ್ರತಿಪಾದಿಸಿದ 13 ಲೇಖನಗಳನ್ನು ಯಾಕೆ ಬರೆದರು; ಯಾಕೆ ಅದೇ ಸಂದರ್ಭದಲ್ಲಿ ಅವರು ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಬೇಕೆಂದರು; 1930 ರಲ್ಲಿ ಮಹಾತ್ಮ ಗಾಂಧಿಗೆ ಪತ್ರ ಬರೆದ ಲಾಲಾ ಲಜಪತ್‌ರಾಯ್ ಅವರು ಅದರಲ್ಲಿ ದೇಶವನ್ನು ವಿಭಜಿಸಬೇಕೆಂದು ಯಾಕೆ ಸಲಹೆ ನೀಡಿದ್ದರು; ಹಿಂದೂ ಮಹಾಸಭಾದ ಅಧ್ಯಕ್ಷನಾಗಿದ್ದ ಭಾಯ್ ಪರಮಾನಂದ 1933 ರಲ್ಲಿ ಯಾವ ಕಾರಣಕ್ಕೆ ಹಿಂದೂಗಳು ಬ್ರಿಟಿಷರೊಂದಿಗೆ ಶಾಮೀಲಾಗಿ ಮುಸಲ್ಮಾನರನ್ನು ಮಟ್ಟಹಾಕಬೇಕೆಂದು ಯಾಕೆ ಕರೆ ಕೊಟ್ಟಿದ್ದ; 1937ರಲ್ಲಿ ಅಜ್ಮೇರಾದಲ್ಲಿ ನಡೆದ ಹಿಂದೂ ಮಹಾಸಭಾದ ಸಮ್ಮೇಳನ ಹಿಂದೂ ಮತ್ತು ಮುಸಲ್ಮಾನರು ಪ್ರತ್ಯೇಕ ರಾಷ್ಟ್ರಗಳು ಎಂಬ ನಿರ್ಣಯವನ್ನು ಯಾಕೆ ಅಂಗೀಕರಿಸಿತ್ತು ಎಂದೆಲ್ಲ ಸಿಂಗ್ ಅವರು ಸಂಶೋಧಿಸಿದರೆ ಹಿಂದೂ ಮಹಾಸಭಾದ ಇಂತಹ ಕೃತ್ಯಗಳಿಂದಾಗಿಯೇ ಮುಸಲ್ಮಾನರು ಜಿನ್ನಾ ನೇತೃತ್ವದಲ್ಲಿ ಪ್ರತ್ಯೇಕ ದೇಶದ ಬೇಡಿಕೆ ಮುಂದಿಟ್ಟರು ಎಂದು ಅರ್ಥವಾಗುತ್ತದೆ. ಅಷ್ಟೇ ಅಲ್ಲ, ಭಾರತದ ವಿಭಜನೆಗೆ ಜಿನ್ನಾ, ಗಾಂಧಿ, ನೆಹರೂ ಇತ್ಯಾದಿ ನಾಯಕರಿಗಿಂತಲೂ ಮೂಲ ಕಾರಣವಾಗಿದ್ದೇ ಹಿಂದೂತ್ವವಾದಿಗಳು ಎಂಬುದೂ ಅರ್ಥವಾಗುತ್ತದೆ.


ಈಗಾಗಲೇ ಜಸ್ವಂತ್ ಸಿಂಗ್ ಅವರು "ಏನಿದು ಹಿಂದೂತ್ವ? ಹೀಗೆ ಹಿಂದೂತ್ವ, ಹಿಂದೂತ್ವ ಎಂದು ಬಾಯಿ ಬಡಿದುಕೊಂಡಿದ್ದಕ್ಕೆ ಚುನಾವಣೆಗಳಲ್ಲಿ ಬಜೆಪಿ ಸೋತಿತು" ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವತ್ತು ಅದೇ ಹಿಂದೂತ್ವವಾದಿಗಳಾದ ಬಜೆಪಿ, ಆರೆಸ್ಸೆಸ್, ವಿಶ್ವ ಹಿಂದೂ ಪರಿಷತ್ತಿನ ಕೋಮುವಾದಕ್ಕೆ ಅವರೇ ಬಲಿಯಾಗಿದ್ದಾರೆ. ಇದು ಬಜೆಪಿಯ ನಾಯಕರಲ್ಲದೆ, ಅದನ್ನು ಬೆಂಬಲಿಸುವ ಜನರಿಗೂ ಪಾಠವಾಗಬೇಕಿದೆ. ಅವರ ಕಣ್ಣು ತೆರೆಸುವಂತಾಗಬೇಕಿದೆ...

# ಸತ್ಯ ಹೇಳಿದವರಿಗೆ ಬಿಜೆಪಿಯಲ್ಲಿ ಉಳಿಗಾಲವಿಲ್ಲ

ಮೊಹಮ್ಮದ್ ಅಲಿಜಿನ್ನಾ ಅಪ್ಪಟ ಧರ್ಮನಿರಪೇಕ್ಷರಾಗಿದ್ದರು, ಜಾತ್ಯತೀತವಾದಿಯಾಗಿದ್ದರು ಹಾಗೂ ದೇಶವನ್ನು ವಿಭಜಿಸಿದ್ದು ಜಿನ್ನಾ ಅಲ್ಲ, ಬದಲಿಗೆ ಜವಾಹರಲಾಲ್ ನೆಹರೂ ಎಂಬಂತಹ ಮಾತುಗಳನ್ನು ತಮ್ಮ **Jinnah -India: Partition, Independence** ಎಂಬ ಪುಸ್ತಕದಲ್ಲಿ ಮಾಜಿ ವಿದೇಶಾಂಗ ಸಚಿವ ಮತ್ತು ಬಿಜೆಪಿಯ ಹಿರಿಯ ನಾಯಕ ಜಸ್ವಂತ್ ಸಿಂಗ್ ಅವರು ಬರೆಯುವ ಮೂಲಕ ಮತ್ತೆ ಸಂಘಪರಿವಾರದ ವಲಯದಲ್ಲಿ ಬಿರುಗಾಳಿ ಎಬ್ಬಿಸಿದ್ದಾರೆ. ಬಿಜೆಪಿಯ ಮತ್ತು ಆರ್‌ಎಸ್‌ಎಸ್‌ನ ಹಿರಿಯ ನಾಯಕರು ಹಾಗೂ ಶಿವಸೇನೆಯ ಬಾಳ ಠಾಕ್ರೆಯಾದಿಯಾಗಿ ಎಲ್ಲರೂ ಈಗ ಸಿಂಗ್ ಮೇಲೆ ಆಳಿಗೊಂದು ಕಲ್ಲೆಸೆಯುತ್ತಿದ್ದಾರೆ.




ಜಿನ್ನಾ ಮುಸ್ಲಿಂ ಮತಾಂಧ, ಭರತಖಂಡವನ್ನು ಹಿಂದೂಸ್ತಾನ ಮತ್ತು ಪಾಕಿಸ್ತಾನ ಎಂದು ಇಬ್ಭಾಗ ಮಾಡಿದ ದ್ರೋಹಿ ಎಂದೆಲ್ಲಾ ಜಿನ್ನಾನನ್ನು ರಾಕ್ಷಸನಂತೆ ಚಿತ್ರಿಸಿರುವ ಬಿಜೆಪಿ ಮತ್ತು ಸಂಘಪರಿವಾರಿಗಳಿಗೆ ಖುದ್ದು ಬಿಜೆಪಿಯ ಹಿರಿಯ ನಾಯಕ ಸಿಂಗ್ ಅವರ ಮಾತುಗಳು ಹೊಟ್ಟೆಯಲ್ಲಿ ಕಿಚ್ಚು ಹೊತ್ತಿಸಿರುವುದು ಆಶ್ಚರ್ಯವಿಲ್ಲ. ಶಿಮ್ಲಾದಲ್ಲಿ ಪ್ರಾರಂಭವಾದ ಮೂರು ದಿನಗಳ ಚಿಂತನಾಬೈಠಕ್‌ನಲ್ಲಿ ಈ ಬಗ್ಗೆ ಭಾರೀ ಚರ್ಚೆ ನಡೆದು ಅಂತಿಮವಾಗಿ ಸಿಂಗ್‌ರನ್ನು ಪಕ್ಷದಿಂದ ಹೊರದಬ್ಬುವ ನಿರ್ಣಯ ಕೈಗೊಳ್ಳಲಾಗಿದೆ. ವಾಸ್ತವದಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಿನ್ನಾ ಕುರಿತ ಸತ್ಯಾಂಶಗಳನ್ನು ಹೇಳಿದ್ದಕ್ಕೆ ಬಲಿಪಶುವಾಗುತ್ತಿರುವ ಅತಿದೊಡ್ಡ ನಾಯಕರಲ್ಲಿ ಸಿಂಗ್ ಎರಡನೆಯವರು. ಈ ಹಿಂದೆ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದ ಲಾಲ್‌ಕೃಷ್ಣ ಅಡ್ವಾಣಿ ಕೂಡ ಪಾಕಿಸ್ತಾನಕ್ಕೆ ಹೋಗಿ ಜಿನ್ನಾ ಅವರ ಧರ್ಮನಿರಪೇಕ್ಷತೆ ಮತ್ತು ಜಾತ್ಯತೀತತೆಯನ್ನು ಕೊಂಡಾಡಿದ್ದರು.



ಆಗ ಪ್ರವೀಣ್ ತೊಗಾಡಿಯರಂಥ ವಿಹೆಚ್‌ಪಿ ನಾಯಕರಾದಿಯಾಗಿ 'ಅಡ್ವಾಣಿ ಪಾಕಿಸ್ತಾನದಲ್ಲಿ ಬಿರಿಯಾನಿ ತಿಂದು ಮೈಮರೆತು ಮಾತಾಡಿದ್ದಾರೆ' ಎಂದು ಅರಚಾಡಿದರು. ಅಲ್ಲದೇ ಅಡ್ವಾಣಿ ಭಾರತಕ್ಕೆ ಮರಳಿದ ಮೇಲೆ ಅವರು ಮಾಡಿದ 'ತಪ್ಪಿಗಾಗಿ' ಆರೆಸ್ಸೆಸ್ ಅವರನ್ನು ಬಿಜೆಪಿ ಅಧ್ಯಕ್ಷ ಸ್ಥಾನದಿಂದಲೇ ಕಿತ್ತೆಸೆದು ರಾಜನಾಥ್ ಸಿಂಗ್ ಅವರನ್ನು ಕೂರಿಸಿತ್ತು. ಈಗ ಜಸ್ವಂತ್ ಸಿಂಗ್ ಸರದಿ.

ವಾಸ್ತವದಲ್ಲಿ ಸಂಘಪರಿವಾರಿಗಳು, ಸಂಘಪರಿವಾರದ ಹಿಂದೂತ್ವ ಎಂಬ ನಂಜಿನ ಸಿದ್ಧಾಂತದ ಅಮಲೇರಿಸಿಕೊಂಡಿರುವ ಚರಿತ್ರೆಕಾರರು ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಮಹಮ್ಮದ್ ಅಲಿಜಿನ್ನಾ ಅವರನ್ನು ಒಬ್ಬ ರಾಕ್ಷಸನಂತೆ ಚಿತ್ರಿಸಿದ್ದಾರೆ. ಯಾಕೆಂದರೆ ಅವರೊಬ್ಬ ಮುಸ್ಲಿಮರಾಗಿದ್ದರು. ಚರಿತ್ರೆಯನ್ನು ಯಾವ ಪೂರ್ವಾಗ್ರಹವೂ ಇಲ್ಲದೆಯೇ ವಸ್ತುನಿಷ್ಠವಾಗಿ ಅವಲೋಕಿಸಿದರೆ ಜಿನ್ನಾ ಧರ್ಮನಿರಪೇಕ್ಷರಾಗಿದ್ದುದು, ಜಾತ್ಯತೀತವಾದಿಯಾಗಿದ್ದುದು ಬಿಳಿಹಾಳೆಯಷ್ಟೇ ಸತ್ಯವಾಗಿ ಕಾಣುತ್ತದೆ.



ಭರತಖಂಡವನ್ನು ಹಿಂದೂಸ್ತಾನ ಮತ್ತು ಪಾಕಿಸ್ತಾನ ಎಂದು ಇಬ್ಭಾಗ ಮಾಡಿದ್ದರ ವಿಚಾರಕ್ಕೆ ಬಂದರೆ ಅಲ್ಲೂ ಈ ಅಂಶ ಎದ್ದುಕಾಣುತ್ತದೆ. ಅಸಲಿಗೆ ಇಂಥ ಒಂದು ಇಬ್ಭಾಗವನ್ನು ಮೊಟ್ಟಮೊದಲು ಪ್ರತಿಪಾದಿಸಿದ್ದು ಜಿನ್ನಾ ಅಲ್ಲ, ಆರೆಸ್ಸೆಸ್‌ನ ಬೃಹತ್‌ನಾಯಕ ಗೋಳ್ವಾಲ್ಕರ್ ಎಂಬ ಅಸಲೀಯತ್ತು ಬಹಳ ಜನಕ್ಕೆ ಗೊತ್ತಿಲ್ಲ. ಈ ಸತ್ಯಾಂಶವನ್ನು ಆಳವಾದ ಗುಂಡಿ ತೋಡಿ ಮುಚ್ಚಿಡಲಾಗಿದೆ.

1953ರಲ್ಲಿ ಬ್ರಿಟಿಷರು ಭಾರತ ಸರ್ಕಾರ ಕಾಯಿದೆ ಜಾರಿಗೆ ತಂದರು. ಇದರ ಪ್ರಕಾರ ಮೊಟ್ಟಮೊದಲಿಗೆ ಬ್ರಿಟಿಷ್ ಚಕ್ರಾಧಿಪತ್ಯದೊಳಗೇ ಪ್ರಾಂತೀಯ ಕೌನ್ಸಿಲ್‌ಗಳಿಗಾಗಿ ಚುನಾವಣೆಗಳು ನಡೆದವು. ಇದೇ ಸಂದರ್ಭದಲ್ಲೇ ಭವಿಷ್ಯದ ಭರತಖಂಡದ ಸ್ವರೂಪ ಹೇಗಿರುತ್ತದೆ ಎಂಬ ಚರ್ಚೆಗಳು, ವಾಗ್ವಾದಗಳು ನಡೆದವು. ಭಾರತ ಒಂದು ಏಕಾಧಿಪತ್ಯ ರಾಷ್ಟ್ರವಾಗಬೇಕು ಎಂಬುದನ್ನು ದೇಶದ ಅತಿದೊಡ್ಡ ಉದ್ಯಮಿಯಾಗಿದ್ದ ಬಿರ್ಲಾ ಬಲವಾಗಿ ಪ್ರತಿಪಾದಿಸಿದ. ಅದಕ್ಕೆ ಆತನ ಬಿಸಿನೆಸ್ ಹಿತಾಸಕ್ತಿಗಳು ಪ್ರಧಾನವಾಗಿ ಕಾರಣವಾಗಿದ್ದವು. ಇಡೀ ಭರತಖಂಡ ಆತನ ವ್ಯಾಪಾರದ ಮಾರುಕಟ್ಟೆಯಾಗಿ ಸಿಗುತ್ತಿದ್ದುದರಿಂದಲೇ ಇಂತಹುದ್ದೊಂದು ಪ್ರಸ್ತಾಪವನ್ನು ಬಿರ್ಲಾ ಮುಂದಿಟ್ಟಿದ್ದರು. ಇದೇ ಸಂದರ್ಭದಲ್ಲಿ ಜಿನ್ನಾ ಕೂಡ ಭರತಖಂಡ ಏಕಾಧಿಪತ್ಯ ಆಡಳಿತ ಹೊಂದಬೇಕು ಎಂದೇ ಪ್ರತಿಪಾದಿಸಿದರು. ಆದರೆ, ಜಿನ್ನಾ ಅವರ ಹಿತಾಸಕ್ತಿಗಳು ಬಿರ್ಲಾನ ಹಿತಾಸಕ್ತಿಗಳಿಗಿಂತ ಭಿನ್ನವಾಗಿದ್ದವು. ಇಡೀ ದೇಶದಲ್ಲಿ ಹಿಂದೂಗಳು ಬಹುಸಂಖ್ಯಾತರಾಗಿರುವುದರಿಂದ ಭವಿಷ್ಯದ ಭಾರತ ಸರ್ಕಾರ ಹಿಂದೂ ಸರ್ಕಾರವಾಗಿ ರೂಪುಗೊಂಡರೆ ದೇಶದೊಳಗಿರುವ ಮುಸ್ಲಿಂ ಅಲ್ಪಸಂಖ್ಯಾತರು ದಬ್ಬಾಳಿಕೆಗೊಳಗಾಗಬೇಕಾಗುತ್ತದೆಂಬ ಆತಂಕ ಜಿನ್ನಾಗಿದ್ದರೂ ಏಕಾಧಿಪತ್ಯ ಆಡಳಿತವನ್ನು ಅವರು ಪ್ರತಿಪಾದಿಸಿದರು. ಆದರೆ, ಅಂಥ ಆಡಳಿತದೊಳಗೆ ಮುಸ್ಲಿಂ ಅಲ್ಪಸಂಖ್ಯಾತರೂ ಸರಿಸಮನಾಗಿ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನು ಅನುಭವಿಸುವುದಕ್ಕೆ ಅವಕಾಶವಿರುವಂಥ ಏಕಾಧಿಪತ್ಯ ರಾಷ್ಟ್ರ ನಿರ್ಮಾಣವಾಗಬೇಕು ಎಂಬುದು ಅವರ ನಿಲುವಾಗಿತ್ತು. ಈ ಹಿನ್ನೆಲೆಯಲ್ಲೇ, ಪಂಜಾಬ್ ಮತ್ತು ಬಂಗಾಳಗಳಲ್ಲಿ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿರುವುದರಿಂದ ಆ ಪ್ರಾಂತ್ಯಗಳಿಗೆ ಸ್ವಾಯತ್ತ ಸ್ಥಾನಮಾನ ಕೊಡಬೇಕೆಂದು ಅವರು ಬಯಸಿದ್ದರು. ಅಂದರೆ, ಸ್ವಾಯತ್ತ ಪ್ರಾಂತ್ಯಗಳಿರುವ ಏಕಾಧಿಪತ್ಯ ಆಡಳಿತ ಹೊಂದಿರುವ ಭರತಖಂಡ ಜಿನ್ನಾ ಅವರ ಕನಸಾಗಿತ್ತು. ಆದರೆ, ಅಷ್ಟು ಹೊತ್ತಿಗಾಗಲೇ ಹಿಂದೂತ್ವದ ವಿಷಕಾರಿ ಸಿದ್ಧಾಂತವನ್ನು ನೆತ್ತಿಗೇರಿಸಿಕೊಂಡಿದ್ದ ಸಾವರ್ಕರ್ ಇಡೀ ಭರತಖಂಡ ಹಿಂದೂಗಳದ್ದು ಎಂಬುದನ್ನು ಪ್ರತಿಪಾದಿಸುತ್ತಾ ದೊಡ್ಡ ಪ್ರಮಾಣದ ಅಭಿಪ್ರಾಯದ ಅಲೆ ಎಬ್ಬಿಸಿದ್ದರು. 1938ರಲ್ಲಿ ಗೋಳ್ವಾಲ್ಕರ್ ಕೂಡ "ಇಡೀ ಭರತಖಂಡ ಹಿಂದೂ ದೇಶವಾಗಿರುತ್ತದೆ. ಅದಕ್ಕೆ ಒಪ್ಪಿಗೆಯಿಲ್ಲದಿದ್ದರೆ ಮುಸ್ಲಿಮರು ಪ್ರತ್ಯೇಕ ದೇಶವನ್ನು ರಚಿಸಿಕೊಳ್ಳಲಿ" ಎಂದು ಬಲವಾಗಿ ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಅಂಬೇಡ್ಕರ್ ಕೂಡ ಬಹಳ ಮುಂದಾಲೋಚನೆಯಿಂದ ಭವಿಷ್ಯದ ಭಾರತವನ್ನು ಕಲ್ಪಿಸಿಕೊಂಡಿದ್ದರು. ಭವಿಷ್ಯದ ಭಾರತ ಬ್ರಾಹ್ಮಣ್ಯವಾದಿಗಳ ಕಪಿಮುಷ್ಟಿಯಲ್ಲಿರುವ ದಲಿತ ವಿರೋಧಿ ಭಾರತವಾಗುತ್ತದೆ ಎಂಬ ಆತಂಕ ಅವರನ್ನು ಸದಾ ಕಾಡುತ್ತಲೇ ಇತ್ತು. ಹಾಗಾಗಿಯೇ ದಲಿತರ ಹಿತಾಸಕ್ತಿಗಳನ್ನು, ಅವರ ಹಕ್ಕು ಸ್ವಾತಂತ್ರ್ಯಗಳನ್ನು ಖಾತ್ರಿಗೊಳಿಸುವುದಕ್ಕಾಗಿ ಅವರಿಗೆ ಪ್ರತ್ಯೇಕ ಮೀಸಲಾತಿ, ಪ್ರತ್ಯೇಕ ಸಂಸದೀಯ ಕ್ಷೇತ್ರಗಳು ಇರಬೇಕು ಎಂದು ವಾದಿಸುತ್ತಿದ್ದರು. ತದನಂತರದ ದಿನಗಳಲ್ಲಿ ಸಂಘಪರಿವಾರ ಹಚ್ಚಿದ ಕೋಮುದಳ್ಳುರಿಯಿಂದಾಗಿ ಭರತಖಂಡದಲ್ಲಿ ಹಿಂದೂ-ಮುಸ್ಲಿಮರು ಒಂದಾಗಿ ಬದುಕಲಾರದ ಪರಿಸ್ಥಿತಿ ಸೃಷ್ಟಿಯಾಯಿತು. ಈ ಎರಡೂ ಕೋಮುಗಳಿಗೆ ಸಾಮಾನ್ಯ ಶತ್ರುವಾಗಿದ್ದ ಬ್ರಿಟಿಷರನ್ನು ಒದ್ದೋಡಿಸುವುದಕ್ಕೆ ಎರಡೂ ಸಮುದಾಯಗಳು ಒಗ್ಗಟ್ಟಿನಿಂದ ಹೆಗಲಿಗೆ ಹೆಗಲು ಕೊಟ್ಟು ಹೋರಾಡಿದ್ದರೂ ಸ್ವತಂತ್ರ ಭಾರತದಲ್ಲಿ ಅಷ್ಟೇ ಒಗ್ಗಟ್ಟು ಮತ್ತು ಸಾಮರಸ್ಯದಿಂದ ಬದುಕುವ ವಾತಾವರಣವನ್ನು ಹಾಳುಗೆಡವಿದ್ದು ಇದೇ ಸಂಘಪರಿವಾರದ ಶಕ್ತಿಗಳು. ಇದು ದೇಶ ಇಬ್ಭಾಗಕ್ಕೂ ಕಾರಣವಾಯಿತು. ಮುಸ್ಲಿಮರು ಪ್ರಧಾನ ಜನಸಂಖ್ಯೆಯಾಗಿರುವ (ಭರತಖಂಡದ ವಾಯುವ್ಯ ಭಾಗ ಹಾಗೂ ಪೂರ್ವ ಬಂಗಾಳ) ಪಾಕಿಸ್ತಾನವೆಂತಲೂ ಉಳಿದ ಭಾಗ ಹಿಂದೂಸ್ತಾನವೆಂತಲೂ ಇಬ್ಭಾಗವಾಯಿತು. ಆದರೆ, ಈ ಅಸಲೀಯತ್ತನ್ನು ಕೇಳುವುದಕ್ಕೆ, ವಾಸ್ತವಾಂಶಗಳನ್ನು ನೋಡುವುದಕ್ಕೆ ಸಂಘಪರಿವಾರಿಗಳು ಸಿದ್ಧರಿಲ್ಲ. ಬದಲಿಗೆ, ಸತ್ಯಾಂಶ ಹೇಳುವವರ ನಾಲಿಗೆ ಕತ್ತರಿಸುವುದಕ್ಕೆ ಪ್ರಯತ್ನಿಸುತ್ತಾರೆ. ಇದರಿಂದ ಸತ್ಯ ಹೇಳುವವನು ಸಾಯುತ್ತಾನೆಯೇ ಹೊರತು ಸತ್ಯವಲ್ಲ. ಮುಂದೊಂದು ದಿನ ಮತ್ತೆ ಅದು ಮುನ್ನೆಲೆಗೆ ಬಂದೇ ಬರುತ್ತದೆ. ■



ಸುತ್ತ ಮುತ್ತ

▶ಕುಮಾರ್ ಬುರಡಿಕಟ್ಟಿ



# ಯಾವ ಪುರುಷಾರ್ಥಕ್ಕಾಗಿ ಈ ಯುದ್ಧ?

ಇಡೀ ವಿಶ್ವದ ಸಂಪತ್ತಿನ ಮೇಲೆ ಆಧಿಪತ್ಯ ಸಾಧಿಸಲು ಹೊರಟಿರುವ ಅಮೆರಿಕವು ಅಫಘಾನಿಸ್ತಾನ ಮತ್ತು ಇರಾಕ್‌ಗಳ ಮೇಲೆ ಅನ್ಯಾಯಯುತ ಯುದ್ಧ ನಡೆಸಿದ್ದು ನಮಗೆಲ್ಲಾ ಗೊತ್ತೇ ಇದೆ. ಹಲವು ವರ್ಷಗಳಿಂದ ಆ ದೇಶಗಳನ್ನು ಆಕ್ರಮಿಸಿಕೊಂಡು ನಿತ್ಯ ಅಮಾಯಕರ ಮಾರಣಹೋಮದಲ್ಲಿ ತೊಡಗಿರುವುದನ್ನೂ ಅನೇಕ ವರದಿಗಳು ಜಗಜ್ಜಾಹೀರುಗೊಳಿಸಿವೆ. ಮೇಲ್ನೋಟಕ್ಕೆ ಅಮೆರಿಕ ಈ ಎರಡೂ ಯುದ್ಧಗಳನ್ನು ಗೆದ್ದಿದೆಯೆಂದೇ ಜಗತ್ತು ಭಾವಿಸಿದ್ದರೂ ವಾಸ್ತವ ಪರಿಸ್ಥಿತಿ ಮಾತ್ರ ಭಿನ್ನವಾಗಿದೆ. ಸಾವಿರಾರು ಇರಾಕಿ ಮತ್ತು ಅಫ್ಘನ್ನರನ್ನು ಕೊಂದು ತನ್ನ ಸೇನೆಯ ಸಾವಿರಾರು ಯೋಧರನ್ನು ಕಳೆದುಕೊಂಡು ಈ ಎರಡು ದೇಶಗಳನ್ನು ಅಮೆರಿಕ ವಶಪಡಿಸಿಕೊಂಡಿರುವುದು ಸತ್ಯ. ಆದರೆ, ಅದಿಷ್ಟೇ ಸಂಪೂರ್ಣ ಸತ್ಯವಲ್ಲ. ಅಫಘಾನಿಸ್ತಾನ ಮತ್ತು ಇರಾಕ್‌ಗಳಿಗೆ ಅಮೆರಿಕ ಸೇನೆ ಕಾಲಿಟ್ಟಂದಿನಿಂದಲೂ ಇರಾಕಿ ಮತ್ತು ಅಫಘನ್ನರು ಗೆರಿಲ್ಲಾ ಮಾದರಿಯ ಯುದ್ಧದ ಮೂಲಕ ಅಮೆರಿಕ ಸೈನ್ಯಕ್ಕೆ ಬೆವರಿಳಿಸುತ್ತಿದ್ದಾರೆ. ಅಮೆರಿಕ ಯುದ್ಧದಲ್ಲಿ ಕಳೆದುಕೊಂಡದ್ದಕ್ಕಿಂತಲೂ ಯುದ್ಧಾನಂತರದಲ್ಲಿ ಇಂಥ ಗೆರಿಲ್ಲಾ ದಾಳಿಯಲ್ಲಿ ಕಳೆದುಕೊಂಡ ಸೈನಿಕರ ಸಂಖ್ಯೆಯೇ ಜಾಸ್ತಿಯಿದೆ.




ಒಂದು ರೀತಿಯಲ್ಲಿ ಅಮೆರಿಕ ಎಂಥ ಪೇಚಿಗೆ ಸಿಕ್ಕಿಹಾಕಿಕೊಂಡಿದೆಯೆಂದರೆ ಏಕಾಏಕಿ ಅಲ್ಲಿಂದ ತನ್ನ ಸೈನ್ಯ ವಾಪಸ್ ಕರೆಸಿಕೊಂಡು ಬಿಟ್ಟರೆ ವಿಶ್ವದ ಬಲಿಷ್ಠ ರಾಷ್ಟ್ರವೆಂದು ಬೀಗುತ್ತಿರುವ ತನಗೆ ಅವಮಾನ. ಅಲ್ಲೇ ಇದ್ದು ಇಸ್ಲಾಮಿಕ್ ಗೆರಿಲ್ಲಾಗಳನ್ನು ಹಿಮ್ಮೆಟ್ಟಿಸಲು ತೊಡಗಿದರೆ ನಿತ್ಯ ಸಾವುನೋವು. ಇಂಥ ಡೋಲಾಯಮಾನ ಪರಿಸ್ಥಿತಿಯಲ್ಲಿ ಇರುವಾಗಲೇ ಅದು ಇನ್ನೊಂದು ಭೀಕರ ಸಮಸ್ಯೆಯಿಂದ ಬಳಲಲಾರಂಭಿಸಿದೆ. ಅದೆಂದರೆ ಅಫಘಾನಿಸ್ತಾನ ಮತ್ತು ಇರಾಕ್‌ಗಳಲ್ಲಿ ಅಮೆರಿಕನ್ ಸೈನಿಕರೇ ಮಾನಸಿಕ ಒತ್ತಡಕ್ಕೆ ಬಲಿಯಾಗಿ ಆತ್ಮಹತ್ಯೆಯಲ್ಲಿ ತೊಡಗಿರುವುದು.

2008ರಲ್ಲಿ ಅಮೆರಿಕನ್ ಸೇನೆಯ ಒಟ್ಟು 143 ಯೋಧರು ಆತ್ಮಹತ್ಯೆಗೆ ಶರಣಾಗಿದ್ದರು. ವಾಷಿಂಗ್ಟನ್ ಪೋಸ್ಟ್ ಎಂಬ ಅಮೆರಿಕದ ಸುಪ್ರಸಿದ್ಧ ಪತ್ರಿಕೆ ವರದಿ ಮಾಡಿರುವಂತೆ ಒಂದೇ ವರ್ಷದಲ್ಲಿ ಇಷ್ಟೊಂದು ಸೈನಿಕರು ಆತ್ಮಹತ್ಯೆ ಮಾಡಿಕೊಂಡಿರುವುದು ಕಳೆದ ಮೂರು ದಶಕಗಳಲ್ಲಿ ಇದೇ ಮೊದಲು. ಇನ್ನೂ ಭೀಕರವಾದದ್ದೆಂದರೆ ಈ ದಾರುಣ ಪರಿಸ್ಥಿತಿಯನ್ನು ತಡೆಯುವುದಕ್ಕಾಗಿ ಅಮೆರಿಕ ಕೋಟ್ಯಂತರ ಡಾಲರ್ ಖರ್ಚು ಮಾಡುತ್ತಿದ್ದರೂ ಯೋಧರ ಆತ್ಮಹತ್ಯೆ ನಿಂತಿಲ್ಲ, ಬದಲಿಗೆ ಇನ್ನೂ ಹೆಚ್ಚಾಗುತ್ತಿದೆ. 2009ರ ಪ್ರಸಕ್ತ ವರ್ಷದಲ್ಲಿ ಈಗ ಎಂಟು ತಿಂಗಳು ಕಳೆದಿವೆ. ಆಗಲೇ 141 ಅಮೆರಿಕನ್ ಸೈನಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿಶೇಷ ಏನು ಗೊತ್ತೆ? ಈ ಎಂಟು ತಿಂಗಳ ಅವಧಿಯಲ್ಲಿ ಇಸ್ಲಾಮಿಕ್ ಗೆರಿಲ್ಲಾಗಳೊಂದಿಗಿನ ಯುದ್ಧದಲ್ಲೂ ಇಷ್ಟು ಸಂಖ್ಯೆಯ ಅಮೆರಿಕನ್ನರು ಸತ್ತಿಲ್ಲ! ಅಂದರೆ, ಅಮೆರಿಕನ್ ಸೈನಿಕರು ಯುದ್ಧದಲ್ಲಿ ಸಾಯುವುದಕ್ಕಿಂತ ಹೆಚ್ಚಾಗಿ ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದಾರೆ. ಈಗ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆ ಎಂದು ಯಾರು ಬೇಕಾದರೂ ಊಹಿಸಬಹುದು.

"ನಿರಂತರವಾಗಿ ನಡೆಯುತ್ತಿರುವ ಈ ಆತ್ಮಹತ್ಯೆಗಳಿಗೆ ಕಾರಣಗಳನ್ನು ಹುಡುಕಿ ಪರಿಹಾರ ಕಂಡುಕೊಳ್ಳುವುದೇ ದೊಡ್ಡ ಸಮಸ್ಯೆಯಾಗಿಬಿಟ್ಟಿದೆ" ಎಂದು ಅಮೆರಿಕ ಸೇನೆಯ ಉಪಮುಖ್ಯಸ್ಥ ಜನರಲ್ ಪೀಟರ್ ಡಬ್ಲ್ಯೂ ಚಿಯರೆಲಿ ಕೈಚೆಲ್ಲಿ ಕುಳಿತಿದ್ದಾರೆ. ರಣರಂಗದಲ್ಲಿ ಹೋರಾಡುತ್ತಿರುವ ಯೋಧರು ಒತ್ತಟ್ಟಿಗಿರಲಿ, ಮೀಸಲು ಪಡೆಯಲ್ಲಿರುವ ಯೋಧರೂ ಗಣನೀಯ ಪ್ರಮಾಣದಲ್ಲಿ ಆತ್ಮಹತ್ಯೆಗಳಿಗೆ ಶರಣಾಗುತ್ತಿದ್ದಾರೆ. ಅಲ್ಲದೇ, ಯುದ್ಧದಲ್ಲಿ ಭಾಗವಹಿಸಿ ವಾಪಸ್ ಮರಳಿದವರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅತ್ತ ಯುದ್ಧದಲ್ಲಿ ಅಮೆರಿಕನ್ ಸೈನಿಕರೂ ಸಾಯುತ್ತಿದ್ದಾರೆ, ಇಸ್ಲಾಮಿಕ್ ಗೆರಿಲ್ಲಾಗಳೂ ಸಾಯುತ್ತಿದ್ದಾರೆ, ಅಮೆರಿಕನ್ ಸೈನಿಕರ ದೌರ್ಜನ್ಯಗಳಿಗೆ ಬಲಿಯಾಗಿ ಅಮಾಯಕ ಅಫಘನ್ ಮತ್ತು ಇರಾಕಿ ಪ್ರಜೆಗಳೂ ಸಾಯುತ್ತಿದ್ದಾರೆ. ಇತ್ತ ಅಮೆರಿಕನ್ ಸೈನ್ಯದೊಳಗೇ ಯೋಧರು ಅತಿಯಾದ ಒತ್ತಡ ಮತ್ತು ಮಾನಸಿಕ ನೋವುಗಳಿಂದ ಬಳಲಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.

ಇಷ್ಟಕ್ಕೂ ಯಾವ ಪುರುಷಾರ್ಥಕ್ಕಾಗಿ ಈ ಯುದ್ಧ? ■



## ಕೃಷ್ಣಪ್ಪ ಭೂಕೊಳ್ಳೆ

# ಮುಂಗಾರು ಮಳೆ ಕೃಷ್ಣಪ್ಪ ಬಡವರ ಸೈಟು ನುಂಗಿದ್ದು

ರೊಕ್ಕದ ಮಳೆಯೇ ಸುರಿದರೂ 'ಮುಂಗಾರು ಮಳೆ' ಕೃಷ್ಣಪ್ಪನವರ ದುಡ್ಡಿನ ದಾಹ ಮಾತ್ರ ತಣಿದಿಲ್ಲ. ಹಾಗೇ ಬಡಬಗ್ಗರು ದಲಿತರ ಆಸ್ತಿಗೆ ಬುಲ್ಡೋಜರ್ ನುಗ್ಗಿಸಿ ಬೇಲಿ ಸುತ್ತುವ ತನ್ನ ಹುಟ್ಟುಗುಣವನ್ನು ಕೃಷ್ಣಪ್ಪ ಬಿಟ್ಟೇ ಇಲ್ಲ!

ಅಡಕಮಾರನಹಳ್ಳಿ ಕೃಷ್ಣಪ್ಪ ಅರ್ಥಾತ್ ಮುಂಗಾರು ಮಳೆ ಚಿತ್ರದ ನಿರ್ಮಾಪಕ ಇ. ಕೃಷ್ಣಪ್ಪ ಈಗ ಜೆಡಿಎಸ್ ರಾಜ್ಯ ನಾಯಕ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಯಲಹಂಕದ ನೆಲಗಳ್ಳ ಶಾಸಕ ವಿಶ್ವನಾಥ್ ರೆಡ್ಡಿ ವಿರುದ್ಧ ಕೂದಲೆಳೆಯಲ್ಲಿ ಸೋತ 'ಸೋ' ಕಾಲ್ಡ್ ಜನನಾಯಕ. ಕಾಮಿಡಿ ಗಣೇಶ್‌ನಂಥ ನಟನಿಗೆ ಲೈಫು ಕೊಟ್ಟು ಮುಂಗಾರು ಮಳೆಯಂಥ ಸೂಪರ್ ಹಿಟ್ ಚಿತ್ರವೊಂದೇ ಅವರನ್ನು ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ಕಣ್ಣು ಕುಕ್ಕಿಸುವಷ್ಟು ಕುಬೇರನನ್ನಾಗಿಸಿದ್ದೂ ಅಷ್ಟೇ ಸತ್ಯ. ನಂತರ ಕೃಷ್ಣಪ್ಪ ನಿರ್ಮಿಸಿದ ಮೊಗ್ಗಿನ ಮನಸ್ಸು ಕೂಡ ಹಿಟ್ಟಾಯಿತು. ಗಾಂಧಿನಗರದ ಮಟ್ಟಿಗಷ್ಟೇ ಕೃಷ್ಣಪ್ಪ ಅದೃಷ್ಟವಂತರಲ್ಲ; ಬದಲಿಗೆ ರಿಯಲ್ ಎಸ್ಟೇಟ್ ದಂಧೆಯಲ್ಲೂ ಪಳಗಿದ ಕೈಯೇ!

... ಗಾರ್ಮೆಂಟ್ ಫ್ಯಾಕ್ಟ್ರಿಯಿದೆ. ನರ್ಸರಿ ಮಾಡುತ್ತಾರೆ. ಸಾವಿರಾರು ಜನಕ್ಕೆ ಕೆಲಸ ಕೊಟ್ಟಿದ್ದಾರೆ. ದಾನ ಧರ್ಮದಲ್ಲೂ ಹಿಂದೆ ಬಿದ್ದವರಲ್ಲ. ಹಾಗಿದ್ದೂ ಬಡವರ ಆಸ್ತಿ ಕಬಳಿಸುವ ಬುದ್ಧಿ ಮಾತ್ರ ಈ ಮಟ್ಟಕ್ಕೆ ಬೆಳೆದ ನಂತರವೂ ಬಿಟ್ಟಿಲ್ಲವೆಂದರೆ ಅದನ್ನು ಅವರ ಹುಟ್ಟುಗುಣವೆನ್ನದೇ ವಿಧಿಯೇ ಇಲ್ಲ.

ಅದೂ ಗಾರ್ಮೆಂಟ್ ಕೆಲಸ ಮಾಡಿಯೋ, ಮನೆ ಕೆಲಸದಲ್ಲೋ ಗಳಿಸಿದ ಪುಡಿಕಾಸು ತಂದು ಸೈಟು ಕೊಂಡವರ ಆಸ್ತಿಗೆ ನಾಲಿಗೆ ಚಾಚುವಂಥ ಕೃಷ್ಣಪ್ಪನವರ ಬುದ್ಧಿಗೆ ಏನೆನ್ನಬೇಕು?

ಅಷ್ಟಕ್ಕೂ ಅಡಕಮಾರನಹಳ್ಳಿಯ ಕೃಷ್ಣಪ್ಪನವರ ಬಂಗಲೆಯ ಮುಂದೆ ನಿಂತು ಎದೆಬಡಿದುಕೊಳ್ಳುತ್ತಿರುವವರೆಲ್ಲ ಯಲಹಂಕದ ಮತದಾರರೆ. ಕೃಷ್ಣಪ್ಪನವರ ಬೇರೆಲ್ಲ ಭೂಕಬಳಿಕೆಗಳನ್ನು ಒತ್ತಟ್ಟಿಗಿಟ್ಟು ನೋಡಿದರೂ ಇದು ತೀರ ಅಸಹ್ಯ ಹುಟ್ಟಿಸುವ ಭೂ ದಬ್ಬಾಳಿಕೆಯೆ. ಇಲ್ಲಿ ಕೃಷ್ಣಪ್ಪ ಬಳಸಿಕೊಳ್ಳುತ್ತಿರುವಾಕೆ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯ ಗೌಡಹಳ್ಳಿಯ ಕೃಷ್ಣೇಗೌಡರ ಪತ್ನಿ ದಾಕ್ಷಾಯಣಮ್ಮ.

ಇವತ್ತು ಸೈಟಿಗಾಗಿ ಎದೆ ಬಡಿದುಕೊಳ್ಳುತ್ತಿರುವ ಬಹುತೇಕ ಮಂದಿ ಸೈಟು ಖರೀದಿಸಿದ್ದು ಈಕೆಯಿಂದಲೇ. ದಾಕ್ಷಾಯಣಮ್ಮ ಮತ್ತು ಆಕೆಯ ಅಣ್ಣಂದಿರಾದ ಹನುಮಂತೇಗೌಡ ಮತ್ತು ಕೆಂಪೇಗೌಡರಿಗೆ ಬೆಂಗಳೂರು ಉತ್ತರ ತಾಲ್ಲೂಕು ದಾಸನಪುರ ಹೋಬಳಿಯ ಗೌಡಹಳ್ಳಿಯಲ್ಲಿ ಮೂರೆಕರೆಯಷ್ಟು ಪಿತ್ರಾರ್ಜಿತ ಆಸ್ತಿಯಿತ್ತು. ತಲಾ ಒಂದೆಕರೆಯಂತೆ ಮೂವರೂ ಹಂಚಿಕೊಂಡು ಅದರಲ್ಲೇ ಸೈಟುಗಳನ್ನು ವಿಂಗಡಿಸಿದ್ದಾರೆ. ಈ ಪೈಕಿ ದಾಕ್ಷಾಯಣಮ್ಮನಿಂದ ಸೈಟು ಕೊಂಡವರು ದೀಪ್ತಿ ಶೆಟ್ಟಿ, ಸರೋಜಿನಿ, ಲಕ್ಷ್ಮಿ, ನಗೀನಾ ಮತ್ತು ಸರಸ್ವತಿ. ಪುರುಷೋತ್ತಮ್ ಎಂಬ ಆಟೋ ಚಾಲಕನನ್ನು ಬಿಟ್ಟರೆ ಮಿಕ್ಕೆಲ್ಲರೂ ಹೊಟ್ಟೆಬಟ್ಟೆಗೆ ತಟ್ಟಾಡುವ ನಿಷ್ಪಾಪಿ ಗೃಹಿಣಿಯರೆ. ಕೆಲವರದು ಗಾರ್ಮೆಂಟ್ ಕೆಲಸವಾದರೆ ಮಿಕ್ಕವರು ಮನೆಕೆಲಸದವರು.

ಬೆಂಗಳೂರು-ನೆಲಮಂಗಲ ರಸ್ತೆಯಲ್ಲಿ ಅಡಕಮಾರನಹಳ್ಳಿ ದಾಟಿದರೆ ರಾವುತ್ತನಹಳ್ಳಿಯಲ್ಲಿ ಬಲಕ್ಕೆ ಹೊರಳಿದರೆ ಸಿಗುವುದೇ ಕಿತ್ತನಹಳ್ಳಿ. ಅದಕ್ಕೆ ಹೊಂದಿಕೊಂಡಂತೆ ಗೌಡಹಳ್ಳಿಯ ಸ.ನಂ. 71 ಮತ್ತು 72 ರಲ್ಲಿ ವಿಂಗಡಿಸಿದ ಸೈಟುಗಳನ್ನು ದಾಕ್ಷಾಯಣಮ್ಮ ಮತ್ತಾಕೆಯ ಅಣ್ಣಂದಿರು 2001 ರಿಂದಲೇ ಮಾರುತ್ತಾ ಬಂದಿದ್ದಾರೆ. ಇಲ್ಲಿ ದಾಕ್ಷಾಯಣಮ್ಮನ ಸೈಟುಗಳು ಅಣ್ಣಂದಿರಾದ ಹನುಮಂತೇಗೌಡ ಮತ್ತು ಕೆಂಪೇಗೌಡರ ಸೈಟುಗಳ ಮಧ್ಯಕ್ಕೆ ಬರುತ್ತವೆ. ಈ ಪೈಕಿ 42x40 ಅಳತೆಯ ನಂ. 50 ನೇ ಸೈಟನ್ನು 2006 ರ ಆಗಸ್ಟ್ 28 ರಂದು ದಾಕ್ಷಾಯಣಮ್ಮನಿಂದ ಮಹಾಲಕ್ಷ್ಮಿಲೇಔಟಿನ ಸರಸ್ವತಿ ಎಂಬುವವರು ಖರೀದಿಸಿದ್ದಾರೆ.

**ಬಡವರ ಸೈಟಲ್ಲೇ ಮುಂಗಾರು ಮಳೆ?**

ಮೊದಮೊದಲು ಸ್ಥಳಕ್ಕೆ ಕರೆದೊಯ್ದು ವಿಂಗಡಿಸಿದ ಸೈಟುಗಳನ್ನು ತೋರಿಸಿ ಬೆಂಗಳೂರು ಉತ್ತರ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಸರಸ್ವತಿಯವರ ಹೆಸರಿಗೆ ರಿಜಿಸ್ಟರ್ ಮಾಡಿಸಿ ಕೊಟ್ಟ ದಾಕ್ಷಾಯಣಮ್ಮ ನಗೀನಾ, ದೀಪ್ತಿ ಶೆಟ್ಟಿ, ಲಕ್ಷ್ಮಿ, ಸರೋಜಿನಿ ಮತ್ತು ಪುರುಷೋತ್ತಮ್ ಇದೇ ರೀತಿ ದುಡ್ಡು ಪಡೆದು ಬಿಕರಿ ಮಾಡಿದ್ದಾಳೆ. ಹಾಗೇ ಅಣ್ಣಂದಿರಾದ ಹನುಮಂತೇಗೌಡ ಮತ್ತು ಕೆಂಪೇಗೌಡರಿಂದಲೂ ಜನ ಸೈಟು ಖರೀದಿಸಿದ್ದಾರೆ. ಇಂಥ ರೆವಿನ್ಯೂ ಸೈಟುಗಳ ಲೇಔಟ್ ಪ್ಲಾನಿಗೆ ಗೌಡಳ್ಳಿ ಪಂಚಾಯ್ತಿಯಿಂದ ಅನುಮೋದನೆಯೂ ಸಿಕ್ಕಿದೆ. ಸೈಟು ಖರೀದಿಸಿದ ಜನ ತಲಾ ಸೈಟಿನ ಲೆಕ್ಕಕ್ಕೆ ಏಳೆಂಟು ವರ್ಷಗಳಿಂದ ಕಂದಾಯ ಕಟ್ಟಿಕೊಂಡೇ ಬಂದಿದ್ದಾರೆ. ಬೆಂಗಳೂರನ್ನು ಆ ಮಟಕ್ಕೆ ಬೆಳೆಯದೇ ಇರುವುದರಿಂದ ಇವತ್ತಲ್ಲ ನಾಳೆ ಮನೆ-ಕಾಂಪೌಂಡು ಕಟ್ಟಿದರಾಯ್ತು ಎಂದು ನೆಮ್ಮದಿಯಿಂದಿದ್ದ ಸೈಟುದಾರರಿಗೆ ಆಘಾತದ ಸುದ್ದಿ ಬಂದದ್ದು ಇಲ್ಲಿಗೆ ಮೂರು ತಿಂಗಳ ಹಿಂದೆ-

ವಿಂಗಡಿಸಿದ್ದ ನೂರಾರು ಸೈಟುಗಳು, ಕಾಂಪೌಂಡುಗಳನ್ನೆಲ್ಲ 'ಮುಂಗಾರು ಮಳೆ' ಕೃಷ್ಣಪ್ಪನವರ ಬುಲ್ಡೋಜರ್‌ಗಳು ರಾತ್ರೋರಾತ್ರಿ ನೆಲಸಮಗೊಳಿಸಿದ್ದವು. ದಾಕ್ಷಾಯಣಮ್ಮನ ಲೇಔಟಿನ ಎರಡೂ ಬದಿಗಿದ್ದ ಆಕೆಯ ಅಣ್ಣಂದಿರು ಜಮೀನನ್ನು ಈ ಹೊತ್ತಿಗಾಗಲೇ ಕೃಷ್ಣಪ್ಪ ಖರೀದಿಸಿದ್ದಾಗಿತ್ತು. ಹಾಗೇ ಅಕ್ಕಪಕ್ಕದ ಜಮೀನನ್ನು ಅಗದೀ ದರಕ್ಕೆ ಖರೀದಿಸಿದ್ದ ಕೃಷ್ಣಪ್ಪ ನಡುವಿದ್ದ ದಾಕ್ಷಾಯಣಮ್ಮನ ಲೇಔಟನ್ನೂ ಆಕ್ರಮಿಸಿಬಿಟ್ಟಿದ್ದ!

ಸೈಟು ಕೊಂಡವರೆಲ್ಲ ದಾಕ್ಷಾಯಣಮ್ಮನನ್ನು ಕಂಡು 'ಏನಿದು ಅನ್ಯಾಯ? ನೀವೇ ಸೈಟು ಮಾರಿದ್ದೂ ಅಲ್ಲದೇ ಈಗ ಅಡಕಮಾರನಹಳ್ಳಿ ಕೃಷ್ಣಪ್ಪನವರನ್ನು ಮುಂದಿಟ್ಟುಕೊಂಡು ಗೂಂಡಾಗಿರಿ ನಡೆಸುತ್ತಿರೋದು ಯಾವ ನ್ಯಾಯ? ಎಂದರೆ ಆಕೆ 'ನನಗೇನೂ ಗೊತ್ತೇ ಇಲ್ಲ-ನೀವುಂಟು ಸೈಟುಂಟು' ಎಂದು ಕೈಚೆಲ್ಲಿಬಿಟ್ಟಳು.

ಇದು ಕೃಷ್ಣಪ್ಪನವರ ಲ್ಯಾಂಡ್ ಗ್ರಾಬಿಂಗ್‌ನ ಒಂದು ಶೈಲಿಯಷ್ಟೇ. ಗೌಡಳ್ಳಿಯ ಸರ್ವೆ ನಂ. 71 ಮತ್ತು 72 ರ ಜಮೀನೂ ಸೇರಿಸಿದಂತೆ ಆಸುಪಾಸಿನ ಬಹುತೇಕ ಭೂಮಿಯನ್ನೆಲ್ಲ ಕೃಷ್ಣಪ್ಪ ಆಕ್ರಮಿಸಿದ್ದಾರೆ. ಈಗಾಗಲೇ ಸೈಟು ವಿಂಗಡಿಸಿ ಮಾರಿದ್ದನ್ನೂ ಲೆಕ್ಕಿಸದೇ, ಕಾನೂನು ರೀತಿ ರಿವಾಜು ಯಾವುದರ ಹಂಗಿಲ್ಲದೇ ಬುಲ್ಡೋಜರ್ ನುಗ್ಗಿಸುವುದು. ಪ್ರಭಾವಿ ವ್ಯಕ್ತಿಗಳಾಗಿದ್ದರೆ ಅಷ್ಟಿಷ್ಟು ಕೊಟ್ಟು ಸಾಗಹಾಕುವುದು. ಬಾಯಿಲ್ಲದವರನ್ನು ಬಡಿದು ಸುಮ್ಮನಾಗಿಸುವುದು ಕೃಷ್ಣಪ್ಪ ಶೈಲಿ. ಇದಕ್ಕೆಂದೇ ನೆಲಮಂಗಲದ ಸುತ್ತ ಹುಟ್ಟಿಕೊಂಡ ಜೆಡಿಎಸ್ ರೌಡಿ ಗ್ಯಾಂಗುಗಳಿವೆ. ಪೊಲೀಸರಂತೂ ಕೃಷ್ಣಪ್ಪನವರ ಪಕ್ಕಾ ಭಕ್ತಾದಿಗಳಾಗಿರುವಾಗ ಜನ ಯಾರಿಗಂಥ ದೂರು ಕೊಡುತ್ತಾರೆ?


ಈಗ ಸೈಟು ಕಳಕೊಂಡವರೆಲ್ಲ ಅಡಕಮಾರನಹಳ್ಳಿಯ ಕೃಷ್ಣಪ್ಪನವರ ಮನೆಯೆದುರು ಜಮಾಯಿಸಿದ್ದಾರೆ. ಕಣ್ಣೀರಿಟ್ಟು ನಮ್ಮ ಸೈಟು ಬಿಟ್ಟುಕೊಡಿ ಎಂದರೆ ಕೃಷ್ಣಪ್ಪ 'ನೀವೆಲ್ಲ ದುಡ್ಡು ಕೊಟ್ಟಿದ್ದು ಯಾರಿಗೆ? ಯಾರಿಂದ ಸೈಟುಕೊಂಡರೋ ಅವರನ್ನೇ ಕೇಳಿ....' ಎಂದು ಸೈಟುದಾರರನ್ನು ಹೊರದಬ್ಬುತ್ತಾರೆ. ದಾಕ್ಷಾಯಣಮ್ಮನನ್ನು ಕೇಳಿದರೆ ಒಮ್ಮೆ ಸೈಟು ಮಾರಿದ ಮೇಲೆ ನೀವುಂಟು ಸೈಟುಂಟು ಅದಕ್ಕೆ ನಾನೇನು ಮಾಡಲಿ....' ಎಂದು ಬಂದವರನ್ನು ಸಾಗಹಾಕುತ್ತಾರೆ. ಅಲ್ಲಿಗೆ ಕೃಷ್ಣಪ್ಪ ಮತ್ತು ದಾಕ್ಷಾಯಣಮ್ಮನ ಅಣ್ಣಂದಿರು ಸೇರಿಕೊಂಡೇ ಸೈಟುದಾರರನ್ನು ವಂಚಿಸಿದಂತಾಯ್ತಲ್ಲವೇ?

'ಮುಂಗಾರು ಮಳೆ' ಕೋಟಿಗಟ್ಟಲೇ ಗಳಿಸಿಕೊಟ್ಟರೂ ನೆಲಕದ್ದೇ ಕೋಟ್ಯಾಧಿಪತಿಯಾದರೂ ಕೃಷ್ಣಪ್ಪ ತನ್ನ ಹುಟ್ಟುಬುದ್ಧಿ ಬಿಟ್ಟಿಲ್ಲ. ತೀರ ನಿರ್ಗತಿಕ ಹೆಂಗಸರ ಸೈಟನ್ನೂ ಬಿಡದೇ ನುಂಗುವಷ್ಟು ಭೂದಾಹವೆ? ಕೃಷ್ಣಪ್ಪ ದುರಾಶೆಗೆ ಅಂಕುಶವಿಡುವವರ್ಯಾರು?

● ವರದಿಗಾರ

# ನಂದಿನಿ ಹಾಲಿನ ಪಾಕೆಟಿಗೆ ಕೃಷ್ಣದೇವರಾಯನ ಮುಳ್ಳು ಮುಖ!

ಇದು ಬಿಜೆಪಿಗಳ ಹೊಸ ಕೋಮುವಾದಿ ಪ್ರೋಗ್ರಾಂ. ನಾಡಿನ ಮನೆಮನೆಯಲ್ಲೂ ಬಳಸುವ ನಂದಿನಿ ಹಾಲಿನ ಪ್ಯಾಕೆಟ್ ಮೇಲೆ ಇನ್ನು ಮುಂದೆ ವಿಜಯನಗರದ ಅರಸನಾಗಿದ್ದ ಕೃಷ್ಣದೇವರಾಯನ ಮುಖ ಕಾಣಿಸಿಕೊಳ್ಳಲಿದೆ. ಹಾಗಂತ ಕೆಎಂಎಫ್‌ನ ಹೊಸ ಅಧ್ಯಕ್ಷ ಸೋಮಶೇಖರ ರೆಡ್ಡಿ ಅನೌನ್ಸ್ ಮಾಡಿದ್ದಾನೆ. ಇದು ಹಾಲನ್ನು ಹಾಲಾಹಲವಾಗಿಸುವ ನೀಚತನ. ಇನ್ನೊಂದು ರೀತಿ ಹೇಳಬೇಕೆಂದರೆ '.... ಚೈಲಿ ಮೀನು ಹಿಡಿಯುವ' ಕೊಲಸು ಬುದ್ಧಿ ಅಂದರೆ ತಪ್ಪಾಗಲಾರದು. ಹಾಗೆ ನೋಡಿದರೆ ಕೃಷ್ಣದೇವರಾಯನಿಗೂ ನಂದಿನಿ ಹಾಲಿಗೂ ನೇರನೇರವಾದ ಯಾವ ಸಂಬಂಧವೂ ಇಲ್ಲ, ಆದರೂ ಈ ರೆಡ್ಡಿಗಳೇಕೆ ಹೀಗೆ ತೆಲುಗು ಮೂಲದ ಕೃಷ್ಣದೇವರಾಯನ ಮುಖವನ್ನು ಹಾಲಿನ ಪ್ಯಾಕೆಟಿನ ಮೇಲೆ ಪ್ರಿಂಟಿಸಲು ಹೊರಟಿದ್ದಾರೆ ಅಂತ ನೋಡಿದರೆ ಅದರಲ್ಲಿ RSS ನ ಚೆಡ್ಡಿಗಳ ಕೈವಾಡ ಕಾಣಿಸುತ್ತದೆ.



ಸೋಮಶೇಖರ ರೆಡ್ಡಿ


### ರೆಡ್ಡಿ ಎಂಬ ದುಡ್ಡಿ

ಸರಿಸುಮಾರು 15 ವರ್ಷ ಕೆಎಂಎಫ್ ಅನ್ನು ಆಳಿದ ಎಚ್.ಡಿ. ರೇವಣ್ಣನನ್ನು ಕೊನೆಗೂ ಅಧ್ಯಕ್ಷಸ್ಥಾನದಿಂದ ಇಳಿಸಿದ ಬಿಜೆಪಿಗಳಿಗೆ ಅದೊಂದರಿಂದಲೇ ತೃಪ್ತಿಯಾಗಿಲ್ಲ. ಕರ್ನಾಟಕದ ಪ್ರತಿಯೊಂದು ವಿದ್ಯಮಾನಗಳಲ್ಲೂ ತಮ್ಮ ಕೋಮುವಾದಿ ಅಜೆಂಡಾ ತುರುಕಲು ಸಂಚು ನಡೆಸುತ್ತಿರುವ ಚೆಡ್ಡಿಗಳು ಕೆಎಂಎಫ್ ಅನ್ನು ಪರೋಕ್ಷವಾಗಿ ತಮ್ಮ ದುರುದ್ದೇಶಕ್ಕಾಗಿ ಈಗ ಬಳಸಿಕೊಳ್ಳಲು ಹೊರಟಿದ್ದಾರೆ.

ಚರಿತ್ರೆ ಕುರಿತ ಬಹುತೇಕ ಬರಹಗಳಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಹಿಂದೂ ಧರ್ಮದ ಉಳಿವಿಗಾಗಿ ಹೋರಾಡಿದ ರಾಜ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಅದೇ ರೀತಿ ಬಹಮನಿ ರಾಜ್ಯದ ಮುಸಲ್ಮಾನ್ ಅರಸರು ಈ ಹಿಂದೂಗಳ ವಿಜಯನಗರವನ್ನು ನಾಶ ಮಾಡಿದರೆಂತಲೂ ವಿವರಿಸಲಾಗುತ್ತಿದೆ. ಈಗಿನಂತೆ ಕೋಮುವಾದಿ ಕಲಹ, ಹಿಂದೂ-ಮುಸ್ಲಿಂ ಎಂಬ ತೀವ್ರ ದ್ವೇಷ ಆಗ ಇರಲಿಲ್ಲ, ಆದರೂ ಇವತ್ತಿನ ಸಂದರ್ಭದಲ್ಲಿ ಕೃಷ್ಣದೇವರಾಯನೆಂದರೆ ಹಿಂದೂ ಧರ್ಮದ ರಕ್ಷಣೆಗಾಗಿ ಹೋರಾಡಿದ ವೀರನೆಂಬಂತೆ ಚಿತ್ರಿಸುವುದು ಸಂಘಪರಿವಾರಿಗಳಿಗೆ ಬೇಕಾಗಿದೆ.

ಇದಲ್ಲದೆ ಕೃಷ್ಣದೇವರಾಯ ಪಟ್ಟಕ್ಕೆ ಬಂದು 500 ವರ್ಷ ಆಯಿತೆಂಬ ಆಚರಣೆ ಮಾಡಲು ಬಿಜೆಪಿ ಸರ್ಕಾರ ಹೊರಟಿದೆ. ಆ ಸಂದರ್ಭದಲ್ಲಿ ನಡೆಯುವ ಸೆಮಿನಾರು, ಚರ್ಚೆಗಳಲ್ಲಿ ಮುಸ್ಲಿಮರು ವಿಜಯನಗರವನ್ನು ನಾಶ ಮಾಡಿದರೆಂಬ ಪ್ರಚಾರ ನಡೆಯುವುದಂತೂ ಖಚಿತ. ಹಾಗಾಗಿ ಇವೆರಡೂ ಉದ್ದೇಶ ಬೆರೆಸಿ ನಂದಿನಿ ಹಾಲಿನ ಪ್ಯಾಕೆಟ್ ಮೇಲೆ ಕೃಷ್ಣದೇವರಾಯನ ಮುಳ್ಳು ಮುಖ ಮುದ್ರಿಸಲಾಗುತ್ತಿದೆ.

ಹಿಂದೂತ್ವವಾದಿಗಳ ಕಾರ್ಯಾಚರಣೆ ಹೇಗಿರುತ್ತದೆಂಬುದನ್ನು ನೋಡಲು ಇದೊಂದು ಜೀವಂತ ಉದಾಹರಣೆಯಾಗಿದೆ. ಕೆಎಂಎಫ್‌ನ ನಂದಿನಿ ಹಾಲು ರಾಜ್ಯಾದ್ಯಂತ ಪ್ರತಿದಿನ 23 ಲಕ್ಷ ಲೀಟರಿನಷ್ಟು ಖರ್ಚಾಗುತ್ತಿದೆ. ಇದರಲ್ಲಿ ಅರ್ಧ ಲೀಟರಿನ ಕವರ್, ಒಂದು ಲೀಟರ್‌ನ ಕವರ್ ಅಂತ ಲೆಕ್ಕ ಹಾಕಿದರೆ ದಿನಕ್ಕೆ ಸುಮಾರು ಮೂವತ್ತು ಲಕ್ಷ ಪ್ಯಾಕೆಟುಗಳ ಮೇಲೆ ಹಿಂದೂ ವೀರ ಕೃಷ್ಣದೇವರಾಯನ ಮುಖ ಪ್ರಿಂಟಾಗಲಿದೆ.



ಈ ಹಾಲಿನ ಪ್ಯಾಕೆಟುಗಳು ಹಿಂದೂ-ಮುಸ್ಲಿಂ-ಕ್ರಿಶ್ಚಿಯನ್ ಮಾತ್ರವಲ್ಲ ಬ್ರಾಹ್ಮಣ-ಲಿಂಗಾಯತ-ದಲಿತ ಹೀಗೆ ಎಲ್ಲರ ಮನೆಗಳಿಗೂ ತಲುಪುತ್ತವೆ. ಸಂಘ ಪರಿವಾರದವರಿಗೆ ನಯಾಪೈಸೆ ಖರ್ಚಿಲ್ಲದೆ ತಮ್ಮ ಕೋಮುವಾದಿ ಅಜೆಂಡಾ ಒಂದನ್ನು ಈಡೇರಿಸಿಕೊಳ್ಳುವ ಅವಕಾಶವೂ ಸಿಗಲಿದೆ.

ಈ ಕೃಷ್ಣದೇವರಾಯ ಬೇರೆಲ್ಲಾ ರಾಜರುಗಳಂತೆ ಯುದ್ಧಗಳನ್ನು ಮಾಡಿ, ಹಿಂದೂ ರಾಜ ಮುಸ್ಲಿಂ ರಾಜನೆಂಬ ಭೇದ ತೋರದೆ ರಾಜ್ಯವಿಸ್ತಾರ ಮಾಡಿದವನು. ಅಸಲಿಗೆ ಅವನ ಆಸ್ಥಾನ ಭಾಷೆ ತೆಲುಗೇ ವಿನಃ ಕನ್ನಡವಾಗಿರಲಿಲ್ಲ, ಅವನೆಂದೂ ಹಸು ಸಾಕಿದವನಲ್ಲ, ಯಾವ ರೈತನಿಗೂ ಒಂದು ಲೀಟರ್ ಹಾಲು ಹಾಕಿದವನಲ್ಲ, ಅವನೇನು ಅಮೂಲ್ ಸಂಸ್ಥೆ ಬೆಳೆಸಿದ ಕುರಿಯನ್ ತರದ ಸಾಧಕನೂ ಆಗಿರಲಿಲ್ಲ, ಕೃಷ್ಣದೇವರಾಯನಂತಹ ಅನೇಕ ಸಾಮಾನ್ಯ ರಾಜರುಗಳು ಕರ್ನಾಟಕದ ಚರಿತ್ರೆಯಲ್ಲಿ ಬೇಕಾದಷ್ಟು ಜನ ಸಿಗುತ್ತಾರೆ. ಅವರನ್ನೆಲ್ಲಾ ಬಿಟ್ಟು ■

# ಹೈಕೋರ್ಟ್ ಥೂ ಎಂದಿತು ಚೆಡ್ಡಿ ಪೋಲೀಸರಿಗೆ....

ಮೈಸೂರು ಗಲಭೆಯ ನೆಪದಲ್ಲಿ ಬಿಜೆಪಿಗಳ ನಿರ್ದೇಶನದಂತೆ 250ಕ್ಕೂ ಹೆಚ್ಚು ಮುಸ್ಲಿಮರನ್ನು ಬಂಧಿಸಿ ಬಳ್ಳಾರಿ, ಗುಲ್ಬರ್ಗಾ, ಬೆಳಗಾವಿ ಜೈಲುಗಳಿಗೆ ಅಟ್ಟಿದ್ದರು ಮೈಸೂರು ಪೋಲೀಸರು. ಬಂಧಿತರಲ್ಲಿ ಬಹುತೇಕರು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಗೆ ಸೇರಿದವರಾಗಿದ್ದರು. ತನ್ನ ಜಾತ್ಯಾತೀತ ನಿಲುವಿನಿಂದ ದಿನೇ ದಿನೇ ಬಲಗೊಳ್ಳುತ್ತಿರುವ ಪಾಪ್ಯುಲರ್ ಫ್ರಂಟ್ ಅನ್ನು ತುಳಿಯಲು ಚೆಡ್ಡಿಗಳು ರೂಪಿಸಿದ ಪ್ಲಾನ್ ಇದಾಗಿತ್ತು.

ಮೊನ್ನೆ ಆಗಸ್ಟ್ 19ರಂದು ಮೈಸೂರು ಪೋಲೀಸರಿಗೆ ಹೈಕೋರ್ಟ್ ಮುಖಕ್ಕೆ ಹೊಡೆದಂತೆ ಉಗಿದು ಎಚ್ಚರಿಕೆ ನೀಡಿದೆ. ಮೈಸೂರಲ್ಲಿ ನಡೆದ ಗಲಭೆಯ ವಿರುದ್ಧ ಪ್ರತಿಭಟಿಸಿದ ಪಾಪ್ಯುಲರ್ ಫ್ರಂಟ್ ಕಾರ್ಯಕರ್ತರನ್ನು ಹೈಕೋರ್ಟ್ ಆದೇಶದ ಹೊರತಾಗಿಯೂ ಬಂಧಿಸಿರುವ ಮೈಸೂರು ಪೋಲೀಸರನ್ನು ಕೋರ್ಟ್ ತರಾಟೆಗೆ ತೆಗೆದುಕೊಂಡುಬಿಟ್ಟಿತು. ಪೊಲೀಸರ ಈ ಕ್ರಮವನ್ನು ಆಕ್ಷೇಪಿಸಿರುವ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರು ಮತ್ತು ಜಾವೇದ್ ರಹೀಂ ಅವರು, ಹೀಗೇ ಮುಂದುವರೆದರೆ ನ್ಯಾಯಾಂಗ ಮೊಕದ್ದಮೆ ಹಾಕಬೇಕಾದೀತು ಎಂದೂ ಮೈಸೂರು ಪೊಲೀಸರಿಗೆ ಎಚ್ಚರಿಕೆ ನೀಡಿದರು.

ಇದೇ ಆಗಸ್ಟ್ 3ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್ ಆರೋಪಿಗಳನ್ನು ಬಿಡುಗಡೆ ಮಾಡುವಂತೆ ಆದೇಶ ಹೊರಡಿಸಿತ್ತು. ಅದರಂತೆ ಬಿಡುಗಡೆ ಮಾಡಿದ ಪೋಲೀಸರು ಮತ್ತೆ ಸುಳ್ಳು ಕೇಸು ಜಡಿದು ಅವರನ್ನು ಬಂಧಿಸಿದ್ದರು. ಈಗ ಆ ಕಾರಣಕ್ಕಾಗಿ ಮತ್ತೆ ಛೀಮಾರಿ ಹಾಕಿಸಿಕೊಂಡಿದ್ದಾರೆ. ಮೈಸೂರಿನ ಚೆಡ್ಡಿ ಪೊಲೀಸರು. ಆರೋಪಿಗಳ ಮೇಲೆ ಇತರ ಕೇಸುಗಳಿದ್ದಲ್ಲಿ ಅವು ಯಾವುವು, ಕೋರ್ಟ್ ಆದೇಶದ ಮೊದಲೇ ಅವನ್ನು ದಾಖಲಾಗಿಸಿತ್ತೇ ಮತ್ತು ಸಂಬಂಧಿತ ಕೋರ್ಟ್ ಅವರನ್ನೆಲ್ಲ ಬಂಧಿಸಲು ಹೇಳಿತ್ತೇ ಎಂಬ ಹೈಕೋರ್ಟ್ ಪ್ರಶ್ನೆಗಳಿಗೆ ಮೈಸೂರು ಎಸ್ಪಿ ಉತ್ತರಿಸಬೇಕಾಗಿದೆ.


ಪಾಪ್ಯುಲರ್ ಫ್ರಂಟ್ ನಿಷೇಧಿಸಿ ಎಂದು ಬಾಯಿ ಬಡಿದುಕೊಳ್ಳುವವರನ್ನೂ ಹೈಕೋರ್ಟಿನ ಈ ಪ್ರಕರಣ ಪರೋಕ್ಷವಾಗಿ ಎಚ್ಚರಿಸಿದೆ!

### ರವಿಕಾಂತೇಗೌಡ್ ವೆಲಕಮ್

ಮೈಸೂರು ನಗರದ ಡಿಸಿಪಿಯಾಗಿ ರವಿಕಾಂತೇಗೌಡರು ಬರುತ್ತಿದ್ದಾರೆ. ಇದು ಮೈಸೂರಿಗರ ಪಾಲಿಗೆ ನಿಜಕ್ಕೂ ಸಂತಸದ ವಿಷಯ. ಸೂಕ್ಷ್ಮ ಮನಸ್ಸಿನ ಜನಪರ ಕಾಳಜಿಯ ರವಿಕಾಂತೇಗೌಡರು ಮೈಸೂರಿನಲ್ಲಿ ಹಾರಾಡುತ್ತಿರುವ ಕೋಮುವಾದಿಗಳ ಅಟ್ಟಹಾಸಕ್ಕೆ ಅಂತ್ಯ ಕಾಣಿಸಲಿ ಎಂದು ರಾಜ್ಯದ ಸಾವಿರಾರು ಪ್ರಜ್ಞಾವಂತರು ನಿರೀಕ್ಷಿಸುತ್ತಿದ್ದಾರೆ. ರವೀಕಾಂತೇಗೌಡರ ಕಾರ್ಯಕ್ಷಮತೆ ಬಲ್ಲವರಿಗೆ ಅಂತಹ ವಿಶ್ವಾಸ ಇದ್ದೇ ಇದೆ.

# ಮೈಸೂರು ಬಿಜೆಪಿ: ಕೊಲ್ಲುವವರೂ ಅವರೇ!

## ಪರಿಹಾರ ಕಬಳಿಸುವವರೂ ಅವರೇ!!



ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ದಿನ ಮೈಸೂರಿನ 'ದೇಶಭಕ್ತ' ಚೆಡ್ಡಿಯೊಬ್ಬ ಜೈಲುಪಾಲಾಗಿದ್ದಾನೆ. ಅವನು ಕ್ಯಾತಮಾರನಹಳ್ಳಿಯ ಬಿಜೆಪಿ ನಾಯಕ ನಾಗೇಶ್. ಗಲಭೆಯಲ್ಲಿ ಚೆಡ್ಡಿಗಳಿಂದ ಕೊಲ್ಲಲ್ಪಟ್ಟ ಅಮಾಯಕ ತಿರುಪತಿಯ ಪತ್ನಿಗೆ ಬಂದ ಪರಿಹಾರದಲ್ಲಿ ಅರ್ಧಕ್ಕರ್ಧವನ್ನು ನುಂಗಿಹಾಕಿದ್ದಾನೆ ಈ ರಾಕ್ಷಸ ನಾಗೇಶ್.

ಅಂದರೆ ಕೊಲ್ಲುವವರೂ ಚೆಡ್ಡಿಗಳೇ, ಪರಿಹಾರ ಮುಕ್ಕುವವರೂ ಚೆಡ್ಡಿಗಳೇ!

ಜುಲೈ 2ರಂದು ಮೈಸೂರಿನ ಕಾತ್ಯಮಾರನಹಳ್ಳಿಯ ಅರೇಬಿಕ್ ಮದರಸಾದೊಳಗೆ ಬೆಳಿಗ್ಗೆ 6-30ರ ಸುಮಾರಿಗೆ ಹಂದಿಯೊಂದರ ರುಂಡ-ಮುಂಡ ಎಸೆದು ಗಲಭೆ ಎಬ್ಬಿಸಿದ್ದರು ಚೆಡ್ಡಿಗಳು. ಚೆಡ್ಡಿಗಳ ಜೊತೆ ಪೊಲೀಸರು ಸೇರಿದ್ದರಿಂದ ಪ್ರತಿಭಟನೆ ಮಾಡಿದ ಮುಸ್ಲಿಮರನ್ನೆಲ್ಲ ಅಟ್ಟಾಡಿಸಿ ಹೊಡೆಯಲಾಗಿತ್ತು.



ಮುಂಜಾನೆ ಹಂದಿ ರುಂಡ ನೋಡಿದ ಮುಸ್ಲಿಮರು ದುಷ್ಕರ್ಮಿಗಳನ್ನು ಬಂಧಿಸುವಂತೆ ಪ್ರತಿಭಟನೆ ನಡೆಸಿದರು. ಮದರಸಾ ಸ್ವಚ್ಛಗೊಂಡ ನಂತರ ಪ್ರತಿಭಟಿಸುತ್ತಿದ್ದ ಮುಸ್ಲಿಮರನ್ನು ಚದುರಿಸಲು ಪೊಲೀಸರು ಅನಗತ್ಯವಾಗಿ ಲಾಠಿಚಾರ್ಜ್ ಶುರು ಮಾಡಿದರು. ಅತ್ತ ಇನ್ನೊಂದು ಕಡೆ ಮೊದಲೇ ಪ್ಲಾನ್ ಮಾಡಿದಂತೆ, ಗೌಸಿಯಾನಗರ, ಶಾಂತಿನಗರ, ವಿನಾಯಕನಗರ, ರಾಜೀವ್‌ನಗರ, ಬೀಡಿ ಕಾಲೋನಿಗಳಲ್ಲಿ ಚೆಡ್ಡಿಗಳು ಮುಸ್ಲಿಮರ ಅಂಗಡಿ, ಮನೆಗಳ ಮೇಲೆ ದಾಳಿ ಮಾಡಿ ಅಮಾಯಕ ಮುಸ್ಲಿಮರನ್ನು ಥಳಿಸತೊಡಗಿದರು. ಇದನ್ನೆಲ್ಲ ಮೂಕಪ್ರೇಕ್ಷಕರಂತೆ ನೋಡುತ್ತಾ ನಿಂತರು ಪೊಲೀಸರು. ಉತ್ತೇಜನಗೊಂಡ ಚೆಡ್ಡಿಗಳು. ಬೈಕ್ ಮೇಲೆ ತನ್ನ ಪಾಡಿಗೆ ತಾನು ಹೋಗುತ್ತಿದ್ದ. ಗೌಸಿಯಾನಗರದ ಲಾರಿ ಡ್ರೈವರ್ ಮುಬಾರಕ್‌ಗೆ ತಲವಾರುಗಳಿಂದ ಥಳಿಸಿ ಕೊಂದರು. ಕನ್ನಡ ಬಾರದ ಆಂಧ್ರಮೂಲದ ತಿರುಪತಿ ಎಂಬಾತ ಈ ಗಲಭೆಕೋರರ ಕೈಗೆ ಸಿಕ್ಕಿಬಿದ್ದ. ಆತ ಹಿಂದಿಯಲ್ಲಿ ಮಾತಾಡಿದ್ದನ್ನು ಕೇಳಿದ ಚೆಡ್ಡಿವೀರರು ಮುಸ್ಲಿಮನೆಂದು ಭಾವಿಸಿ ಇರಿದು ಕೊಂದರು. ಈ ಹತ್ಯೆಗಳ ವಿರುದ್ಧ ಮುಸ್ಲಿಮರು ಬೀದಿಗಿಳಿದು ಪ್ರತಿಭಟನೆ ನಡೆಸಿದರು. ಕಲ್ಲುತೂರಾಟ ಶುರುವಾಯಿತು. ಬೆದರಿಸಿ ಶಾಂತಿ ಕಾಪಾಡಬಹುದಾಗಿದ್ದ ಪೊಲೀಸರು ಥೇಟು ಭಜರಂಗಿಗಳಂತೆ ವರ್ತಿಸುತ್ತಾ ಸಿಕ್ಕಸಿಕ್ಕ ಮುಸ್ಲಿಮರಿಗೆಲ್ಲ ಚಚ್ಚಿದರಲ್ಲದೇ, ಅಶ್ರುವಾಯು ಸಿಡಿಸಿದರು. ಕೊನೆಗೆ ಗುಂಪೊಂದರ ಮೇಲೆ ನೇರವಾಗಿ ಫೈರಿಂಗ್ ಮಾಡಿ ಜುವೈದ್ ಪಾಷಾ ಎಂಬ ಹದಿನಾರರ ಬಾಲಕನನ್ನು ಬಲಿ ತೆಗೆದುಕೊಂಡರು.

ಮುಂದೆ ಹಂದಿರುಂಡ ಎಸೆದಿದ್ದ ಪೇಪರ್ ಕುಮಾರ್ ಮತ್ತು ವೆಂಕಟೇಶ್ ಎಂಬಿಬ್ಬರು ಬಿಜೆಪಿಗಳನ್ನು ನಾಮಕಾವಸ್ತೆ ಬಂಧಿಸಿದ ಪೊಲೀಸರು, ಶಾಂತಿಸ್ಥಾಪನೆಗೆ ಯತ್ನಿಸಿದ ಕೆಎಫ್‌ಡಿ ಸಂಘಟನೆಯ ಸದಸ್ಯರನ್ನು ಜೈಲಿಗೆ ಹಾಕಿದರು. ಕೆಎಫ್‌ಡಿಯೇ ಅಪರಾಧಿ ಎನ್ನುವಂತೆ ಗೃಹಮಂತ್ರಿ, ಶಾಸಕರುಗಳು ಬೊಬ್ಬೆ ಎಬ್ಬಿಸಿದರು.

ಇದಿಷ್ಟು ಹಳೆಯ ಕತೆ. ಮುಂದೆ ತಹಶೀಲ್ದಾರ್ ಗೀತಾಕೃಷ್ಣರವರು ಗಲಭೆಯಲ್ಲಿ ಸತ್ತ ಮೂವರ ಕುಟುಂಬಗಳಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರದ ಚೆಕ್ ನೀಡಿದರು. ಸದಾ ಬಡವರ ದುಡ್ಡು ತಿಂದೇ ಬಾಳ್ವೆ ಮಾಡುವ ಚೆಡ್ಡಿ ವೀರ ನಾಗೇಶ್ ಇಲ್ಲೂ ನಾಲಿಗೆ ಚಾಚಿದ. ಚೆಡ್ಡಿಗಳಿಂದಲೇ ಹತನಾದ ತಿರುಪತಿಯ ಹೆಂಡತಿ ಜಾನಕಮ್ಮರನ್ನು ಭೇಟಿ ಮಾಡಿದ ನಾಗೇಶ್ ಹಣ ಡ್ರಾ ಮಾಡಿಕೊಡುವುದಾಗಿ ಚೆಕ್ ಪಡೆದ. ಜಾನಕಮ್ಮನವರ ಕೈಗೆ ಕೇವಲ

# ಚಿಕ್ಕಮಗಳೂರು: ಎಂ.ಎಲ್. ಮೂರ್ತಿ ಕೈಗೆ ಜಿಲ್ಲಾ ಕಾಂಗ್ರೆಸ್ ಲಗಾಮು!

ಕಳೆದ ಒಂದೂವರೆ ದಶಕಗಳಿಂದ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅನೇಕ ಯಡವಟ್ಟುಗಳು ನಡೆದಿವೆ. ಅದರ ಪರಿಣಾಮವಾಗಿಯೇ ಲೋಕಸಭೆಯಿಂದ ಹಿಡಿದು ವಿಧಾನಸಭಾ, ಜಿಲ್ಲಾ ಪಂಚಾಯತಿ, ಸ್ಥಳೀಯ ಸಂಸ್ಥೆಗಳೆಲ್ಲವನ್ನು ಕಾಂಗ್ರೆಸ್ ಹಂತಹಂತವಾಗಿ ಕಳೆದುಕೊಂಡಿದೆ. ಕಾಂಗ್ರೆಸ್‌ನಲ್ಲಿನ ಕಿತ್ತಾಟಕ್ಕೆ ಸರಿಯಾಗಿ ಬಿಜೆಪಿಯ ಲಜ್ಜೆಗೆಟ್ಟ 'ಆಪರೇಷನ್ ಕಮಲ' ಕಾರ್ಯತಂತ್ರಕ್ಕೂ ಇತ್ತೀಚೆಗೆ ಕಾಂಗ್ರೆಸ್‌ನ ಅನೇಕ ಅವಿವೇಕಿ ಮುಖಂಡರು ಬಲಿಯಾಗಿದ್ದಾರೆ. ಇಂಥ ಸಂದಿಗ್ಧ ಕಾಲಘಟ್ಟದಲ್ಲಿ ಜಿಲ್ಲಾ ಕಾಂಗ್ರೆಸ್‌ಗೆ ಹೊಸ ನಾಯಕನ ಆಗಮನವಾಗಿದೆ.


'ಅತ್ತ ದರಿ, ಇತ್ತ ಪುಲಿ' ನಡುವೆ ಸಿಲುಕಿ ಒದ್ದಾಡಿದ್ದ ಕೆ.ಬಿ ಮಲ್ಲಿಕಾರ್ಜುನನೆಂಬ ಲಿಂಗಾಯತನಿಂದ ಎಂ.ಎಲ್. ಮೂರ್ತಿ ಎಂಬ ಪ್ರಬಲ ಕೋಮಿನ ಒಕ್ಕಲಿಗ ಅಧಿಕಾರ ಪಡೆಸಿಕೊಂಡಿದ್ದಾರೆ. ವಯಸ್ಸಿನಲ್ಲಿ ಕಿರಿಯವರಾದರೂ ಅನುಭವದಲ್ಲಿ ಹಿರಿಯವರಂತೆ ಕಾಣಿಸುವ ಮೂರ್ತಿ ಮುಂದೆ ಹಲವಾರು ಸವಾಲುಗಳಿವೆ. ಆದರೆ ತನ್ನ ಮುಂದಿರುವ ಗುರಿಯನ್ನು ಬೆಂಬತ್ತುವ ಕಲೆ, ಅಡೆತಡೆಗಳನ್ನು ಮೆಟ್ಟಿ ನಿಲ್ಲುವ ಛಲ, ಜನರ ನಿರೀಕ್ಷೆಗಳನ್ನು ಹುಸಿಗೊಳಿಸದಿರುವುದು, ಗಟ್ಟಿಗನಾಗಿ ಪಕ್ಷವನ್ನು ಒಗ್ಗೂಡಿ ಸಂಘಟಿಸುವ ಗುಣಗಳು ಹೊಸ ಅಧ್ಯಕ್ಷ ಮೂರ್ತಿ ಅವರಿಗಿರುವುದರಿಂದ ಜಿಲ್ಲೆಯಲ್ಲಿ ಕಾಂಗ್ರೆಸ್ ಚೇತರಿಸಿಕೊಳ್ಳಬಹುದೆಂಬ ಆಶಾಭಾವನೆ ಇದೆ.

ಹಾಗೇ ನೋಡಿದರೆ ಜಿಲ್ಲೆಯಲ್ಲಿ ಹಲವಾರು ಕಾಂಗ್ರೆಸ್ ನಾಯಕರಿದ್ದಾರೆ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಗರಡಿಯಲ್ಲಿ ಪಳಗಿದ ಮಾಜಿ ಸಭಾಪತಿಯೂ, ಸಂಸದನೂ ಆದ ಬಿ.ಎಲ್.ಶಂಕರ್ ಅತ್ಯುತ್ತಮ ವಾಗ್ಮಿ. ಇನ್ನೊಬ್ಬ ನಾಯಕ ಮಾಜಿ ಸಂಸದ ಡಿ.ಎಂ.ಪುಟ್ಟೇಗೌಡ ಆಸ್ತಿ ಅಂತಸ್ತಿನಲ್ಲಿ ಯಾರಿಗೂ ಕಡಿಮೆ ಇಲ್ಲ. ಡಿ.ಕೆ. ತಾರಾದೇವಿ ಸಿದ್ಧಾರ್ಥ ರಾಜಕೀಯವಾಗಿ ಉತ್ತಮ ಕೆಲಸಗಾರ್ತಿ. ಸಗೀರ್ ಅಹಮ್ಮದ್, ಮೋಟಮ್ಮ, ಟಿ.ಡಿ. ರಾಜೇಗೌಡ, ಎ.ಎನ್. ಮಹೇಶ್, ಎಸ್.ಎಂ. ಮಂಜುನಾಥ್, ಕೆಂಪರಾಜ್, ಶಿವಶಂಕರಪ್ಪ, ಬೇಗಾನೆ ರಾಮಯ್ಯ, ಕೆ. ಮಹಮ್ಮದ್ ಸೇರಿದಂತೆ ಹಲವಾರು ನಾಯಕರೂ ಇದೇ ಜಿಲ್ಲೆಯವರೇ.

ಆದರೂ ಜಿಲ್ಲಾ ಕಾಂಗ್ರೆಸ್ ಸಂಪೂರ್ಣ ನೆಲ ಕಚ್ಚಿದೆ. ಅದರ ಅವನತಿ ಪ್ರಾರಂಭವಾಗಿದ್ದು 1996ರಲ್ಲಿ, ಇದಕ್ಕೂ ಮುನ್ನ ತಾರಾದೇವಿ



ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾಗ ಹಲವು ಮುಖಂಡರು ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಬಿ.ಎಲ್.ಶಂಕರ್‌ಗೆ ಮತ ಹಾಕುವಂತೆ ತಮ್ಮ ಬೆಂಬಲಿಗರಿಗೆ ಸೂಚಿಸಿ ಅವರ ಪರವಾಗಿ ಕೆಲಸ ಮಾಡಿದ್ದರು. ಹಾಗೆಯೇ 1996ರಲ್ಲಿ ತಾರಾದೇವಿ ಅವತ್ತಿನ ರಾಜ್ಯಾಧ್ಯಕ್ಷ ಎನ್. ಧರಂಸಿಂಗ್‌ರಿಂದ ಬಿಫಾರಂ ತರಲು



ಸಾಧ್ಯವಾಗದೇ ಇದ್ದುದಕ್ಕೆ ಜಿಲ್ಲಾ ಕಾಂಗ್ರೆಸ್ ಮುಖಂಡರ ಪಿತೂರಿಯೇ ಕಾರಣವಾಗಿತ್ತು. ಜಿಲ್ಲೆಯಲ್ಲಿ ಅಂದು ಮಲಗಿದ ಕಾಂಗ್ರೆಸ್ ಇಂದಿಗೂ ಎದ್ದಿಲ್ಲ ಬಿಡಿ. ಅದಕ್ಕೆ ಕಾರಣ ಪಕ್ಷದಲ್ಲಿನ ಅಂಧ ದರ್ಬಾರು ಮತು ಭಿನ್ನಮತ; ಒಬ್ಬ ನಾಯಕರನ್ನು ಕಂಡರೆ ಇನ್ನೊಬ್ಬರಿಗೆ ಆಗದು.

1976ರಲ್ಲಿ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಸ್ಪರ್ಧಿಸಿ ಗೆದ್ದಿದ್ದ ಪ್ರತಿಷ್ಠಿತ ಲೋಕಸಭಾ ಕ್ಷೇತ್ರವಿದು. ಅವತ್ತು ಇಂದಿರಾಜಿಗೆ ತಮ್ಮ ಸ್ಥಾನ ಬಿಟ್ಟುಕೊಟ್ಟು ಶರಣು ಅಂದಿದ್ದ ಡಿ.ಬಿ. ಚಂದ್ರೇಗೌಡ ಇವತ್ತು ಕೋಮುವಾದಿ ಬಿಜೆಪಿಗಳ ಕಪಿಮುಷ್ಟಿಯೊಳಗೆ ಸಿಕ್ಕಿಹಾಕಿಕೊಂಡಿದ್ದಾರೆ. ಜೊತೆಗೆ ತರೀಕೆರೆಯ ಮಾಜಿ ಶಾಸಕ ಬಿ.ಆರ್. ನೀಲಕಂಠಪ್ಪ ಬಾಣಲೆಯಿಂದ ಬೆಂಕಿಗೆ ಜಾರಿ ಬಿದ್ದಂತೆ ವಿಲವಿಲ ಅಂತ ಒದ್ದಾಡುತ್ತಿದ್ದಾರೆ.

ಜಿಲ್ಲೆಯಲ್ಲಿ ಹಲವಾರು ಸಮಸ್ಯೆಗಳಿವೆ. ಭದ್ರಾ ಮೇಲ್ದಂಡೆ ಯೋಜನೆ ಜಾರಿಯಿಂದ ರೈತಸಮುದಾಯ ಬೀದಿಯಲ್ಲಿದೆ. ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಮೀಸಲು ಅರಣ್ಯ ವ್ಯಾಪ್ತಿ ಪ್ರದೇಶ ದಲಿತರು ಮತ್ತು ಗಿರಿಜನರನ್ನು ಕಂಗಾಲು ಮಾಡಿದೆ. ಅತಿವೃಷ್ಟಿ, ಅನಾವೃಷ್ಟಿ, ಕಾಫಿ ಮತ್ತು ಅಡಿಕೆ ಬೆಳೆಗಾರರಿಗೆ ಚುರುಕು ಮುಟ್ಟಿಸಿದೆ. ಕೂಲಿ ಕಾರ್ಮಿಕರು, ನಿರುದ್ಯೋಗಿಗಳ ಪಾಡು ದಂಗುಬಡಿಸುವಂತಿದೆ. ಅಧಿಕಾರಿ ವರ್ಗಗಳ ವ್ಯಾಪಕ ಭ್ರಷ್ಟಾಚಾರ ಹಾಗೂ ಜನಪ್ರತಿನಿಧಿಗಳ ಸರ್ವಾಧಿಕಾರಿ ಧೋರಣೆಯಿಂದಾಗಿ ಅಭಿವೃದ್ಧಿ ಚಟುವಟಿಕೆಗಳು ಕುಂಠಿತವಾಗಿದೆ. ಕುಡಿಯಲು ನೀರಿಲ್ಲ, ಶಾಲೆಗಳಲ್ಲಿ ಶಿಕ್ಷಕರಿಲ್ಲ, ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲ, ಬೀದಿ ದೀಪವಿಲ್ಲ, ರಸ್ತೆ, ಚರಂಡಿ, ಅಂಗನವಾಡಿ ಕೇಂದ್ರಗಳು ಮಲೆನಾಡಿನ ಗುಡ್ಡಗಾಡು ಪ್ರದೇಶಗಳ ಬಹುತೇಕ ಕಡೆಗಳಲ್ಲಿ ಇಲ್ಲವೇ ಇಲ್ಲ.

ಈ ಎಲ್ಲಾ ಸಮಸ್ಯೆಗಳು ಒಂದೆಡೆಯಾದರೆ, ಕೋಮುವಾದಿ ಬಿಜೆಪಿಯು ಸಾಕಿ ಸಲಹುತ್ತಿರುವ ಸಂಘ ಪರಿವಾರದ ಕಪಿಸೈನ್ಯ ಮಾಡುತ್ತಿರುವ ಸಮಸ್ಯೆಗಳು ಇನ್ನೊಂದೆಡೆ. ಚರ್ಚುಗಳ ಮೇಲೆ ದಾಳಿ, ಗೋರಕ್ಷಣೆಯ ನೆಪದಲ್ಲಿ ಮುಸ್ಲಿಂ ಯುವಕರ ಮೇಲೆ ಹಲ್ಲೆ, ಬ್ಲೂಫಿಲಂ ತಯಾರಿಕೆ, ಗೂಂಡಾ ವರ್ತನೆ, ಕಾಡುಕಳ್ಳತನ, ದಲಿತರ ಮೇಲೆ ದೌರ್ಜನ್ಯ, ಜೊತೆಗೆ ಸರ್ವಧರ್ಮಿಯರ ಪವಿತ್ರ ಬಾಬಾ ಬುಡನ್‌ಗಿರಿಯಂತಹ ಐತಿಹಾಸಿಕ ಯಾತ್ರಾ ಸ್ಥಳವನ್ನು ವಿವಾದಗ್ರಸ್ತಗೊಳಿಸಿರುವುದು ಬಿಜೆಪಿಯ ಕೋಮುವಾದಿ ಚೆಡ್ಡಿಗಳೆ.

ಈಗಷ್ಟೆ ತನ್ನ ಅವಧಿ ಮುಗಿಸಿ ಇಳಿದಿರುವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೆ.ಬಿ. ಮಲ್ಲಿಕಾರ್ಜುನ ಬಿಜೆಪಿಯ ಗಾಳಕ್ಕೆ ಬೀಳುವ ಹಂತದಲ್ಲಿದ್ದಾರೆ. ಈ ಲಿಂಗಾಯತ ಮನುಷ್ಯ ತನ್ನ ಬಂಧುವಿನ ವೈಯಕ್ತಿಕ

3 ಸಾವಿರ ಇತ್ತು, '2 ಸಾವಿರ ಅಕೌಂಟ್ ಗಸಲು ಖರ್ಚಾಯ್ತು' ಎಂದು ಹೇಳಿದ. ಉಳಿದ ) ಸಾವಿರಗಳನ್ನು ಆಮೇಲೆ ಕೊಡುವುದಾಗಿ ಳಿದವನು ನಾಪತ್ತೆಯಾದ. ಈ ಮನೆಹಾಳನ ನ್ನುಬದ್ಧ ಜಾನಕಮ್ಮ ತನ್ನ ಹಣ ನೀಡಲು ಳಿಕೊಂಡರು. ಈ ದೇಶಭಕ್ತ ಹಿಂದೂವೀರ ಗೇಶ್ ಅಮಾಯಕ ಜಾನಕಮ್ಮರಿಗೆ ಧಮಕಿ ಾಕಿಬಿಟ್ಟ.

ಸ್ಥಳೀಯ ನಾಯಕರ ಮೂಲಕ ತಹಶೀಲ್ದಾರ್ ೀತಾಕೃಷ್ಣರಿಗೆ ಜಾನಕಮ್ಮ ದೂರು ಕೊಟ್ಟರು. ಕ್ಯಾತಮಾರನಹಳ್ಳಿಗೆ ಹೋಗಿ ಪರಿಶೀಲನೆ ಮಾಡಿದ ತಹಶೀಲ್ದಾರ್‌ಗೆ ನಾಗೇಶನ ಕಳ್ಳಾಟ ಗೊತ್ತಾಯಿತು. ಫೋನಿನಲ್ಲಿ ತಹಶೀಲ್ದಾರರೊಂದಿಗೆ ಮಾತಾಡಿದ ನಾಗೇಶ್, ಮರುದಿನವೇ ಹಣ ವಾಪಾಸ್ ಮಾಡುವುದಾಗಿ ಆಣೆ ಮಾಡಿದ. ಈ ಶ್ರೀರಾಮಪುತ್ರನಿಗೆ ಆಣೆ, ವಚನ ಎಂಬುದೆಲ್ಲ ಲೆಕ್ಕಸವಲ್ಲವೇ? ಈ ವಿಷಯ ಪತ್ರಿಕೆಗಳಲ್ಲಿ ಂದು ಮೈಸೂರು ಬಜೆಪಿಗಳು ತ್ತಲೆಯಾಗತೊಡಗಿದರು. ತನ್ನ ಬಜೆಪಿ ಗೂಂಡಾಗಳೊಂದಿಗೆ ಜಾನಕಮ್ಮನ ಮನೆಗೆ ಳಿಯಿಟ್ಟ ನಾಗೇಶ್, ದುಡ್ಡು ಕೇಳಿದರೆ ಕೊಲ್ಲುವುದಾಗಿ ಬೆದರಿಸಿದ. ಪ್ರೆಸ್ ಮೀಟ್ ಮಾಡಿ ಲ್ಲ ಆರೋಪಗಳು ಸುಳ್ಳು ಎಂದು ಹೇಳುವಂತೆ ಜಾನಕಮ್ಮನವರಿಗೆ ಒತ್ತಾಯಿಸತೊಡಗಿದ. ಹಿಂಸೆ ಾಳದ ಜಾನಕಮ್ಮ ದೆಪ್ಯೂಟಿ ಕಮೀಷನರ್ ಮಣಿವಣ್ಣನ್ ಬಳಿ ಹೋದರು. ಮಣಿವಣ್ಣನ್ ಪೊಲೀಸ್ ಕಮೀಷನರ್ ಸುನೀಲ್ ಅಗರವಾಲ್‌ರಿಗೆ ಸುದ್ದಿ ಮುಟ್ಟಿಸಿದ್ದೇ ತಡ ಉದಯಗಿರಿ ಪೊಲೀಸರು 'ರಾಮಭಕ್ತ' ನಾಗೇಶನನ್ನು ಸ್ವಾತಂತ್ರ್ಯದಿನಾಚರಣೆಯ ದಿನದಂದೇ ಕೃಷ್ಣನ ಜನ್ಮಸ್ಥಳಕ್ಕೆ ದಬ್ಬಿದ್ದಾರೆ.

ಕ್ಯಾತಮಾರನಹಳ್ಳಿಯ ಜನರ ಪ್ರಕಾರ, ಬಕ್ರೀದ್‌ಸಾದಲ್ಲಿ ಹಂದಿ ರುಂಡ ಎಸೆಯುವುದರಲ್ಲಿ, ಂತರ ವ್ಯವಸ್ಥಿತ ಗಲಭೆ ಎಬ್ಬಿಸುವುದರಲ್ಲಿ ಈ ನಾಗೇಶನೇ ಮಾಸ್ಟರ್ ಮೈಂಡ್. ಡಿಸಿಪಿ ಡಿಸೋಜಾ ಕೂಡಾ ಬಹಿರಂಗವಾಗಿ ಈ ಸಂಶಯ ವ್ಯಕ್ತಪಡಿಸಿದ್ದಾರೆ. ಈ ನಿಟ್ಟಿನಲ್ಲಿ ತನಿಖೆ ನಡೆಸಿದರೆ ಗಲಭೆಕೋರ ಚೆಡ್ಡಿಗಳ ಹಿಂದು ೈಲುಪಾಲಾಗಲಿದೆ. ಅದಕ್ಕೆ ಆಚಾರ್ಯ ಅವಕಾಶ ಕೊಡಬೇಕಲ್ಲ?

ಒಟ್ಟಿನಲ್ಲಿ ಅಮಾಯಕರ ಸಾವಿನಲ್ಲೂ ದುಡ್ಡು ಹೊಡೆಯುವ ಬಜೆಪಿಗಳ 'ಆದರ್ಶ'ವೀಗ ಮೈಸೂರು ತುಂಬಾ ಚರ್ಚೆಯಾಗುತ್ತಿದೆ. ●

ಚಾರವೊಂದರಲ್ಲಿ ಕೆ.ಎಸ್. ಈಶ್ವರಪ್ಪ ಮತ್ತು ಲವು ಚೆಡ್ಡಿಗಳನ್ನು ಕರೆಸಿಕೊಂಡಿದ್ದು ರಹಸ್ಯವೇನಲ್ಲ. ಕಳೆದ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಲ್ಲಿ ಬಾಳೆಹೊನ್ನೂರಿನ ರಂಭಾಪುರಿ ಮಠದ ಲಿಂಗಾಯತ ಸ್ವಾಮಿಯ ಮಲ್ಲಿಕಾರ್ಜುನನ ಮಾತಿಗೆ ಕವಡೆಕಾಸಿನ ಕಿಮ್ಮತ್ತು ೀಡಿರಲಿಲ್ಲ, ಸಿ.ಟಿ. ರವಿಯ ನೋಟುಗಳು ಅಲ್ಲಿ ಲಸ ಮಾಡಿದ್ದವು.

ಈಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹುದ್ದೆಗೇರಿರುವ ಎಂ.ಎಲ್. ಮೂರ್ತಿಯವರ ಮುಂದೆ ಕಾಂಗ್ರೆಸ್ ಪಕ್ಷದೊಳಗಿನ ಸಮಸ್ಯೆಗಳೊಂದಿಗೆ ಜಿಲ್ಲೆಯಲ್ಲಿರುವ ಸಮಸ್ಯೆಗಳನ್ನೂ ನಿಯಂತ್ರಿಸುವ ಸವಾಲಿದೆ. ಕೊಂಚ ಮುಂಗೋಪಿಯಾದರೂ ಮೂರ್ತಿಗೆ ಕೋಮುವಾದಿಗಳೊಂದಿಗೆ ಹೋರಾಡುವ ಾಕತ್ತಿದೆ. ಈ ಹಿಂದೆ ಇವರು ನಗರಸಭೆಗೆ ಅಧ್ಯಕ್ಷರಾಗಿದ್ದಾಗ ವಿವಾದಿತ ಅರಳಿಮರವನ್ನು ಬುಡಸಮೇತ ಕಿತ್ತು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ನೆಡಿಸಿದ್ದನ್ನು ಯಾರೂ ಮರೆತಿಲ್ಲ. ಆರಂಭದಲ್ಲಿ ಚೆಡ್ಡಿಗಳ ಕೆಂಗಣ್ಣಿಗೆ ಗುರಿಯಾದರೂ ಮರದ ವಿವಾದವನ್ನು ಅಳಿಸಿಹಾಕಿದ ಕೀರ್ತಿ ಎಂ.ಎಲ್. ಮೂರ್ತಿಗೆ ದಕ್ಕುತ್ತದೆ.

ಇವತ್ತಿಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೆಲ್ಲರ ಬೆಂಬಲವಂತೂ ಮೂರ್ತಿಗಿದೆ. ಈ ಅಂಶವನ್ನು ಕುರಿತು ಕಾಂಗ್ರೆಸ್ ಪಾಳೆಯದಲ್ಲಿ ಯಾವ ರೀತಿ ಪೂರಕ ವಾತಾವರಣ ಸೃಷ್ಟಿಸುತ್ತಾರೋ ನೋಡುಹೋಗಬೇಕಾಗಿದೆ. ಯಾವುದೇ ಕಾರಣಕ್ಕೂ, ಮೂರ್ತಿಯವರು ಗಾಳಿಯ ಹೊಡೆತಕ್ಕೆ ಸಿಕ್ಕ, ತರಗೆಲೆಯಂತಾಗಬಾರದಷ್ಟೆ. ಅದು ಕಾಂಗ್ರೆಸ್ ಮತ್ತು ಜಿಲ್ಲೆ, ಎರಡರ ಹಿತಾಸಕ್ತಿಯ ದೃಷ್ಟಿಯಿಂದ ಮುಖ್ಯವಾದದ್ದು.

● ಅಜೀಜ್ ಕಿರುಗುಂದ

# ನ್ಯಾ. ಸೋಮಶೇಖರ ಆಯೋಗದ ಮುಂದೆ ಸಂಘ ಪರಿವಾರದ ಶಕುನಿಗಳು

ರಾಜ್ಯದಲ್ಲಿ ಬಜೆಪಿ ಅಧಿಕಾರಕ್ಕೇರಿದ ಮೇಲೆ ನಡೆದ ಚರ್ಚ್ ಮೇಲಿನ ದಾಳಿಗಳು ಇಡೀ ದೇಶದಾದ್ಯಂತ ಖಂಡನೆಗೆ ಗುರಿಯಾಗಿದ್ದು ನಮಗೆಲ್ಲಾ ಗೊತ್ತೇ ಇದೆ.

ಜಾತಿರಾಜಕಾರಣ, ದ್ವೇಷ ರಾಜಕಾರಣ, ಖರೀದಿ ರಾಜಕಾರಣ ಮಾಡೇ ರಾಜ್ಯದಲ್ಲಿ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಬಜೆಪಿಗಳಿಗೆ ರಾಜ್ಯದ ಆಡಳಿತ ನಡೆಸುವುದು ಹೇಗೆಂಬ ಜ್ಞಾನವೂ ಇಲ್ಲ, ಕಾಳಜಿಯೂ ಇಲ್ಲ. ಅಷ್ಟೇ ಅಲ್ಲ, ಆ ದಾಳಿಗಳ ಹಿಂದೆ ಬಜೆಪಿಯ ಅಂಗಸಂಸ್ಥೆಗಳಾದ ಭಜರಂಗ ದಳ, ವಿಶ್ವ ಹಿಂದೂ ಪರಿಷತ್ ಮತ್ತು ಆರೆಸ್ಸೆಸ್‌ನ ಕೈಗಳಿದ್ದವಲ್ಲದೆ, ಸರ್ಕಾರದ ಯಂತ್ರಾಂಗಗಳಾದ ಕಂದಾಯ ಮತ್ತು ಪೊಲೀಸ್ ಇಲಾಖೆಗಳ ನೆರವೂ ನೀಡಿತ್ತು ಬಜೆಪಿ ಸರ್ಕಾರ. ಈ ದಾಳಿ ನಡೆಸಿದವರ ವಿರುದ್ಧ ಅಧಿಕಾರದಲ್ಲಿರುವ ಬಜೆಪಿ ಸರ್ಕಾರ ಯಾವುದೇ ಕ್ರಮಗಳನ್ನು ಕೈಗೊಳ್ಳದೆ ಅವರನ್ನು ರಕ್ಷಿಸಿಕೊಂಡು ಬಂದದ್ದೂ ಎಲ್ಲರಿಗೆ ತಿಳಿದಿರುವ ಸಂಗತಿಯಾಗಿದೆ.

ಇಷ್ಟಾದ ಮೇಲೂ ತಾನೂ ಸರ್ಕಾರ ನಡೆಸುತ್ತಿದ್ದೇನೆ ಎಂದು ಸಾಬೀತು ಪಡಿಸಬೇಕಲ್ಲ, ಅದಕ್ಕೇ ಚರ್ಚ್‌ಗಳ ಮೇಲಾದ ದಾಳಿಗಳನ್ನು ಕುರಿತಂತೆ ವಿಚಾರಣೆ ನಡೆಸಲು ನ್ಯಾಯಮೂರ್ತಿ ಸೋಮಶೇಖರ್ ನೇತೃತ್ವದಲ್ಲಿ ಒಂದು ಆಯೋಗವನ್ನು ಯಡ್ಡಿಯ ಚೆಡ್ಡಿ ಸರ್ಕಾರ ನೇಮಿಸಿತು. ಬಜೆಪಿ ಸರ್ಕಾರ ಸೋಮಶೇಖರ ಆಯೋಗವನ್ನು ರಚಿಸಿದಾಗ ತಮಗಾದ ಅನ್ಯಾಯವನ್ನು ಹೇಳಿಕೊಳ್ಳುವ ಕನಿಷ್ಠ ಅವಕಾಶವಾದರೂ ಸಿಕ್ಕಿತಲ್ಲ ಎಂದು ಕರ್ನಾಟಕದಾದ್ಯಂತ ದಾಳಿಗೊಳಗಾದ ಕ್ರೈಸ್ತ ಅಲ್ಪಸಂಖ್ಯಾತರು ಸಂತಸಪಟ್ಟರು. ತಮ್ಮ ಅಹವಾಲುಗಳನ್ನು ಆಯೋಗದ ಮುಂದೆ ಹೇಳಿಕೊಳ್ಳುವ ಉದ್ದೇಶದಿಂದ ಕ್ರೈಸ್ತರು, ಸಂಘ ಪರಿವಾರದ ಸಂಚಿಗೆ ಪೂರಕವಾಗಿ ಸಾಕ್ಷಿ ಹೇಳಬಯಸುವ ಹಲವರು ಆಯೋಗದ ಮುಂದೆ ಒಟ್ಟು 993 ಪ್ರಮಾಣಪತ್ರಗಳನ್ನು ದಾಖಲಿಸಿದರು.


ಕರ್ನಾಟಕದ 24 ಜಿಲ್ಲೆಗಳಿಂದ ಈ ಪ್ರಮಾಣಪತ್ರಗಳು ದಾಖಲಾಗಿವೆ. ಇವುಗಳಲ್ಲಿ ಹೆಚ್ಚಿನ ದಾಳಿಗಳಾದ ದಾವಣಗೆರೆ, ದಕ್ಷಿಣ ಕನ್ನಡ, ಉಡುಪಿ, ಮಂಗಳೂರು ಈ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದೆಲ್ಲಾ ಜಿಲ್ಲೆಗಳಿಂದ ಬಂದ ಪ್ರಮಾಣಪತ್ರಗಳ ವಿಚಾರಣೆ ಈಗಾಗಲೇ ಮುಗಿದಿದೆ. ಡಿಸೆಂಬರ್ ತಿಂಗಳ ಹೊತ್ತಿಗೆ ಪೂರ್ಣ ವಿವರಗಳನ್ನು ಸರ್ಕಾರಕ್ಕೆ ನೀಡಬೇಕಾದ ಸಮಯ ಮಿತಿಯನ್ನು ಕೂಡ ಈ ಆಯೋಗವು ಹೊಂದಿದೆ.



ಆದರೆ ಕ್ರೈಸ್ತರ ಮೇಲಾದ ದಾಳಿಗಳನ್ನು ಕುರಿತು ಈ ಆಯೋಗ ಸಮಗ್ರ ತನಿಖೆಯನ್ನು ನಡೆಸದಂತೆ ಈಗ ಆಯೋಗದ ಮುಂದೆಯೇ ಚೆಡ್ಡಿಗಳು ಮಂಗಾಟ ನಡೆಸುತ್ತಿದ್ದಾರೆ, ಆಯೋಗದ ಉದ್ದೇಶ ಈಡೇರದಂತೆ ನೋಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಹಲ್ಲೆ, ದೌರ್ಜನ್ಯಕ್ಕೊಳಗಾದ ಕ್ರೈಸ್ತರಿಗೆ ಈ ಆಯೋಗದಿಂದ ನ್ಯಾಯ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಆದರೆ ಈ ಆಯೋಗದಲ್ಲಿ ಕ್ರೈಸ್ತ ಫಾಸ್ಟರುಗಳನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು 'ಲಂಕೇಶ್' ಓದುಗರ ಗಮನಕ್ಕೆ ತರುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಏಕೆಂದರೆ ಈ ಆಯೋಗದೊಳಗಿನ ಇಂಟರಾಗೇಷನ್‌ನ ಶಾಕ್‌ನಿಂದಾಗಿ ದಾಳಿಗೊಳಗಾದ ಕ್ರೈಸ್ತ ಫಾಸ್ಟರ್‌ಗಳು "ಇಲ್ಲಿ ನಮ್ಮ ಅಹವಾಲುಗಳನ್ನು ಹೇಳಿಕೊಳ್ಳುವುದಿರಲಿ, ನೊಂದು ಮಾನಸಿಕವಾಗಿ ಗಾಯಗೊಂಡಿರುವ ನಮ್ಮ ಮೇಲೆಯೇ ಬರೆ ಎಳೆಯಲಾಗುತ್ತಿದೆ" ಎಂದು ಗೋಳಾಡುತ್ತಿದ್ದಾರೆ.

ಈ ಆಯೋಗದಲ್ಲಿ ಸರ್ಕಾರಿ ವಕೀಲರಾಗಿ ಶ್ರೀನಿವಾಸನ್, ಪ್ರಸನ್ನ ದೇಶಪಾಂಡೆ, ಎಲ್.ಎನ್. ಹೆಗಡೆಯವರಿದ್ದರೆ ಕ್ರೈಸ್ತರ ಪರವಾಗಿ ವಕೀಲರಾದ ಕ್ರಿಷ್ಣನ್, ಜಗದೀಶ್, ಮೈತ್ರಿ ಮುಂತಾದವರಿದ್ದಾರೆ. ಹಿಂದೂ ಸಂಘಟನೆಗಳ ಪರವಾಗಿ ಮಧುಸೂದನ ಅಡಿಗ, ಸತೀಶ್‌ಚಂದ್ರ, ಶಿವಪ್ರಸಾದ್ ಮುಂತಾದವರಿದ್ದಾರೆ.

ಹಿಂದೂಪರ ಸಂಘಟನೆಗಳ ಪರವಾಗಿ ವಕೀಲಿಕೆ ಮಾಡುತ್ತಿರುವ ಮಧುಸೂದನ ಅಡಿಗ ಮತ್ತಿತರರು ಆಯೋಗದ ಕಲಾಪಗಳೆಲ್ಲಾ ತಮ್ಮ ಆಟಾಟೋಪಗಳ ಉದ್ದೇಶಗಳಿಗಾಗಿಯೇ ನೇಮಿಸಲ್ಪಟ್ಟಿವೆ ಎಂಬಂತೆ ಆಯೋಗದ ವಿಚಾರಣಾ ವೇದಿಕೆಯೊಳಗೇ ಗೂಂಡಾಗಳಂತೆ ವರ್ತಿಸುತ್ತಿದ್ದಾರೆ. ಅದನ್ನು ಕಂಡು ಇದು ಸರ್ಕಾರ ನೇಮಿಸಿರುವ ವಿಚಾರಣಾ ಆಯೋಗವೋ ಅಥವಾ 'ದೊಣ್ಣೆ ಇದ್ದವನದೇ ದನ' ಎಂದು ತೀರ್ಪು ನೀಡಿಬಿಡುವ 'ಹಾವೇರಿ ಪಂಚಾಯತಿ ಕಟ್ಟೆಯೋ' ಎಂಬ ಅನುಮಾನ ಬಾರದಿರಲಾರದು.



## ಅಡಿಗನೆಂಬ ಚೆಡ್ಡಿಯ ದರ್ಬಾರು

ಒಂದು ಆಯೋಗವೆಂದ ಮೇಲೆ ಅದರ ಮುಂದೆ ಪರ-ವಿರೋಧ ವಲಯಗಳ ನಡುವೆ ವಾದವಿವಾದಗಳು ನಡೆಯುತ್ತವೆ. ಆದರೆ ನೊಂದವರ ಅಭಿಪ್ರಾಯಗಳನ್ನು ಹತ್ತಿಕ್ಕುವ, ವ್ಯಂಗ್ಯ ಮಾಡುವ, ಕ್ರೈಸ್ತರ ಪರ ವಕೀಲರನ್ನು ಬೆದರಿಸುವ, ಹಲ್ಲೆಗೊಳಗಾದವರನ್ನೇ ಅಪರಾಧಿ ಸ್ಥಾನಗಳಲ್ಲಿ ನಿಲ್ಲಿಸುವ ಹಾಗೂ ದೌರ್ಜನ್ಯಗಳಿಗೆ ನೀವೇ ಕಾರಣಕರ್ತರೆಂದು ಕ್ರೈಸ್ತ ಅಲ್ಪ ಸಂಖ್ಯಾತರ ವಿರುದ್ಧ ಫರ್ಮಾನು ಹೊರಡಿಸುವ ಕೆಲಸದಲ್ಲಿ ಹಿಂದೂ ಪರ ಸಂಘಟನೆಗಳ ವಕೀಲ ಮಧು-ಸೂದನ ಅಡಿಗ ಮತ್ತಾತನ ಗ್ಯಾಂಗ್ ತೊಡಗಿದ್ದಾರೆ.

ಇವರ ವಿಜಯೋತ್ಸವದ ವ್ಯಂಗ್ಯಗಳಿಗೆ ಜಸ್ಟೀಸ್ ಸೋಮಶೇಖರ್‌ರವರು ಬ್ರೇಕ್ ಹಾಕದೇ ಅಸಹಾಯಕತೆಯನ್ನು ತೋರುತ್ತಿರುವುದು ಈ ಆಯೋಗದ ಒಟ್ಟು ಫಲಿತಾಂಶದ ಮುನ್ಸೂಚನೆಯನ್ನು ನೀಡುವಂತಿದೆ. ಕ್ರೈಸ್ತಬಾಂಧವರು ಇತ್ತೀಚಿನ ದಿನಗಳಲ್ಲಿ ಸಂಘಪರಿವಾರದವರಿಂದ ಮಾತ್ರವಲ್ಲದೇ ಪೊಲೀಸರಿಂದಲೂ ಹಲ್ಲೆಗೊಳಗಾಗಿದ್ದಾರೆ, ಸುಳ್ಳು ಕೇಸುಗಳಡಿ ಜೈಲುಗಳನ್ನು ಕಂಡಿದ್ದಾರೆ, ಅವರ ಕಣ್ಣೆದುರೇ ಅವರ ಪ್ರಾರ್ಥನಾಮಂದಿರಗಳು ಧ್ವಂಸಗೊಂಡು ಆಘಾತಗೊಂಡಿದ್ದಾರೆ. ಮಾನಸಿಕವಾಗಿ ಗಾಯಗೊಂಡಿರುವ ತಮಗೆ ಈ ಆಯೋಗದಿಂದ ಕನಿಷ್ಠ ಸಾಂತ್ವನ ಸಿಗುತ್ತದೆಂದು ನಂಬಿದ್ದ ಕ್ರೈಸ್ತ ಸಮುದಾಯದವರ ಉರಿಯುವ ಗಾಯಕ್ಕೆ ಉಪ್ಪು ಸುರಿದಂತೆ ಅಡಿಗ ಮತ್ತವನ ಕಡೆಯವರು "ನಿಮಗೆ ಫಾಸ್ಟರ್ ಎಂಬ ಬಿರುದು ಯಾರು ಕೊಟ್ಟರು? ನಿಮಗೆ ಹಣ ಎಲ್ಲಿಂದ ಬರುತ್ತದೆ? ಅಕೌಂಟ್ಸ್ ಇಟ್ಟಿದ್ದೀರಾ? ಮೂಲ ಧರ್ಮ ಬಿಟ್ಟು ಯಾಕೆ ಕ್ರೈಸ್ತರಾದಿರಿ? ಹಿಂದೂ ಧರ್ಮದ ವಿರುದ್ಧ ಪ್ರಚಾರ ಮಾಡುತ್ತೀರಿ. ಏಸು ಕ್ರಿಸ್ತನನ್ನು ನಂಬಿದರೆ ಸ್ವರ್ಗ, ಹಿಂದೂ ದೇವರನ್ನು ನಂಬಿದರೆ ನರಕ ಎನ್ನುತ್ತೀರಿ. ಪ್ರಾರ್ಥನೆ ಮಾಡುವಾಗ ದೆವ್ವ ಬಂದವರಂತೆ ಕುಣಿತೀರಿ-ಚಪ್ಪಾಳೆ ಹೊಡೆಯುತ್ತೀರಿ" ಎಂದೆಲ್ಲ ಆಯೋಗದ ದಾರಿ ತಪ್ಪಿಸುವ ಸಲ್ಲದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ.



ಪ್ರಾರ್ಥನೆ ಸಮಯದಲ್ಲಿ ಕ್ರೈಸ್ತರು ಬಳಸುವ 'ಹಲ್ಲೆಲೂಯಾ' ಪದವನ್ನು 'ಹಳ್ಳೆಳ್ಳೂಯಾ', 'ಹಳೇಳೂಯಾ' ಎಂದು ವ್ಯಂಗ್ಯ ಮಾಡುವುದು; ಫಾಸ್ಟರ್ ಎನ್ನುವ ಪದವನ್ನು ತಿರುಚಿ 'ಪ್ಯಾಟರ್' ಎಂದು ಛೇಡಿಸುವುದು; ದೂರದ ಊರುಗಳಿಂದ ಆಯೋಗದ ಎದುರು ವಿಚಾರಣೆಗೆಂದು ಬಂದ ಫಾಸ್ಟರ್‌ಗಳ ಮೇಲೆ ದಬ್ಬಾಳಿಕೆ ನಡೆಸುವುದು, ಇದೆಲ್ಲ ಅಡಿಗ ಮತ್ತಾತನ ಗ್ಯಾಂಗಿಗೆ ಸಾಮಾನ್ಯವಾಗಿಬಿಟ್ಟಿದೆ. ಅಷ್ಟೇ ಅಲ್ಲ, ಕ್ರೈಸ್ತರ ಪರವಾಗಿ ವಕೀಲಿಕೆ ಮಾಡುತ್ತಿರುವ ಕ್ರಿಷ್ಣನ್, ಜಗದೀಶ್ ಅವರನ್ನು ತೀರಾ ಕೇವಲವಾಗಿ ಮಾತನಾಡಿಸುತ್ತಾ, "ಇದು ದಿನಕರನ್, ರವಿವರ್ಮ ಪೀಠ ಅಲ್ಲ, ಬಾಯಿಮುಚ್ಚಿಕೊಂಡಿರಿ" ಎಂದೂ ಅಡಿಗ ಅಬ್ಬರಿಸುತ್ತಾನೆ. ಅಡಿಗನ ಜೊತೆಗೂಡಿ "ಇವನನ್ನು ಹೊರಗೆ ಹಾಕಿ" (ವಕೀಲ ಕ್ರಿಷ್ಣನ್ ಕುರಿತು) ಎಂದು ಹಿಂದೂ ಪರ ಸಂಘಟನೆಯ ವಕೀಲ ಸತೀಶ್‌ಚಂದ್ರ ಬೊಬ್ಬೆ ಹೊಡೆಯುತ್ತಾನೆ. ಅಡಿಗ ಮುಂತಾದವರು ತಮ್ಮ ನಡವಳಿಕೆಗಳ ಮೂಲಕ ಇಡೀ ಕೋರ್ಟ್ ಹಾಲನ್ನು ಅರಾಜಕಗೊಳಿಸಿ ದುರಹಂಕಾರದ ನಗೆ ನಗುತ್ತಿದ್ದರೂ ನ್ಯಾ ಸೋಮಶೇಖರ ಸಾಹೇಬರು ಟುಟಿ-ಪಿಟಿಕ್ ಎನ್ನಲಾಗದೆ ಮೌನ ವಹಿಸುತ್ತಾರೆ.

ಒಂದೆಡೆ ಅಡಿಗ ಮತ್ತಾತನ ಗ್ಯಾಂಗಿನ ಹೀಯಾಳಿಕೆ, ಇನ್ನೊಂದೆಡೆ ನ್ಯಾಸೋಮಶೇಖರರ ಮೌನ... ಇವೆರಡು ಜೊತೆಗೂಡಿ ದಾಳಿಗೊಳಗಾದ ಕ್ರೈಸ್ತರನ್ನು ಅಮಾನವೀಯ ಸ್ಥಿತಿಗೆ ತಳ್ಳಿವೆ. ಇಂತಹ ಅವಮಾನವನ್ನು ತಡೆಯಲಾಗದೆ ರೋಸಿ ಹೋದ ಮಲೇಬೆನ್ನೂರಿನ ಫಾಸ್ಟರ್ ಗಂಗಾಧರ ಅವರು ಜಸ್ಟೀಸ್ ಸಾಹೇಬರ ಎದುರೇ ತಾಳ್ಮೆಯನ್ನು ಕಳೆದುಕೊಂಡು ಜೋರಾಗಿ ಟೇಬಲ್ ಗುದ್ದುತ್ತಾ ಅತ್ತುಬಿಟ್ಟರು. ಮಲೇಬನ್ನೂರಿನಲ್ಲಿ ಇವರು ಹಿಂದೂ ಕೋಮುವಾದಿಗಳ ಕುತಂತ್ರದಿಂದಾಗಿ ತನ್ನದೆನ್ನುವ ಎಲ್ಲವನ್ನು ಕಳೆದುಕೊಂಡಿದ್ದಾರೆ. ಸ್ಥಳೀಯ ಚೆಡ್ಡಿಗಳು ಗಂಗಾಧರ್ ಊರಲಿಲ್ಲದಾಗ ಅವರ ಮನೆಗೇ ಬೆಂಕಿ ಹಚ್ಚಿ ಸುಟ್ಟಿದ್ದಾರೆ, ಗ್ರಾಮ ಪಂಚಾಯತಿಯವರು ಇವರ ಮನೆ, ಸೈಟು, ವಿದ್ಯುಚ್ಛಕ್ತಿ ಮತ್ತು ಕುಡಿಯುವ ನೀರಿನ ಸಂಪರ್ಕಗಳನ್ನು ಸಹ ರದ್ದುಗೊಳಿಸಿದ್ದಾರೆ. ಹೀಗೆಲ್ಲ ಮಾಡುವ ಮೂಲಕ ಫಾಸ್ಟರ್ ಗಂಗಾಧರ ಅವರನ್ನು ಬೀದಿಗೆ ಹಾಕಿದ್ದಾರೆ. ಇಷ್ಟೆಲ್ಲಾ ಆದಮೇಲೂ ನ್ಯಾಯ ಸಿಗಬೇಕಾದ ಸ್ಥಳದಲ್ಲಿಯೂ ಇಂತಹ ಪರಿಸ್ಥಿತಿ ಎದುರಾದರೆ ಅವರು ಕಣ್ಣೀರಿಡದೆ ಇನ್ನೇನು ಮಾಡಲು ಸಾಧ್ಯ?

ಜುಲೈ 13ರಿಂದ ದಾವಣಗೆರೆಯ ನಾಲ್ಕೈದು ಮಂದಿ ಪಾಸ್ಟರ್‌ಗಳನ್ನು ಬೆಂಗಳೂರಿಗೆ ಕರೆಸಿಕೊಳ್ಳುತ್ತಿರುವ ನ್ಯಾ. ಸೋಮಶೇಖರ ಆಯೋಗವು ಇದುವರೆಗೂ (ಆಗಸ್ಟ್ ತಿಂಗಳ ಪ್ರಥಮ ವಾರ) ಕೇವಲ ಫಾಸ್ಟರ್ ಗಂಗಾಧರ್ ಅರವರೊಬ್ಬರ ವಿಚಾರಣೆಯನ್ನು ಮಾತ್ರ ಮುಗಿಸಿದೆ. ಉಳಿದವರು ಪ್ರತಿ ಬಾರಿ ತಮ್ಮ ಹಣ ಮತ್ತು ಸಮಯವನ್ನು ವ್ಯರ್ಥ ಮಾಡಿಕೊಂಡು ಹೋಗಿಬಂದು ಮಾಡುತ್ತಿದ್ದಾರೆ.

ಗಂಗಾಧರ್ ಅವರಿಗಾದ ಸಂಘ ಪರಿವಾರದವರ ಇಲ್ಲೀಗಲ್ ಇಂಟರಾಗೇಷನ್‌ನಿಂದಾಗಿ ಬೆದರಿ ಹೋಗಿರುವ ಉಳಿದ ಫಾಸ್ಟರ್‌ಗಳು "ಭಯೋತ್ಪಾದಕರನ್ನು ವಿಚಾರಣೆ ಮಾಡುವ ರೀತಿಯಲ್ಲಿ ನಮ್ಮನ್ನು ವಿಚಾರಣೆ ಮಾಡುತ್ತಿದ್ದಾರೆ. ಇನ್ನು ಸುಮ್ಮನಿದ್ದರೆ ಇವರು ನಮಗೆ ಮಂಪರು ಪರೀಕ್ಷೆ ಮಾಡಲೂ ಆದೇಶಿಸಬಹುದು! ಕಾನೂನುರೀತಿ ಆಯೋಗದ ಕಲಾಪಗಳು ನಡೆಯುತ್ತಿಲ್ಲ - ಸಂಘ ಪರಿವಾರದವರ ಹೇಳಿಕೆಗಳೇ ಇಲ್ಲಿ ಕಾನೂನುಗಳಾಗುತ್ತಿವೆ. ಮೊದಲು ಪೊಲೀಸರು ನಮ್ಮನ್ನು ಇಂಟರಾಗೇಟ್ ಮಾಡುತ್ತಿದ್ದರು. ಈಗ ಇವರೆಲ್ಲರ ಸಮ್ಮುಖದಲ್ಲಿ ಸಂಘ ಪರಿವಾರದವರು ನಮ್ಮನ್ನು ಇಂಟರಾಗೇಟ್ ಮಾಡುತ್ತಿದ್ದಾರೆ. ಆಯೋಗವು ವಿಚಾರಣೆಯ ನೆಪದಲ್ಲಿ ನಮಗೆ ಮಾನಸಿಕ ಹಿಂಸೆ ನೀಡುತ್ತಾ ಜನರ ಹಣ ಮತ್ತು ಸಮಯವನ್ನು ಈ ರೀತಿ ವ್ಯರ್ಥವಾಗಿ ಪೋಲು ಮಾಡುವ ಬದಲು ಈ ಆಯೋಗವನ್ನೇ ರದ್ದು ಮಾಡುವುದು ಒಳ್ಳೆಯದು" ಎಂದೆಲ್ಲ ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.

ನ್ಯಾ. ಸೋಮಶೇಖರ್ ಅವರು ಈ ಕ್ರೈಸ್ತರ ತೊಳಲಾಟವನ್ನು ಸೀರಿಯಸ್ ಆಗಿ ಗಮನಿಸದಿದ್ದರೆ ನೊಂದವರು ಈ ಆಯೋಗವನ್ನೇ ಬಹಿಷ್ಕರಿಸುವ ಸಂದರ್ಭ ಬಂದರೂ ಬರಬಹುದು.

● ಚಂದ್ರಶೇಖರ ತೋರಣಘಟ್ಟ

# ನಟಿ ರಮ್ಯ-ಯಡಿಯೂರಪ್ಪ ಸಂದರ್ಶನದ ಅಪ್ರಕಟಿತ ಭಾಗ

## 'ರಮ್ಯ ಚೈತ್ರ ಕಾಲ' ಭಾಗ 2

ಇದೇ ಆಗಸ್ಟ್ 14 ರಂದು ಚಿತ್ರನಟಿ ರಮ್ಯ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಸಂದರ್ಶನ ಮಾಡಿದ್ದು ವಿಜಯ ಕರ್ನಾಟಕ ದೈನಿಕ ಹಾಗೂ ಸುವರ್ಣ ಚಾನೆಲ್‌ನಲ್ಲಿ ಬಂತು. ಆ ಸಂದರ್ಶನ edited version ಆಗಿತ್ತು. ಪ್ರಕಟವಾಗದ ಕೆಲವು ಭಾಗ 'ಲಂಕೇಶ್' ಗೆ ಸಿಕ್ಕಿದೆ. ಅದನ್ನೇ ಇಲ್ಲಿ ಪ್ರಕಟಿಸಿದ್ದೇವೆ. ಓದಿ ಆನಂದಿಸಿ.

ವಿಶ್ವೇಶ್ವರ ಭಟ್: ರಮ್ಯಾ ಅವರೆ ನಮ್ಮ ಪತ್ರಿಕೆಗೆ ಸಿಎಂ ಸಂದರ್ಶನ ಮಾಡುತ್ತೀರಾ?

ರಮ್ಯಾ: ಓ ಯಸ್. ನಂಗೆ ಸಿಎಂ ಭಾಳಾ ಕ್ಲೋಸು.

ವಿಭಟ್: ಹೌದಾ? ಹೇಗೆ?

ರಮ್ಯ: ನಂಗೆ ಬಿಡುವಾದಾಗೆಲ್ಲಾ ಕ್ಯಾಬಿನೆಟ್ ಮೀಟಿಂಗ್‌ಗೆ ಹೋಗ್ತಿದ್ದೆ. ಎಸ್.ಎಂ. ಕೃಷ್ಣರವರ ಜೊತೆ ಪಾಲಿಟಿಕ್ಸ್ ಎಲ್ಲಾ ಡಿಸ್ಕಸ್ ಮಾಡ್ತಾ ಇರ್ತಿನಿ.

ವಿಭಟ್: ಅಯ್ಯೋ ರಾಮಾ... ಈಗ ಸಿಎಂ ಕೃಷ್ಣಾ ಅಲ್ಲ, ಯಡಿಯೂರಪ್ಪಾ ಅಂತಾ ಇದ್ದಾರೆ.

ರಮ್ಯಾ: (ಆಶ್ಚರ್ಯದಿಂದ) Oh God ಹೌದಾ... ನಾನು ಜೀವನ ಪೂರ್ತಿ ಕೃಷ್ಣಾರೇ ಸಿಎಂ ಆಗಿರ್ತಾರೆ ಅಂದುಕೊಂಡಿದ್ದೆ.

ವಿಭಟ್: ಇರಲಿ ಬಿಡಿ, ನೀವು ಸಿಎಂ ಇಂಟರ್‌ವ್ಯೂ ಮಾಡೋವಾಗ ಒಳ್ಳೊಳ್ಳೆ ಪ್ರಶ್ನೆ ಕೇಳಬೇಕು. ಅದು ಟಿವಿಲೂ ಬರುತ್ತೆ.

ರಮ್ಯಾ: ಖುಷಿಯಾಗಿ Oh that's fantastic ಹಾಗಾದ್ರೆ ನಾನು ಈಗಿನಿಂದಲೇ ಮೇಕಪ್ ಮಾಡಿಕೊಳ್ತೀನಿ ಓಕೆನಾ.

ವಿಭಟ್: ಓಕೆ ಮೇಡಂ, ನಾನೂ ನಿಮ್ ಜೊತೆಲಿರ್ತಿನಿ, ಪ್ರಶ್ನೆ ಹೇಳಿಕೊಡೋಕೆ

ರಮ್ಯಾ: ಓ.ಕೆ. ಬನ್ನಿ ಆದ್ರೆ ನೀವು smart ಆಗಿ ಕಾಣೋತರ ಡ್ರೆಸ್ ಮಾಡ್ಕೋಬೇಕು. ಅಷ್ಟೆ.

(ಯಡ್ಡಿ ಗೃಹ ಕಚೇರಿ ಕೃಷ್ಣದಲ್ಲಿ ಸಂದರ್ಶನ ಶುರು. ವಿಪರೀತ ಸೆಂಟು ಬಳಿದುಕೊಂಡ ರಮ್ಯಾ ಪ್ರವೇಶ)

ರಮ್ಯಾ: ಹಾಯ್ ಮಿಸ್ಟರ್ ಎಡ್ಯೂರಾಪ.....!

ಯಡ್ಡಿ : (ಮುಖ ಅರಳಿಸುತ್ತಾ) ನಮಸ್ಕಾರ ಮಾತೆ, ಬನ್ನಿ.

ರಮ್ಯಾ: ನಾನು ಮಾತೆ ಅಲ್ಲ, ರಮ್ಯಾ ಅಂತ.

ಯಡ್ಡಿ: ನನಗೆ ಗೊತ್ತಿದೆ. ಆದರೆ ಮಹಿಳೆಯರನ್ನೆಲ್ಲಾ 'ಮಾತೆ' ಅನ್ನಬೇಕಂತಾ ನನಗೆ RSS ನವರು ಹೇಳಿಕೊಟ್ಟಿದ್ದಾರೆ.

ರಮ್ಯಾ: ಎಲ್ಲಾ ಲೇಡಿಸ್‌ಗಳೂ ಮಾತೆ ಅಂತಾದ್ರೆ RSSನವರು ಯಾರನ್ನ ಮದುವೆ ಆಗ್ತಾರೆ.

ಯಡ್ಡಿ: ಅದೇ ನಮಗೆ ಫಜೀತಿ ಆಗಿರೋದು, ಆದ್ರೆ ಏನ್ ಮಾಡ್ತೀರಿ. ಹೇಗೊ ಅಡ್ಜಸ್ಟ್ ಮಾಡಿಕೊಂಡು ದೇಶಸೇವೆ ಮಾಡ್ತಾ ಇದೀವಿ.

ರಮ್ಯಾ: ಓಕೆ ನೀವು ಸಿಎಂ ಆಗದೆ ಇದ್ರೆ ಬೇರೆ ಏನಾಗಿರ್ತಿದ್ರಿ?

ಯಡ್ಡಿ: (ಕೈಮುಗಿದು ಕಣ್ಣುಮುಚ್ಚಿ) ಸಮಾಜ ಸೇವೆ ಮಾಡ್ತಾ ಇದ್ದೆ.

ರಮ್ಯಾ: Oh ಸೋಷಿಯಲ್ ಸರ್ವೀಸ್. I like it. ನಂಗೂ ಪೂರ್ ಪೀಪಲ್ ನೋಡಿದ್ರೆ, ಏನಾದ್ರೂ ಸೋಷಿಯಲ್ ಸರ್ವಿಸ್ ಮಾಡಬೇಕು ಅನ್ನಿಸುತ್ತೆ, ಆದ್ರೆ ಶೂಟಿಂಗ್ ಅಂತಾ ಬ್ಯುಸಿ ಇರ್ತೀನಲ್ಲಾ, free time ಸಿಗೋದೇ ಇಲ್ಲ.

ವಿಭಟ್: (ರಮ್ಯಾ ಕಿವಿಯಲ್ಲಿ) ಮೇಡಂ ಅವ್ರಿಗಿಂತಾ ನೀವೇ ಜಾಸ್ತಿ ಮಾತಾಡ್ತಾ ಇದೀರ.

ರಮ್ಯಾ: (ಕಣ್ಣರಳಿಸುತಾ) ok.... ನೀವು ಚಿಕ್ಕೋರಿದ್ದಾಗ ಸಿನಿಮಾ ನೋಡ್ತಿದ್ರಾ?

ಯಡ್ಡಿ: (ಗಂಭೀರವಾಗಿ) ನೋಡ್ತಿದ್ದೆ, ಆದ್ರೆ, ಬರೀ ದೇಶ ಭಕ್ತಿ ಸಿನಿಮಾ ಮಾತ್ರ.

ರಮ್ಯಾ: ನಂಗೂ ಅಷ್ಟೆ. ದೇಶಭಕ್ತಿ ಅಂದ್ರೆ ತುಂಬಾ ಇಷ್ಟ. ನಿಮಗೆ ಸಿನಿಮಾದಲ್ಲಿ act ಮಾಡಬೇಕು ಅನ್ನಿಸುತ್ತಾ?

ಯಡ್ಡಿ: ಹೌದು ಛಾನ್ಸ್ ಸಿಕ್ಕಿದರೆ ಭಗತ್‌ಸಿಂಗ್, ಶಿವಾಜಿ ಪಾತ್ರ ಮಾಡ್‌ತೀನಿ.

ರಮ್ಯಾ: ಆದ್ರೆ ರಜನಿಕಾಂತ್ ಈಗಾಗಲೇ ಶಿವಾಜಿ ಪಿಚ್ಚರ್ ತೆಗೆದುಬಿಟ್ಟಿದ್ದಾರಲ್ಲ!

ವಿಭಟ್: (ರೇಗುತ್ತಾ) ರೀ ರಮ್ಯಾ ಆ ಶಿವಾಜಿ ಬೇರೆ ಈ ಶಿವಾಜಿ ಬೇರೆ ಕಂಣ್ರಿ.

ರಮ್ಯಾ: ಓ.... ಹೌದಾ ಸ್ಸಾ....ರಿ ಈ ಭಗತ್ ಸಿಂಗ್ ಅಂದ್ರೆ ಯಾರು?

ಯಡ್ಡಿ: ಆತ ಭಾರತಮಾತೆಯ ವೀರಪುತ್ರ. ಹಿಂದೂ ಧರ್ಮಕ್ಕಾಗಿ ಇಂಗ್ಲಿಷರ ವಿರುದ್ಧ ಹೋರಾಡಿದ. ಅದಕ್ಕೆ ಅವನ್ನ ಗಲ್ಲಿಗೇರಿಸಿದರು.

ರಮ್ಯಾ: ಒಳ್ಳೇ ಕೆಲಸ ಮಾಡಿದರು ಬಿಡಿ, ಬ್ರಿಟಿಷರು ಬಂದಿದ್ದಕ್ಕೆ ತಾನೆ ನಾವು ಇಂಗ್ಲಿಷ್‌ನಲ್ಲಿ ಮಾತಾಡೋದನ್ನ ಕಲಿತಿದ್ದು. ನಂಗೆ white people ಅಂದ್ರೆ ಇಷ್ಟ. ನಾನು ಶಾಪಿಂಗ್ ಎಲ್ಲಾ ಲಂಡನ್‌ನಲ್ಲೇ ಮಾಡೋದು.

ವಿಭಟ್ (ತಲೆ ಚಚ್ಚಿಕೊಳ್ಳುತ್ತಾ) : ರಮ್ಯಾ ಅವರೆ ಪ್ಲೀಸ್ hold your tongue. ನೀವು ಹೀಗೆ ಮಾತಾಡ್ತಾ ಇದ್ರೆ ಇಂಟರ್‌ವ್ಯೂ ಕ್ಯಾನ್ಸಲ್ ಮಾಡಿಬಿಡ್ತಿನಿ. ನಿಮಗೆ ದುಡ್ಡು ಕೊಡಲ್ಲ ಅಷ್ಟೆ.

ರಮ್ಯಾ (ಗಡಿಬಿಡಿಯಿಂದ) : ಓ.ಕೆ.. ಓಕೆ, ನೀವು ಯಾವ ಫರ್‌ಫ್ಯೂಮ್ ಯೂಸ್ ಮಾಡ್ತೀರಾ?

ಯಡ್ಡಿ: ಮೈಯಲ್ಲಿ ಹಿಂದೂ ರಕ್ತ ಹರಿತಿರೋರಿಗೆ ಯಾವ ಫರ್‌ಫ್ಯೂಮೂ ಬೇಕಾಗಿಲ್ಲ.

ರಮ್ಯಾ: ನೀವು ಪೆಡಿಕ್ಯೂರ್, ಫೇಷಿಯಲ್ ಮಾಡಿಸಿಕೊಳ್ತೀರಾ?

ಯಡ್ಡಿ: (ತಬ್ಬಿಬ್ಬಾಗಿ) ಹಾಗಂದ್ರೆ!?

ರಮ್ಯಾ: ಹೋಗ್ಲಿ ಬಿಡಿ. ಲಂಕೇಶ್ ವಾರಪತ್ರಿಕೆಯವರು ಒಂದು ಸಿನಿಮಾ ಸ್ಕ್ರಿಪ್ಟ್ ರೆಡಿ ಮಾಡಿ ನನಗೆ ಕಳಿಸಿದಾರೆ, ನೀವು ಅದರಲ್ಲಿ ಆಕ್ಟ್ ಮಾಡ್ತೀರಾ ಕೇಳಿ ಅಂದಿದ್ದಾರೆ, ಕತೆ ಹೇಳಲಾ?

ಯಡ್ಡಿ (ಕಿರಿಕಿರಿಯಿಂದ): ಆಗಲಿ ಹೇಳಿ. ಆದ್ರೆ ಟಿವಿ ಕ್ಯಾಮರಾ ಆಫ್ ಮಾಡಿಸಿ ಕತೆ ಹೇಳಿ.

(ಟಿವಿ ಕ್ಯಾಮರಾ ಆಫ್ ಆಗುತ್ತದೆ. ರಮ್ಯಾ ಸಹಾಯಕ ಕತೆ ಹೇಳುತ್ತಾನೆ)

ಸಹಾಯಕ: ನಮ್ಮ ಮಂಡ್ಯಾ ಡಿಸ್ಟ್ರಿಕ್‌ನವನೇ ಹೀರೋ. ಅವನೊಬ್ಬ ಅನಾಥ. ಬೂಕನಕೆರೆಯಿಂದ ಕೆಲಸ ಹುಡುಕಿಕೊಂಡು ಮಲೆನಾಡಿಗೆ ಹೋಗಿ ಸೆಟಲ್ ಆಗ್ತಾನೆ. ಅಲ್ಲೇ ಮದುವೆಯಾಗಿ ಜೀವನ 'ಮೈತ್ರಿ' ಆರಂಭಿಸುತ್ತಾನೆ. ಈ ಮೈತ್ರಿ ಶುರುವಾದ ತಕ್ಷಣ ಹೆಂಡತಿಯ ತಂಗಿ ಸೂಸೈಡ್ ಮಾಡಿಕೊಳ್ತಾಳೆ. ಇಬ್ಬರು ಮೈದುನರಿಗೂ ಹುಚ್ಚು ಹಿಡಿದು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆ ಸೇರುತ್ತಾರೆ. ಹೀರೋನ ಮಾವ ಎದೆಯೊಡೆದು ಸಾಯುತ್ತಾನೆ. ಮಾವನ ಆಸ್ತಿಯೆಲ್ಲಾ ಹೀರೋಗೆ ಬರುತ್ತೆ.

ಯಡ್ಡಿ: (ಅನುಮಾನದಿಂದ) ಈ ಕತೆ ನನಗೆ ಗೊತ್ತಿರೋ ಹಾಗಿದೆಯಲ್ಲ.

ಸಹಾಯಕ: ನಿಮಗೊಬ್ಬರಿಗೆ ಅಲ್ಲ, ಇಡೀ ಕರ್ನಾಟಕಕ್ಕೆ ಗೊತ್ತಿರೋ ಕತೆ ಸಾರ್ ಇದು. ಮುಂದೆ ಹೇಳ್ತೀನಿ ಕೇಳಿ. ಒಂದಿನ ಹೀರೋ ಹೆಂಡತಿ ಒಂದು ಅಡಿ ಅಗಲದ ಸಂಪ್‌ನೊಳಗೆ ಬಿದ್ದು ಸಾಯುತ್ತಾಳೆ!

ಯಡ್ಡಿ (ಸಿಟ್ಟಿಗೆದ್ದು): ಏನ್ರಿ ತಮಾಷೆ ಮಾಡ್ತಿದ್ದೀರಾ, ಅಷ್ಟು ಚಿಕ್ಕ ಸಂಪ್‌ನೊಳಗೆ ಯಾರಾದ್ರು ಬೀಳೋಕೆ ಸಾಧ್ಯವೇನ್ರಿ?

ಸಹಾಯಕ: ಸಾಧ್ಯ ಅಂತ ಶಿವಮೊಗ್ಗ ಪೊಲೀಸರೇ ರಿಪೋರ್ಟ್ ಕೊಟ್ಟಿದಾರೆ ಸಾರ್. ನಿಮಗೆ ಡೌಟ್ ಇದ್ರೆ ಸಂಪ್ ಇನ್ನೂ ದೊಡ್ಡದು ಮಾಡೋಣ ಬಿಡಿ.

ರಮ್ಯಾ: ಗುಡ್ ಐಡಿಯಾ, ಮುಂದೆ ಕೇಳಿ ಬಹಳ ಇಂಟರೆಸ್ಟಿಂಗ್ ಆಗಿದೆ.

ಸಹಾಯಕ: ಸಂಪ್ ಘಟನೆ ಆದ ಮೇಲೆ ಹೀರೋಗೆ ಜೀವನ ನಿರಾಳ ಅನ್ನಿಸುತ್ತೆ. ಆಗ "ಆಡಿಸಿ ನೋಡು, ಸಂಪ್‌ನೊಳಗೆ ಬೀಳಿಸಿ ನೋಡು" ಅಂತಾ ಒಂದು ಸೋಲೊ ಸಾಂಗ್ ಬರುತ್ತೆ.

ವಿಭಟ್ಟ: ನಮ್ಮ ಎಂಎಲ್‌ಸಿ ದಡ್ಡರಂಗೇಗೌಡಾ ಬರೆದಿರೋ ಹಾಡು ಸಾರ್.

ಸಹಾಯಕ: ಈ ಸಾಂಗ್ ಆದ ಮೇಲೆ ಹೀರೋ ಒಂಟಿಯಾಗಿರಲಾಗದೆ ಶೋಭಾ ಯಾತ್ರೆಗೆ ಹೋಗ್ತಾನೆ. ಅಲ್ಲೇ ಸೆಕೆಂಡ್ ಹಿರೋಯಿನ್ ಎಂಟ್ರಿಯಾಗ್ತಾಳೆ ಸಾರ್.

ಯಡ್ಡಿ: (ಅಸಹನೆಯಿಂದ): ರೀ ವಿಶ್ವೇಶ್ವರ್ ಭಟ್, ನನಗ್ಯಾಕೋ ಈ ಸಿನಿಮಾ ಕತೆ ಬೇಡಾ ಅನ್ಸುತ್ತೆ, ಬೇರೆ ಏನಾದ್ರೂ ಪ್ರಶ್ನೆ ಕೇಳೋಕೆ ಹೇಳ್ರಿ.

ರಮ್ಯಾ: ಓ.ಕೆ... ನಿಮಗೆ ಯಾರನ್ನ ಕಂಡ್ರೆ ಭಯ ಆಗುತ್ತೆ?

ಯಡ್ಡಿ: ಮೈ.ಚ. ಜಯದೇವ ಅಂತಾ ಇದಾರೆ. ಅವರನ್ನ ನೋಡಿದರೆ ನನಗೆ ಭಯ.

ರಮ್ಯಾ ಸಹಾಯಕ : ಯಾರೂ.... ಮಚ್ಚ ಜೈದೇವನಾ, ಯಾವ್ದೋನ್ ಸಾರ್ ಅವ್ನು ಯಾಕ್ ಹೆದರ್‌ತೀರಾ ಸಾರ್. ನಮ್ ಸಿನಿಮಾದಲ್ಲಿ ಆ ಮಚ್ಚಾನ್ನೇ ವಿಲನ್ ಆಗಿಸಿಬಿಡೋಣ. ನೀವು ಫೈಟಿಂಗ್ ಸೀನ್‌ನಲ್ಲಿ ಬೇಜಾನ್ ಒದೀಬಹುದು.

ಯಡ್ಡಿ: (ಸಿಟ್ಟಿನಿಂದ ಮೇಲೆದ್ದು) ರೀ, ಇಂಟರ್‌ವ್ಯೂ ಸಾಕು, ನಂಗೆ ಬೇರೆ ಕೆಲಸಾ ಇದೆ. ನಡೀರಿ ಇನ್ನು.

ರಮ್ಯಾ: ಸಾರ್ one last question.

ಯಡ್ಡಿ: ಸರಿ ಕೇಳಿ.

ರಮ್ಯಾ: ನಿಮ್ಮ ಪ್ರಕಾರ ಸ್ವಾತಂತ್ರ ಅಂದರೆ ಏನು?

ಯಡ್ಡಿ: ಮಹಿಳೆಯರು ಒಂಟಿಯಾಗಿ ರಾತ್ರಿ ಹನ್ನೆರಡೂವರೇಲಿ ಓಡಾಡೋ ಹಾಗಾಗಬೇಕು ಅದೇ ನನ್ನ ಕನಸು!

ವಿಭಟ್ಟ: ಸಾರ್ ನಂಗೊಂದು ದೌಟು ಕೇಳಲಾ?

ಯಡ್ಡಿ (ಉತ್ಸಾಹದಿಂದ): ಯಸ್ ಕೇಳಿ... ಕೇಳಿ!

ವಿಭಟ್ಟ: ಸಾರ್, ಕರ್ನಾಟಕದ ಲೇಡಿಸ್ ಎಲ್ಲಾ ಹೀಗೆ ರಾತ್ರಿ ರೋಡಲ್ಲಿ ಸುತ್ತೋಕೆ ಶುರು ಮಾಡಿದ್ರೆ ಮನೇಲಿ ಜಂಟ್ಸ್ ಜಂಟಿಯಾಗಿರಬೇಕಾಗುತ್ತಲ್ಲಾ ಸಾರ್.

RSS ಹೃದ! (ಮಧ್ಯಪ್ರವೇಶಿಸಿ) : ನಾವು ಈ ಗುರೂಜಿ ಗೋಲ್ವಾಲ್ಕರ್ ಮಾತು ಕೇಳಿ ಜೀವನಾ ಪೂರ್ತಿ, ರಾತ್ರಿನೂ ಖಾಕಿ ಚಡ್ಡಿ ತೆಗೀದೆ ಒಂಟಿಯಾಗಿ ಮಲಗಿರಲ್ವಾ, ಬೇರೆ ಗಂಡಸರೂ ಹಾಗೇ ಇರಲಿ ಬಿಡಿ.

ರಮ್ಯಾ ಸಹಾಯಕ (ಏನೋ ಹೊಳೆದಂತೆ) ಒಂದು ಐಡಿಯಾ, ನಂ ಸಿನಿಮಾದಲ್ಲಿ ಆರ್ಟಿಕಲ್ 377 ವಿಚಾರ ತಂದುಬಿಡೋಣ, ಆಗ ಕತೆಗೆ ಒಂದು ಕಾಂಟೆಂಪರರಿ ಇಷ್ಯೂನು ಸೇರಿ ಸಿನಿಮಾ ಹಿಟ್ ಆಗುತ್ತೆ.

ಯಡ್ಡಿ: ಸರಿ, ಇಂಟರ್‌ವ್ಯೂ ಮುಗೀತಾ?

ರಮ್ಯಾ: ತಡೀರಿ ಸಾರ್. ಹೆಂಗಸರು ರಾತ್ರಿ ಹೊತ್ತು ಓಡಾಡೋದಿರ್ಲಿ. ಹಗಲು ಹೊತ್ತಲ್ಲೇ ಓಡಾಡೋಕೆ ಹೆದರುತ್ತಿದ್ದಾರಲ್ಲ. ಅದಕ್ಕೇನು ಮಾಡ್ತೀರಾ?

ಯಡ್ಡಿ: (ಮೃದು ದನಿಯಿಂದ) ಯಾಕಮ್ಮಾ ಭಯ ಏನಾಗಿದೆ ಈಗ?

ರಮ್ಯಾ: ಅದೇ ಸಾರ್ ಹುಡುಗೀರು ಜೀನ್ಸ್ ಪ್ಯಾಂಟ್ ಹಾಕ್ಕೊಂಡ್ರೆ ಹೊಡೀತಾರಂತಲ್ಲ.

ಯಡ್ಡಿ: ಯಾರಮ್ಮ ಅವರು. ನಮ್ಮ ಹೋಂ ಮಿನಿಸ್ಟರ್ ಹೇಳಿ ಒದ್ದು ಒಳಗೆ ಹಾಕಿಸೋಣ ಹೇಳಮ್ಮ ಯಾರದು.

ರಮ್ಯಾ: ಅದೇ ಸಾರ್. ಡಾ. ವಿ.ಎಸ್. ಆಚಾರ್ಯ ಕಡೆಯೋರಂತೆ. ಹಿಂದೂ ಸಂಘ ಅಂತ ಲೋಫರ್ಸ್, ಇದೆಲ್ಲಾ ಪೇಪರ್‌ನಲ್ಲಿ ಬಂದಿತ್ತು.

ವಿಭಟ್ಟ: (ಗಾಬರಿಯಿಂದ) ಸುಳ್ಳು... ಸುಳ್ಳು ನಂ ಪೇಪರಲ್ಲಿ ಹಾಗಂತ ಬರೆದಿಲ್ಲ. ಹಿಂದೂ ಸಂಘಟನೆಯವರೆಲ್ಲಾ ದೇಶಭಕ್ತರು ಅಂತಲೇ ನಾನು ಬರೆಸಿರೋದು.

ರಮ್ಯಾ: ಹೋಗಲಿ ಬಿಡಿ ಸಿಎಂ ಸಾರ್, ನಿಮ್ಮ ಮೊಮ್ಮಗಳು ಜೀನ್ಸ್ ಪ್ಯಾಂಟ್ ಹಾಕ್ಕೊಂಡು ಕಾಲೇಜಿಗೆ ಹೋಗ್ತಾಳಂತೆ. ಅವಳಿಗೆ ಯಾರೂ ಹೊಡೆಯಲ್ವಾ?

ಯಡ್ಡಿ: (ಕೋಪದಿಂದ): ರೀ ಸಂದರ್ಶನ ಸಾಕು ಎದ್ದೋಗ್ರಿ... ರೀ ವಿಶ್ವೇಶ್ವರ ಭಟ್ ನೀವೇ ಎಲ್ಲಾ ಕರೆಕ್ಟಾಗಿ ಎಡಿಟ್ ಮಾಡಿ ಪ್ರಿಂಟ್ ಮಾಡಿಸಿಬಿಡಿ. ದೇಶಸೇವೆ ಮಾಡಲು ನಂಗೆ ಟೈಂ ಆಯ್ತು ಹೋಗ್ತೀನಿ.

ಎಲ್ಲರೂ: ಥ್ಯಾಂಕ್ಯು ಸರ್

ರಮ್ಯಾ: ಭಟ್ ಸಾರ್. ಹೇಗಿತ್ತು ಇಂಟರ್‌ವ್ಯೂ. ಜ್ಯುವೆಲ್ಸ್ ಆಮೇಲೆ ಕಾಸ್ಟೂಮ್ ಎಲ್ಲಾ ನಾನೇ ಇಟ್ಕೊಳ್ಳಲಾ...




ವಿಡಂಬನೆ
● ಈಶ


# "ಆರೆಸೆಸ್ ಸೇರಿದ್ರೆ ಬುದ್ಧಿ ಬೆಳವಣಿಗೆ ನಿಂತೋಗತ್ತೆ ಸಾರ್"

ಪತ್ರಿಕೆ ನನ್ನ ಮೇಲೆ ಗುರುತರವಾದ ಜವಾಬ್ದಾರಿ ಹೊರೆಸಿತ್ತು, ಅದೇನೆಂದರೆ ಯಾವುದಾದರೊಂದು ಬೆದಗಿಯನ್ನಿಡಿದು ಅದನ್ನು ಎಡೂರಪ್ಪನ ಬಳಿ ಕಳುಹಿಸಿ ಸಂದರ್ಶನ ಮಾಡಿಸಬೇಕು ಎಂದು. ನನಗೆ ಮೈ ಉರಿದುಹೋಯ್ತು, ನಾನು ಪ್ರಶ್ನೆ ಕೇಳುವವನಾಗಿ, ಬರೆಯುವವನಾಗಿ ಯಾವುದೋ ಹುಡುಗಿಯನ್ನ ಪೂಸಿ ಮಾಡಿ ಎಡೂರಪ್ಪನ ಹತ್ತಿರ ಕಳುಹಿಸುವುದು ಶುದ್ಧ ತಲೆ ಹಿಡುಕತನ. ಅಂತಹ ಸಿರ್‌ಪಕುಡುಕು ಕೆಲಸ ನನ್ನಿಂದ ಸಾಧ್ಯವೇಯಿಲ್ಲವೆಂದು ಸಿಟ್ಟಿನಿಂದ ಎಡೂರಪ್ಪನ ಮನೆಯ ಬಳಿ ಸುಳಿದೆ. ಸೆಕ್ಯೂರಿಟಿಯವರು ಒಳಗೆ ಬಿಡಲಿಲ್ಲ, ಅಲ್ಲಿಂದಲೇ ಫೋನ್ ಮಾಡಿದೆ.

ರಿಂಗಾಯ್ತು, ರಿಂಗ್ ಟೋನ್: "ಬಿಸಿಲಾದರೇನು, ಮಳೆಯಾದರೇನು ಜೊತೆಯಾಗಿ ಎಂದೂ ನೀನಿಲ್ಲವೇನು...."

"ಹಲೋ ಯಾರು?"

"ನಾನು ಸಾರ್ ಯಾಹು, ನಿಮ್ಮನ್ನ ಮಾತನಾಡಸನಾ ಅಂತ ಬಂದೆ. ಸೆಕ್ಯೂರಿಟಿಯವರು ಒಳಗೆ ಬಿಡ್ತಾಯಿಲ್ಲ ಸಾರ್."



"ಪಾಪ, ಅದವರ ಕರ್ತವ್ಯ ಏನು ಮಾಡಕ್ಕಾಗಲ್ಲ."

"ಒಂದೇ ನಿಮಿಷ ಸಾರ್, ಒಂದೆರಡು ಪ್ರಶ್ನೆ ಕೇಳ್ತಿನಿ."

"ಕೇಳಿ."

"ಸ್ವಾತಂತ್ರ್ಯೋತ್ಸವದ ಈ ಸಮಯದಲ್ಲಿ ಕರ್ನಾಟಕದ ಜನತೆಗೆ ನಿಮ್ಮ ಸಂದೇಶ ಏನು ಸಾರ್?"

"ಆ ಭಗವಂತ ಈ ಜನಕ್ಕೆ ಒಳ್ಳೆ ಸದ್‌ಬುದ್ಧಿ ಕೊಡ್ಲಿ ಅಂತ ಕೇಳಿಕೊತಿನಿ."

"ಅಂದ್ರೆ ಈಗ್ಯಾರಿಗೂ ಬುದ್ಧೀನೇ ಇಲ್ಲ ಅಂದಂಗಾಯ್ತಲ್ಲಾ ಸಾರ್?"

"ಬುದ್ದಿ ಇದೆ, ಸದ್‌ಬುದ್ಧಿಯಿಲ್ಲ."

"ಸದ್‌ಬುದ್ಧಿ ಅಂದ್ರೇನು ಸಾರ್?"

"ಅದು ನಮ್ಮ ಆರೆಸೆಸ್‌ನೋರತ್ರ ಇದೆ. ಎಲ್ರೂ ಸಂಘಕ್ಕೆ ಸೇರಿದ್ರೆ ಸದ್‌ಬುದ್ಧಿ ಬರುತ್ತೆ."

"ನೀವು ಮಂಡ್ಯ ಜಿಲ್ಲೆ ಬೂಕನ ಕೆರೆಲುಟ್ಟಿ, ಶಿಕಾರಿಪುರಕ್ಕೆ ಹೋದ್ರಲ್ಲ ಯಾಕ್ ಸಾರ್?"

"ಅದು ಶಿಕಾರಿಗೋಸ್ಕರ ಹೋದದ್ದು. ಅಲ್ಲಿ ಶಾಸ್ತ್ರಿ ಅನ್ನೋರ ರೈಸ್ ಮಿಲ್ಲಿತ್ತು, ಭೂಮಿಯಿತ್ತು, ಆ ಭೂಮಿಯಷ್ಟೇ ಒಳ್ಳೆಯವಳಾದ ಮೈತ್ರಾದೇವಿ ಇದ್ಲು, ಹಾಗಾಗಿ ಅಲ್ಲೇ ಶೆಟ್ಲಾದೆ."

"ಬೇಜಾರಾಗಬೇಡಿ ಸಾರ್. ನೀವು ಏನೂ ಅಲ್ಲದ ಕಾಲದಲ್ಲಿ ಹೇಗಿದ್ರೊ ಹಾಗೆ ಮಾತಾಡಬೇಕು, ಅಂದ್ರೆ ಈ ಸಂದರ್ಭ ಮರೆತು ಮಾತನಾಡಬೇಕು."

"ಈ ಸಂದರ್ಭ ಮರತು ಮಾತಾಡಕ್ಕಾಗಲ್ಲ ಕಂಡ್ರಿ."

"ಹೋಗ್ಲಿ, ಮಂಡ್ಯ ಬಿಟ್ಟೋದ ನೀವು ಶಿಕಾರಿಪುರದಲ್ಲಿ ನೆಲೆಸಿದ್ರಿ. ನಿಮ್ಮಲ್ಲಿರೋದು ಮಂಡ್ಯದ ಸಂಸ್ಕೃತಿನೊ, ಶಿಕಾರಿಪುರದ ಸಂಸ್ಕೃತಿನೊ?"

"ಎರಡೂ ಅಲ್ಲ, ನನ್ನಲ್ಲಿರೋದು ಸಂಘದ ಸಂಸ್ಕೃತಿ."

"ಅದಕ್ಕೆ ನೀವು ಈ ರಾಜ್ಯದ ದೊಡ್ಡ ಸಮಸ್ಯೆಯಾಗಿರ ಬಹುದಲ್ಲವ ಸಾರ್."

"ಏನೇಳ್ತಯಿದ್ದೀರಿ ನೀವು? ರಾಜ್ಯದ ಬೆಟ್ಟದಂತಹ ಸಮಸ್ಯೆಗಳನ್ನ ಬಗೆಹರಿಸೋದಕ್ಕೆ ಹೋರಾಡ್ತಯಿದ್ದಿನಿ."

"ಥ್ಯಾಂಕ್ಸ್ ಸಾರ್. ಕನ್ನಡಿಗರು, ತಮಿಳರನ್ನು ಒಟ್ಟುಗೂಡಿಸಿದ್ರಿ. ಕರ್ನಾಟಕ ರಕ್ಷಣಾ ವೇದಿಕೆಯವರ ಸೊಂಟ ಮುರುದ್ರಿ. ರೈತರಿಗೆ ಬೀಜ, ಗೊಬ್ಬರ, ಕರಂಟು ಯಾವುದನ್ನು ಕೊಡದೆ ಬಾಯಿ ಮುಚ್ಚಿಸಿದ್ರಿ. ನಿಜವಾಗ್ಲು ಇವೆಲ್ಲಾ ಬೆಟ್ಟದಂತಹ ಸಮಸ್ಯೆಗಳೆ. ಈಗ ಚುಟುಕಾದ ಪ್ರಶ್ನೆ ಕೇಳ್ತಿನಿ. ಆತ್ಮವಂಚನೆಯಿಲ್ಲದೆ ಉತ್ತರ ಕೊಡಿ ಸಾರ್."

ಥೂತ್ತೇರಿ ▸ ಯಾಹೂ

"ಆಯ್ತು ಕೇಳಿ."

"ನಿಮಗಿಷ್ಟವಾದ ತಿಂಡಿ ಯಾವುದು?"

"ಚಿತ್ರಾನ್ನ."

"ಯಾಕ್ ಸಾರ್ ಚಿತ್ರಾನ್ನ ಇಷ್ಟಪಡ್ತಿರಿ?"

"ಅದೂ, ನಾನು ಸಂಘದ ಸಂಚಾಲಕನಾಗಿದ್ದಾಗ ರೂಮಲ್ಲಿದ್ದುಕೊಂಡು ನಾನೇ ಅಡಿಗೆ ಮಾಡಿಕೊಳ್ತಿದ್ದೆ. ರಾತ್ರಿ ಮಿಕ್ಕ ಅನ್ನಕ್ಕೆ ಬೆಳಿಗ್ಗೆ ಒಗ್ಗರಣೆ ಹಾಕಿದಾಗ, ಅದು ಚಿತ್ರಾನ್ನ ಆಗೋದು. ಸುಲಭವಾದ ತಿಂಡಿ. ಮತ್ತೆ ಹೊಟ್ಟೆ ತುಂಬತ್ತೆ. ಅದ್ಕೆ ಚಿತ್ರಾನ್ನ ತುಂಬಾ ಇಷ್ಟ."

"ನನಿಗೂ ಇಷ್ಟ ಸಾರ್. ಸುಮಾರು ಏಳೆಂಟು ವರ್ಷ ಮಾಡಿಕೊಂಡು ತಿಂದಿದ್ದಿನಿ. ಇನ್ನ ಮುಂದಿನ ಪ್ರಶ್ನೆ ಸಾರ್. ನಿಮಗೆ ಇಷ್ಟವಾದ ಡ್ರೆಸ್ ಯಾವುದು ಸಾರ್?"

"ಚಡ್ಡಿ."

"ಬಹಳ ಕಂಫರ್ಟಬಲ್ ಡ್ರೆಸ್ಸು ಸಾರ್. ಒಳ್ಳೆ ಗಾಳಿಯಾಡುತ್ತೆ, ಆಟ ಆಡಕ್ಕೆ, ಓಡಕ್ಕೆ, ಸುಲಭವಾಗಿ ಮೂತ್ರ ಮಾಡಕ್ಕೂ ಅನುಕೂಲವಾದ ಡ್ರೆಸ್ಸದು. ಮುಂದಿನ ಪ್ರಶ್ನೆ, ನಿಮಗೆ ಇಷ್ಟವಾದ ಆಯುಧ ಯಾವುದು ಸಾರ್?"

"ಲಾಟಿ."

"ಬಹಳ ಒಳ್ಳೆ ಆಯುಧ ಸಾರ್ ಅದು. ದೇಹರಕ್ಷಣೆಗೆ ಚೆನ್ನಾಗಿ ಬಳಸಬಹುದು. ಹರೆಯದಲ್ಲಿ ಅವರಿವರಿಗೆ ಆತಂಕ ಹುಟ್ಟಿಸೋದಕ್ಕೆ ಬಳಸಬಹುದು. ವಯಸ್ಸಾದ ಮೇಲೆ ಊರಿಕೊಂಡು ತಿರುಗಬಹುದು. ಸಾಬರ ಹುಡುಗರನ್ನ ಬೆದರಿಸಬಹುದು. ಅದರ ಉಪಯೋಗದ ಪಟ್ಟಿ ದೊಡ್ಡದಿದೆ ಸಾರ್. ಮುಂದಿನ ಪ್ರಶ್ನೆ, ನಿಮಗಿಷ್ಟವಾದ ಪುಸ್ತಕ ಯಾವುದು?"

"ಚಿಂತನಗಂಗಾ."

"ನಿಜಕ್ಕೂ ಒಳ್ಳೆ ಬುಕ್ಕು ಸಾರ್. ಸಾಬರಿಗೆ ಖುರಾನ್ ಇದ್ದಂಗೆ ನಿಮ್ಮಂತವರಿಗೆ ಚಿಂತನಗಂಗಾ. ಅದನ್ನ ಓದ್ತಾಯಿದ್ರೆ ನಾನೇ ಒಂದು ಚಡ್ಡಿ ಹೊಲಿಸಿಕೊಂಡು ಬದರದಡಿ ಹಿಡಕೊಂಡು ನಿಮ್ಮ ಜೊತೆ ಸೇರಣಾ ಅನ್ನುತ್ತೆ ಸಾರ್."

"ಅಂಗಿದ್ರೆ ಸೇರಿ ಯಾಹು ಅವರೆ."

"ಸೇರಿದ ಕೂಡ್ಲೆ ಬುದ್ದಿ ಬೆಳವಣಿಗೆ ನಿಂತೋಗತ್ತೆ ಸಾರ್. ಅದೇ ಭಯದಿಂದ ಸೇರಿಲ್ಲ."

"ರೀ, ಆರೆಸ್ಸೆಸ್ ಸೇರಿದ್ರೆ ಬುದ್ದಿ ಬೆಳವಣಿಗೆ ನಿಲ್ಲುತ್ತೇನ್ರಿ?"

"ದೇವರಾಣೆ ನಿಂತೋಗತ್ತೆ ಸಾರ್. ಒಂದು ನೂರು ಉದಾಹರಣೆ ಕೊಡಬಲ್ಲೆ. ಈಗ ಮುಂದಿನ ಪ್ರಶ್ನೆ, ನಿಮ್ಮ ಮೆಚ್ಚಿನ ನಟ ಯಾರು ಸಾರ್?"

"ಶ್ರೀನಾಥ್."

"ಒಳ್ಳೆ ನಟ ಸಾರ್. ನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ಅರ್ಚಕನ ತರ ಕಾಣ್ತರೆ. ಆ ದೇಹಕ್ಕೆ ಎಷ್ಟಗಲನಾದ್ರು ನಾಮ ಯಳೀಬಹುದು. ಮೆಚ್ಚಿನ ನಟಿ ಯಾರು ಸಾರ್?"

"ಶ್ರುತಿ."

"ಒಳ್ಳೆ ನಟಿ ಸಾರ್. ನಿಮಗೆ ಶೋಭಾಗಿಂತ ಮೊದಲೆ ಪರಿಚಯವಾಗಬೇಕಿತ್ತು. ದಡ್ಡಿ ಹೋಗಿ 420 ಕೈಹಿಡುದ್ಲು. ಹೋಗ್ಲಿ, ನಿಮ್ಮ ಮೆಚ್ಚಿನ ಮಂತ್ರಿ ಯಾರು ಸಾರ್?"

"ಶ್ರೀರಾಮುಲು."

"ಬೆಸ್ಟು ಮಿನಿಷ್ಟ್ರು ಸಾರ್. ಅನಾರೋಗ್ಯ ಮಂತ್ರಿಗೆ ಆರೋಗ್ಯ ಕಾತೆ ಕೊಟ್ಟದ್ದಿರಿ. ಬಳ್ಳಾರಿ ಜೈಲಲ್ಲಿರಬೇಕಾದೋನು ಬಳ್ಳಾರಿ ಮಂತ್ರಿ. ಹಾಳುಬಿದ್ದೋಗ್ಲಿ, ಮೆಚ್ಚಿನ ಪ್ರೇಯಸಿ ಯಾರು ಸಾರ್?"

"ಪಾಸ್."

"ಸಾರಿ, ಮೆಚ್ಚಿನ ರಾಜಕಾರಣಿ ಯಾರು ಸಾರ್?"

"ದೇವೇಗೌಡರು."

"ಹೌದಾ? ಯಾಕೆ ಸಾರ್?"

"ಅವರೂ ನನ್ನಂಗೆ ಬರಿಗೈಲಿ ಬೆಂಗಳೂರಿಗೆ ಬಂದೋರು. ಇವತ್ತು ಮಕ್ಕಳನ್ನೆಲ್ಲಾ ನೂರಾರು ಕೋಟಿ ರೂಪಾಯಿ ಒಡೆಯರನ್ನಾಗಿ ಮಾಡಿದಾರೆ. ಆದ್ರಿಂದ ಅವರೇ ನನಗೆ ಆದರ್ಶ."

"ಮೆಚ್ಚಿನ ಹವ್ಯಾಸ?"

"ರಾಜಕಾರಣ."

"ಮೆಚ್ಚಿನ ಧಾನ್ಯ?"

"ಮೆಕ್ಕೆ ಜೋಳ."

"ಮೆಕ್ಕೆ ಜೋಳ ಇಷ್ಟನ ಸಾರ್?"

"ಹೌದು, ಅದನ್ನ ಶಿವಮೊಗ್ಗದ ಕಡೆ ತುಂಬಾ ಬೆಳೆಯೋರು. ಸರಕಾರ ಕೊಳ್ಳದೆಯಿದ್ದಾಗ ನಾನು ಧರಣಿ ಮಾಡಿ ಮಾಡಿ ನಾಯಕನಾದೆ."

"ಏನು ಕಂಡ್ರೆ ನಿಮಗೆ ಭಯ ಸಾರ್?"

"ನೀರಿನ ತೊಟ್ಟಿ ಕಂಡ್ರೆ ಭಯ. ಆರೆಸೆಸ್ ಕಂಡ್ರೆ ಭಯ."

"ನೀರಿನ ತೊಟ್ಟಿ ಹೆದರಸತ್ತಾ?"

"ನನ್ನ ಹೆಂಡ್ತಿ ಮೈತ್ರಾದೇವಿ ಅದರೊಳಕ್ಕೆ ಬಿದ್ದಾಗಿನಿಂದ್ಲು ಭಯ."

"ಆರೆಸೆಸ್ಸ್ ಕಂಡ್ರೆ ಯಾಕ್ ಭಯ?"

"ಅವರಿಗಾಗದೋರ ಬಗ್ಗೆ ವ್ಯಭಚಾರದ ಆಪಾದನೆ ಮಾಡಿ ವ್ಯಕ್ತಿತ್ವನೆ ಹಾಳು ಮಾಡಿಬಿಡ್ತರೆ. ನಾನು ಮೊದಲು ತುಂಬಾ ಹೆದರತಾಯಿದ್ರು ಈಗಂತೂ ಕೇರ್ ಮಾಡ್ತಯಿಲ್ಲ ಬಿಡಿ."

"ಥೂತ್ತೇರಿ !!!"

## ರಾಹುಲ್‌ರ ಹೊಸ ಮ್ಯಾಗಜಿನ್


ಹೌದು, ಕಾಂಗ್ರೆಸ್ ಪಕ್ಷದ ಯುವ ನಾಯಕ ಹುಲ್ ಗಾಂಧಿ ಈಗ ಮತ್ತೊಂದು ಸಾಹಸಕ್ಕೆ ಕೈ ಕಿದ್ದಾರೆ. ದೇಶದ ಯುವ ಜನಸಮುದಾಯಕ್ಕೆ ಭವಿಷ್ಯದ ರತದ ಬಗೆಗಿನ ತಮ್ಮ ಮುನ್ನೋಟವನ್ನು ದರ್ಶಿಸಬಲ್ಲ, ಮ್ಮ ಪಕ್ಷದ ಸೈದ್ಧಾಂತಿಕ ನಿಲುವುಗಳನ್ನು ಅವರ ಬಳಿ ಂಡೊಯ್ಯಬಲ್ಲ ಒಂದು ಹೊಸ ಪತ್ರಿಕೆಯನ್ನು ಪ್ರಾರಂಭ ಲು ಹೊರಟಿದ್ದಾರೆ. ಯುವ ಕಾಂಗ್ರೆಸ್ ವಿಭಾಗದಲ್ಲಿ ಂತರಿಕ ಚುನಾವಣೆಗಳ ಮೂಲಕ ನಾಯಕರನ್ನು ಆಯ್ಕೆ ಾಡುವ ಪ್ರಕ್ರಿಯೆ ಪ್ರಾರಂಭಿಸಿದ ನಂತರ ಇದು ರಾಹುಲ್ ಡುತ್ತಿರುವ ಎರಡನೇ ಅತಿ ಪ್ರಮುಖ ಹೆಜ್ಜೆ.

ಹೊಸ ಪತ್ರಿಕೆಯೊಂದನ್ನು ಹೊರತರಬೇಕೆಂಬುವುದರ ಂದಿರುವ ಪ್ರಧಾನ ಉದ್ದೇಶ ದೇಶದ ಯುವಕ/ ುವತಿಯರನ್ನು ಸೆಳೆಯುವುದು. ರಾಹುಲ್ ಬಳಗದ ಕಾರ ಈ ಹೊಸ ಪತ್ರಿಕೆ ಕಾಂಗ್ರೆಸ್ ಪಕ್ಷದ ಮೌತ್‌ಪೀಸ್ ಗಿರುವುದಿಲ್ಲ. ಬದಲಿಗೆ ಇನ್ನಿತರ ಕಮರ್ಷಿಯಲ್ ್ಯಾಗಜಿನ್‌ಗಳಂತೆಯೇ ಸಾಮಾಜಿಕ, ಆರ್ಥಿಕ, ರಾಜಕೀಯ ಾಗೂ ಸಾಂಸ್ಕೃತಿಕ ವಿಚಾರಗಳನ್ನೂ ಒಳಗೊಂಡಿರುತ್ತದೆ. ಂದಿ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಹೊರಬರ ುವ ಈ ಪತ್ರಿಕೆ ಈ ತಿಂಗಳಾಂತ್ಯದಲ್ಲೇ ಮಾರುಕಟ್ಟೆಗೆ ುವ ನಿರೀಕ್ಷೆಯಿದೆ.

ಪ್ರಕಟಣೆಗಾಗಿ ಕಾಂಗ್ರೆಸ್ ಪಕ್ಷ ದುಡ್ಡು ಹಾಕುತ್ತದೆಯೋ ಥವ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಿಸುವ ಮೂಲಕ ದಾಯವನ್ನು ಸೃಷ್ಟಿಸಿಕೊಳ್ಳಲಾಗುತ್ತದೆಯೋ ಎಂಬ ಶ್ನೆಗೀಗ ಸದ್ಯಕ್ಕೆ ಉತ್ತರವಿಲ್ಲ. ರಾಹುಲ್ ಗಾಂಧಿಯ ಹಚರ ಹಾಗೂ ಯುವ ಕಾಂಗ್ರೆಸ್ ಘಟಕದ ಜನರಲ್ ಕ್ರೆಟರಿ ಚಾಣಕ್ಯ ಯುನಿಯಾಲ್ ಪ್ರಕಾರ ಈ ವಿಚಾರಗಳ ಗ್ಗೆ ಇನ್ನೂ ಚರ್ಚೆ ನಡೆಸಲಾಗುತ್ತಿದೆಯಂತೆ. ಒಂದು ೇಳೆ ಜಾಹಿರಾತುಗಳನ್ನು ಪ್ರಕಟಿಸುವುದಾದರೂ ಸಿಗರೇಟ್ ುತ್ತು ಮದ್ಯಪಾನಗಳನ್ನು ಉತ್ತೇಜಿಸುವ ಜಾಹಿರಾತುಗಳನ್ನು ತರಾಂ ಸ್ವೀಕರಿಸುವುದಿಲ್ಲವಂತೆ. ಒಂದು ವೇಳೆ ಯಾವುದೇ ಹಿರಾತು ಪ್ರಕಟಿಸಕೂಡದು ಎಂಬ ನಿರ್ಧಾರಕ್ಕೆ ುವುದಾದರೆ ಕಾಂಗ್ರೆಸ್ ಪಕ್ಷವೇ ಹಣ ಹೂಡುತ್ತದಂತೆ.

ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ್ತಮಾನಗಳನ್ನು ಪ್ರಕಟಿಸುತ್ತಿರುವ ಇನ್ನಿತರ ಕಮರ್ಷಿಯಲ್ ್ಯಾಗಜಿನ್‌ಗಳಿಗೆ ಹೋಲಿಸಿದರೆ ರಾಹುಲ್ ಪತ್ರಿಕೆಯ ಂಖಬೆಲೆ ಕಡಿಮೆಯಿರುತ್ತದಂತೆ. ಆದರೆ, ನಿರ್ದಿಷ್ಟವಾಗಿ ಷ್ಟು ಬೆಲೆ ನಿಗದಿ ಮಾಡಲಾಗುತ್ತದೆ ಎಂಬುದಿನ್ನೂ ರ್ಧಾರವಾಗಬೇಕಿದೆ. ಸದ್ಯಕ್ಕೆ ಯುವ ಕಾಂಗ್ರೆಸ್ ಘಟಕದ ನರಲ್ ಸೆಕ್ರೆಟರಿ ಚಾಣಕ್ಯ ಯುನಿಯಾಲ್, ಛತ್ತೀಸ್‌ಘಡದ ಾಜಿ ಮುಖ್ಯಮಂತ್ರಿ ಅಜಿತ್ ಜೋಗಿ ಅವರ ಪುತ್ರ ಮಿತ್ ಜೋಗಿ, ಪ್ರದ್ಯುತ್‌ದೇವ್ ಬರ್ಮನ್, ಮಿನಾಲ್ ಶ್ ಮತ್ತು ಚಂದನ್ ಯಾದವ್ ಅವರನ್ನೊಳಗೊಂಡ ವರು ಸದಸ್ಯರ ಸಂಪಾದಕೀಯ ಮಂಡಳಿಯನ್ನು ಆಯ್ಕೆ ಾಡಲಾಗಿದೆ. ಈ ಪತ್ರಿಕೆಯಲ್ಲಿ ರಾಹುಲ್ ಗಾಂಧಿಯನ್ನೂ ಳಗೊಂಡಂತೆ ಪಕ್ಷದ ಹಿರಿಯ ಸಿದ್ಧಾಂತಿಗಳು, ಬುದ್ಧಿ ೀವಿಗಳು ನಿರಂತರವಾಗಿ ಬರೆಯುತ್ತಾರಂತೆ.

ಮೊನ್ನೆಯ ಲೋಕಸಭಾ ನಾವಣೆಯಲ್ಲಿ ದೇಶದಾದ್ಯಂತ ತ್ಯಾದಿ ಕಾಂಗ್ರೆಸ್‌ಗೆ ಮತ್ತು ುಪಿಎಗೆ ಯಶಸ್ಸು ದುಕೊಡುವಲ್ಲಿ ಬಹುಮುಖ್ಯ ತ್ರ ನಿರ್ವಹಿಸಿದ ರಾಹುಲ್ ಂಧಿ ಈಗ ಪತ್ರಿಕೋದ್ಯಮಕ್ಕೆ ಮುಕಿ ಸಂಚಲನ ್ಟಿಸಲು ಹೊರಟಿದ್ದಾರೆ. ರೆ ಈಗಾಗಲೇ ದಿ-ಇಂಗ್ಲಿಷ್ ತ್ರಿಕೋದ್ಯಮದಲ್ಲಿ ಕಗಳ ಕಾಲ ಪಳಗಿದ ಂಗಲಗಳಿದ್ದು ುದು ಜಾಹಿರಾತು ತ್ತು ಮಾರಾಟದ ದ್ದಿಂದ ಪತ್ರಿಕೆ ಸುವುದು ರಾಹುಲ್‌ಗೆ ಳಿ ಕಷ್ಟವಾಗಬಹುದು. ರೆ, ಅದರ ಬೆನ್ನಿಗೆ ಗ್ರೆಸ್ ಪಕ್ಷ ನಿಂತರೆ ಪತ್ರಿಕೆ ರಾಹುಲ್ ು ದುರಾಗಬಹುದು.





# ಲಾಯರ್ ಗಾಯಿತ್ರಿ ಬಲಿಯಾದ ಕಥೆ



ಕಾಮವ್ರೋ ಮೋಹವ್ರೋ ಒಂದೂ ಗೊತ್ತಾಗದೆ ಅದಕ್ಕೇ ಬಲಿಯಾದವಳು ಐಎನ್‌ಜಿ ವೈಶ್ಯ ಬ್ಯಾಂಕಿನ ಲೀಗಲ್ ಅಡ್ವೈಸರ್ ಗಾಯಿತ್ರಿ.

ಗಂಡ ರೌಡಿ ಶೀಟರ್. ನಂಬಿದ ಪ್ರಿಯಕರ ಕೊನೆತನಕ ನಿಲ್ಲಲಿಲ್ಲ. ಪೊಲೀಸರು ತಾನೇ ಎಷ್ಟು ಅಂತ ರಕ್ಷಣೆ ಕೊಟ್ಟಾರು? ಅದು ಅವಳ ದೌರ್ಭಾಗ್ಯವ್ರೋ ಅಥವಾ ಸ್ವಯಂಕೃತಾಪರಾಧವ್ರೋ ನಿರ್ಧರಿಸುವವರ್ಯಾರು?

ಮೊನ್ನೆ ಅಂದರೆ ಆಗಸ್ಟ್ 18ರ ಬೆಳಿಗ್ಗೆ ಜಯನಗರದ ಸಾಕಮ್ಮ ತೋಪಿನ ತನ್ನ ಮನೆಯೆದುರೇ ಕೊಲೆಯಾದ 23ರ ಯುವತಿ ಗಾಯಿತ್ರಿಯ ಕುರಿತು ಪತ್ರಿಕೆಗಳು ಪೊಲೀಸರ ಹೇಳಿಕೆಯನ್ನೇ ಮಕ್ಕಿಕಾಮಕ್ಕಿ ಬರೆಯುತ್ತಿವೆ. ಆಕೆ ರೌಡಿಯೊಬ್ಬನನ್ನು ಪ್ರೀತಿಸಿ ಮದುವೆಯಾಗಿದ್ದೇ ಆಕೆಯ ಕೊಲೆಗೆ ಕಾರಣವೆಂದೂ, ಬಸವನಗುಡಿಯ ರೌಡಿ ತೋಪು ರಾಜ ಆಕೆಯನ್ನು ಮದುವೆಯಾಗಿದ್ದೇ ಬ್ಲಾಕ್‌ಮೇಲ್ ಮೂಲಕವೆಂದೂ, ಇದು ವರದಕ್ಷಿಣೆಗೆ ನಡೆದ ಹತ್ಯೆಯೆಂದೂ, ಆಕೆ ಪೊಲೀಸರಿಗೆ ರೌಡಿ ಗಂಡನ ವಿರುದ್ಧ ದೂರು ಕೊಟ್ಟ ಕಾರಣಕ್ಕೇ ಸಿಟ್ಟಿಗೆದ್ದ ಪತಿ ಆಕೆಯನ್ನು ಸುಪಾರಿ ಕೊಟ್ಟು ಕೊಲ್ಲಿಸಿದನೆಂದೂ–ಹೀಗೆ ಒಂದೊಂದು ಪತ್ರಿಕೆ ಒಂದೊಂದು ಥಿಯರಿಯನ್ನು ಮಂಡಿಸಿ ವರದಿ ಮಾಡುತ್ತಲೇ ಇವೆ.

ಬಹುಶಃ ಜೈಲಲ್ಲಿ ಕೂತೇ ಕೊಲ್ಲಿಸಿದ ಪತಿ ತೋಪು ರಾಜನೆಂಬ ರೌಡಿಯ ಹಿನ್ನೆಲೆಯಾಗಲಿ, ಕಳೆದೊಂದು ವರ್ಷದಿಂದ ಪದೇ ಪದೇ ಜೈಲು, ಪೊಲೀಸ್ ಸ್ಟೇಷನ್ನಿಗೆ ಎಡತಾಕುತ್ತಿದ್ದ ಆತನ ಪೇಚಾಟವನ್ನಾಗಲಿ ಯಾರಾದರೂ ಗಮನಿಸಿದ್ದರೆ ಗಾಯಿತ್ರಿ ಹತ್ಯೆಗಿದ್ದ ಮತ್ತೊಂದು ಆಯಾಮ ಗೊತ್ತಾಗುತ್ತಿತ್ತು. ತೋಪುರಾಜ ರೌಡಿಯಾಗಿದ್ದು, ಪದೇ ಪದೇ ಜೈಲು ಕಂಡದ್ದು, ಸರಿಸುಮಾರು ಒಂದು ಡಜನ್ ಕ್ರಿಮಿನಲ್ ಕೇಸಿನಲ್ಲಿ ಸಿಲುಕಿ ಹೈರಾಣಾಗಿದ್ದು ಎಲ್ಲವೂ ಆತನ ಮುದ್ದಿನ ಮಡದಿ ಗಾಯಿತ್ರಿಗಾಗಿಯೇ ಎಂಬುದು ಬಹುಶಃ ಪೊಲೀಸರಿಗೂ ಗೊತ್ತಿರಲಿಕ್ಕಿಲ್ಲ.

2000ದ ಶುರುವಿನಲ್ಲೇ ತೋಪುರಾಜನಿಂದ ಹತನಾದವನು ಜಯನಗರ ಏಳನೇ ಬ್ಲಾಕಿನ ಮತ್ತೊಬ್ಬ ರೌಡಿ ಬಹಾದ್ದೂರ್. ಆತನ ಮತ್ತೊಂದು ನೇಪಾಳಿ ಗಣೇಶ್. ಗೂರ್ಖಾ ಒಬ್ಬನ ಮಗನಾದ ಬಹಾದ್ದೂರ್ ಜಯನಗರ ಏಳನೇ ಬ್ಲಾಕಿನ ನ್ಯಾಷನಲ್ ಕಾಲೇಜ್ ಪಕ್ಕದಲ್ಲೇ ಇದ್ದ ಸಿಟಿ ಕಾಲೇಜಿನ ಎದುರು ಅಡ್ಡೆ ಹಾಕುತ್ತಿದ್ದ. ಕಾಲೇಜು ಹುಡುಗಿಯರ ಪಾಲಿಗೆ ಅಕ್ಷರಶಃ ಕೀಚಕನಾಗಿ ಪರಿಣಮಿಸಿದ್ದ ನೇಪಾಳಿ ಬಹಾದ್ದೂರ್‌ನ ಕಾಟಕ್ಕೆ ಅತೀ ಹೆಚ್ಚು ನೊಂದವಳು ಗಾಯಿತ್ರಿ.

ಆಗಿನ್ನೂ ಮೊದಲ ವರ್ಷದ ಕಾಮರ್ಸ್ ಓದುತ್ತಿದ್ದ ಗಾಯಿತ್ರಿ ತನ್ನನ್ನು ಬಹಾದ್ದೂರ್‌ನಿಂದ ಬಚಾವ್ರ ಮಾಡುವಂತೆ ಕಣ್ಣೀರಿಟ್ಟು ಕೇಳಿಕೊಂಡಿದ್ದು ಇದೇ ತೋಪುರಾಜನನ್ನು. ತೋಪುರಾಜನಿಗೆ ಗಾಯಿತ್ರಿ ಮಾವನ ಮಗಳು. ಯಾವುದೋ ಕಾಲಕ್ಕೆ ತಮಿಳುನಾಡಿನಿಂದ ವಲಸೆಬಂದ ಜಯನಗರದ ಸಾಕಮ್ಮ ತೋಪಿನ ಸ್ವಾಮಿನಾಥನ್ ಎಂಬ ಗೌಂಡರ್ ಜಮೀನ್ದಾರನ ಮೂರನೇ ಮಗನೇ ಎಸ್.ರಾಜು. ಸಾಕಮ್ಮ ತೋಪಿನಲ್ಲಿ ಮನೆಯಿತ್ತಾದ್ದರಿಂದ ಪೋಕರಿ ಹುಡುಗರು ತೋಪುರಾಜ ಎಂದೇ ಕರೆಯುತ್ತಿದ್ದರು. ರಾಜನ ತಾಯಿಯ ಚಿಕ್ಕಮ್ಮನ ಮಗ ಬಲರಾಮ್‌ನ ಮಗಳೇ ಗಾಯಿತ್ರಿ. ಆಕೆಯ ತಾಯಿ ಹೆಸರು ಸರಸ್ವತಿ.

ಸ್ವಾಮಿನಾಥನ್ ಗೌಂಡರ್‌ನ ಎರಡನೇ ಪತ್ನಿಯ ಮೂವರು ಮಕ್ಕಳ ಪೈಕಿ ಹಿರಿಯನಾದ ಸಂಪಂಗಿ ನಿನ್ನೆ ಮೊನ್ನೆಯತನಕ ಬಿಜೆಪಿಯ ಯಡಿಯೂರು ಮಂಡಳದ ಕಾರ್ಯದರ್ಶಿಯಾಗಿದ್ದ. ಕಳೆದ ಚುನಾವಣೆಯಲ್ಲಿ ಅಶೋಕ್ ವಿರುದ್ಧ ಬಂಡೆದ್ದು ಕಬಡ್ಡಿ ಬಾಬು ಅನುಯಾಯಿಯಾದ. ಆದರೆ ತೋಪುರಾಜ ಮಾತ್ರ ಪಕ್ಕಾ ಬಿಜೆಪಿ ಕಾರ್ಯಕರ್ತನಾಗೇ ಉಳಿದ. ಆ ಕಾಲಕ್ಕೇ ತಂದೆ ಸ್ವಾಮಿನಾಥನ್ ಸಾಕಮ್ಮ ತೋಪು, ಕುಮಾರಸ್ವಾಮಿ ಲೇಔಟ್, ಟಾಟಾ ಸಿಲ್ಕ್‌ಫಾರ್ಮ್ ಇತ್ಯಾದಿ ಕಡೆ ಸಿಕ್ಕಾಪಟ್ಟೆ ಭೂಮಿ ಖರೀದಿಸಿದ್ದ. ತಂದೆ ತೀರಿಕೊಂಡ ನಂತರ ಆಸ್ತಿ ಭಾಗವಾಗಿ ರಾಜನಿಗೆ ತಿಂಗಳೊಂದಕ್ಕೆ ಸರಿಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಬಾಡಿಗೆ ಬರುತ್ತಿತ್ತು.

ಗಾಯಿತ್ರಿಯನ್ನು ಪೀಡಿಸುತ್ತಿದ್ದ ರೌಡಿ ಬಹಾದ್ದೂರ್‌ನನ್ನು ಹಾಗೇ ನಡುರಸ್ತೆಯಲ್ಲಿ ಕೊಚ್ಚಿ ಹಾಕಿದ ತೋಪುರಾಜನ ಶೌರ್ಯಕ್ಕೂ ಕಾರಣವಿತ್ತು. ಗಾಯಿತ್ರಿ ಯಾವತ್ತಿದ್ದರೂ ರಾಜನ ಹೆಂಡತಿಯೇ ಎಂದು ಯಾವತ್ತೋ ನಿರ್ಧಾರವಾಗಿ ಹೋಗಿತ್ತು. ಏಕೆಂದರೂ ಮಾವನ ಮಗಳಲ್ಲವೆ? ರಾಜನ ತಂದೆ ತಾಯಿ ಸಂಬಂಧಿಕರಷ್ಟೇ ಅಲ್ಲ, ಸ್ವತಃ ಗಾಯಿತ್ರಿಯ ತಂದೆ ತಾಯಿ ಕೂಡ ಇದನ್ನು ಒಪ್ಪಿದಂತಾಗಿತ್ತು.

ಮಕ್ಕಳಾಗಿದ್ದಾಗಲೇ ಗಂಡ-ಹೆಂಡತಿ ಎಂದು ಹಿರಿಯರೇ ನಿರ್ಧರಿಸಿದ ಮೇಲೆ ಗಾಯಿತ್ರಿಗೆ ತನ್ನ ಬಾಳಸಂಗಾತಿಯ ಆಯ್ಕೆಗೆ ಅವಕಾಶವಾದರೂ ಎಲ್ಲಿತ್ತು?

ಪಿಯುಸಿ ಹೊತ್ತಿಗೇ ರಾಜ ಗಾಯಿತ್ರಿಯ ಜೊತೆ ಸುತ್ತಲಾರಂಭಿಸಿದ. ಬಟ್ಟೆ, ಒಡವೆ, ಸ್ಕೂಟಿ ಎಲ್ಲವನ್ನೂ ಕೊಡಿಸಿಕೊಟ್ಟ. ಸಾಕಮ್ಮ ತೋಪಿನಲ್ಲಿ ಗೂಡಿನಂತಿದ್ದ ಪುಟ್ಟ ಮನೆಯಲ್ಲಿರುತ್ತಿದ್ದ ಗಾಯಿತ್ರಿಯ ತಂದೆಗೆ ರಾಜನೇ ನಿಂತು ಇಂಜಿನಿಯರಿಂಗ್ ವರ್ಕ್ಸ್ ಅಂಗಡಿಯೊಂದನ್ನು ಹಾಕಿಕೊಟ್ಟ. ಇವತ್ತಲ್ಲಾ ನಾಳೆ ತನ್ನ ಮಡದಿಯಾಗುವ ಹುಡುಗಿಯನ್ನು ಯಾರೋ ಕೇಡಿಯೊಬ್ಬ ಚುಡಾಯಿಸುತ್ತಿದ್ದಾನೆಂದರೆ ತೋಪುರಾಜನಿಗೆ ಏನಾಗಿರಬೇಡ?




ಉಪಾಯವಾಗಿ ಗಾಯಿತ್ರಿಯ ಮೂಲಕವೇ ಬಹಾದ್ದೂರ್‌ನನ್ನು ಕರೆಸಿಕೊಂಡ ರಾಜ ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ ಆವರಣದಲ್ಲೇ ಬಹಾದ್ದೂರ್‌ನನ್ನು ಕೊಚ್ಚಿಹಾಕಿದ. ಮೂರು ತಿಂಗಳ ಕಾಲ ಜೈಲಲ್ಲಿದ್ದ. ರಾಜನಿಗೆ ಪ್ರತಿನಿತ್ಯ ಜೈಲಿಗೇ ಊಟ ತಂದುಕೊಡುತ್ತಿದ್ದವಳು ಗಾಯಿತ್ರಿ. ಮುಂದೆ ರಾಜನೇ ನಿಂತು ಗಾಯಿತ್ರಿಯನ್ನು ಲಾ ಕಾಲೇಜಿಗೆ ಸೇರಿಸಿದ. ಆಕೆಯ ಎಲ್‌ಎಲ್‌ಬಿ ಮುಗಿಯುವ ತನಕ ಆತನೇ ಖರ್ಚು ಮಾಡಿದ್ದಾನೆ. ಓದಿನಲ್ಲಿ ಜಾಣೆಯಾಗಿದ್ದ ಗಾಯಿತ್ರಿಗೆ 2007ರ ಹೊತ್ತಿಗೆ ಎಂಜಿ ರಸ್ತೆಯ ಐಎನ್‌ಜಿ ವೈಶ್ಯ ಬ್ಯಾಂಕಿನಲ್ಲಿ ಲೀಗಲ್ ಅಸಿಸ್ಟೆಂಟ್ ಹುದ್ದೆಗೆ ಇಂಟರ್‌ವ್ಯೂ ಬಂದಿದೆ.

ಕೆಲಸವೇನೋ ಸಿಕ್ಕಿತಾದರೂ ಬ್ಯಾಂಕು ಆಕೆಯ ಇಪ್ಪತ್ತು ತಿಂಗಳ ಸಂಬಳವನ್ನು ಮುಂಗಡವಾಗಿ ಡಿಪಾಜಿಟ್ ಮಾಡುವಂತೆ ಕೇಳಿದಾಗ ರಾಜನೇ ನಿಂತು ಬ್ಯಾಂಕಿಗೆ ಐದು ಲಕ್ಷದಷ್ಟು ಠೇವಣಿ ಕಟ್ಟಿದ್ದಾನೆ. ಹಾಗೇ ಐಎನ್‌ಜಿ ವೈಶ್ಯ ಬ್ಯಾಂಕ್ ಸೇರಿದ ಗಾಯಿತ್ರಿಗೆ ಅಲ್ಲಿ ಗಂಟುಬಿದ್ದವನು ಅದೇ ಬ್ಯಾಂಕಿನ ಆಡಿಟ್ ಆಫೀಸರ್ ಪ್ರವೀಣ್–

**ಒಂದು ರೋಚಕ ಪ್ರೇಮ ಕಥೆ**

ಆಂಧ್ರಾ ಮೂಲದ ಪ್ರವೀಣ್‌ಗೂ ಗಾಯಿತ್ರಿಗೂ ಚಿಗುರಿದ ಸ್ನೇಹ ಪ್ರೇಮವಾಗುವ ಹೊತ್ತಿಗೇ ರಾಜನ ಮದುವೆ ಡಿಮ್ಯಾಂಡ್ ಶುರುವಾಗಿದೆ. ತಾನು ಐಎಎಸ್ ಪರೀಕ್ಷೆಗೆ ಕೂರುತ್ತೇನೆಂದು ಮದುವೆ ಪ್ರಸ್ತಾಪವನ್ನು ಮುಂದೂಡಿಕೊಂಡೇ ಬಂದಿದ್ದಾಳೆ ಗಾಯಿತ್ರಿ. ಆದರೆ ರಾಜ ಬಿಡಬೇಕಲ್ಲ?

ಮನೆ ಹಿರಿಯರ ಒತ್ತಾಯಕ್ಕೆ ಕಟ್ಟುಬಿದ್ದ ಗಾಯಿತ್ರಿ ಕೊನೆಗೂ ನಿಶ್ಚಿತಾರ್ಥಕ್ಕೆ ಒಪ್ಪಿಬಿಟ್ಟಳು. 2007 ರ ಫೆಬ್ರವರಿಯಲ್ಲಿ ಗಾಂಧಿಬಜಾರ್ ರೋಟಿಘರ್‌ನಲ್ಲಿ ನಿಶ್ಚಿತಾರ್ಥವಿದ್ದರೆ ಕೆಳಗಿದ್ದ ರೆಸ್ಟೋರೆಂಟಿನಲ್ಲಿ ಗಾಯಿತ್ರಿ ಮತ್ತು ಪ್ರವೀಣ್ ಪ್ರೇಮಿಗಳಂತೆ ಅಪ್ಪಿ ಕೂತಿದ್ದನ್ನು ರಾಜನ ಹುಡುಗರು ನೋಡಿದ್ದಾರೆ. ರಾಜ ಅದಕ್ಕೆ ತಲೆ ಕೆಡಿಸಿಕೊಂಡಿಲ್ಲ. ಹುಡುಗರು ಉತ್ಪ್ರೇಕ್ಷೆ ಮಾಡಿ ಹೇಳಿರಬೇಕೆಂದು ಭಾವಿಸಿಕೊಂಡ.



ವಿಧಿಯಿಲ್ಲದೇ ನಿಶ್ಚಿತಾರ್ಥ ಮಾಡಿಕೊಂಡ ಗಾಯಿತ್ರಿ ದಿನೇದಿನೇ ಪ್ರವೀಣನ ವ್ಯಸನಕ್ಕೆ ಬಿದ್ದಿದ್ದಾಳೆ. ರಾಜ ಹೇಳಿಕೇಳಿ ರೌಡಿ ಶೀಟರ್. ಓದಿದ್ದು ಒಂಭತ್ತನೇ ಕ್ಲಾಸಿನ ತನಕ. ವಿದ್ಯೆ, ತಿಳಿವಳಿಕೆ, ಸಂಬಳ, ನಡವಳಿಕೆ ಯಾವುದರಲ್ಲೂ ತನಗೆ ಸಮನಲ್ಲದ ರಾಜನ ಬಗ್ಗೆಯೇ ಆಕೆಗೆ ಅಸಹ್ಯ ಶುರುವಾಗಿದೆ. ಬಹುಶಃ ಈ ಹಂತದಲ್ಲೇ ಆಕೆ ಹುಷಾರಾಗಿ ತನಗೆ ಮದುವೆ ಬೇಡ ಎಂದುಬಿಟ್ಟಿದ್ದರೆ ಇಂಥದೊಂದು ದುರಂತಕ್ಕೆ ಆಕೆ ತಲೆಕೊಡಬೇಕಿರಲಿಲ್ಲ. ಒಂದು ಹಂತದಲ್ಲಿ ತನಗೆ ಈ ಮದುವೆ ಬೇಡ ಅಂತ ಹಠಕ್ಕೂ ಬಿದ್ದಿದ್ದಾಳೆ. ಆದರೆ ರಾಜ ಬಿಡಲಿಲ್ಲ. ತಾನೊಬ್ಬ ರೌಡಿಯಾಗಿದ್ದರಿಂದ ಎಲ್ಲಿ ಆಕೆಯ ಐಎಎಸ್ ಕನಸಿಗೆ ತನ್ನ ಕ್ರಿಮಿನಲ್ ಹಿನ್ನೆಲೆ ಅಡ್ಡಬರುತ್ತೋ ಎಂಬ ಕಾರಣಕ್ಕೆ ಮದುವೆ ಬೇಡ ಅಂದಿದ್ದಾಳೆಂದೇ ರಾಜ ಲೆಕ್ಕ ಹಾಕಿದ.

ಅದು ಪ್ರವೀಣನ ಜೊತೆ ಗಾಯಿತ್ರಿಗಿದ್ದ ಮೋಹ ಎಂಬುದು ರಾಜನಿಗೆಲ್ಲಿ ಗೊತ್ತಾಗಬೇಕು?

ಒಂದೆಡೆ ರಾಜನ ದಬಾವು ಈ ಮಟ್ಟಕ್ಕೇರಲು ನೆರವಾದ ಆತನ ಹಂಗು, ಇನ್ನೊಂದೆಡೆ ಸಂಬಂಧಿಕರ ಒತ್ತಡ ಎಲ್ಲದರ ಫಲವಾಗಿ ಮದುವೆಗೆ ಒಪ್ಪದೇ ವಿಧಿಯೇ ಇಲ್ಲದಂಥ ಸ್ಥಿತಿ ಮುಟ್ಟಿದ್ದಾಳೆ ಗಾಯಿತ್ರಿ. 2008 ರ ಸೆಪ್ಟೆಂಬರ್ 10 ರಂದು ಬನಶಂಕರಿ ಎರಡನೇ ಸ್ಟೇಜಿನ ಶ್ರೀಹರಿ ಕಲ್ಯಾಣ ಮಂಟಪದಲ್ಲಿ ಮದುವೆ ನಡೆದಿದೆ. ಬಹುದಿನಗಳಿಂದ ಚಾತಕಪಕ್ಷಿಯಂತೆ ಮದುವೆಯನ್ನೇ ಕಾಯುತ್ತಿದ್ದ ರಾಜ ಇಡೀ ಮದುವೆ ಖರ್ಚನ್ನೆಲ್ಲ ತಾನೇ ನಿಭಾಯಿಸಿದ್ದ. ಸಿನಿಮಾ ಶೂಟಿಂಗ್ ಮಾಡಿದಂತೆ ಉದ್ದದ ಕ್ರೇನುಗಳಿಗೆ ವಿಡಿಯೋ ಕ್ಯಾಮೆರಾ ಕಟ್ಟಿ ಚಿತ್ರೀಕರಿಸಿದ್ದೇನು? ಅದ್ದೂರಿಯ ಆರ್ಕೆಸ್ಟ್ರಾ ಕರೆಸಿದ್ದೇನು? ಕಲ್ಯಾಣ ಮಂಟಪದ ಬಾಡಿಗೆಯೇನು? ಹೀಗೆ ಅದ್ದೂರಿ ಮದುವೆ ಮುಗಿಸಿದ್ದೇ ಹನಿಮೂನಿಗೆ ಹೋಗುವ ರಾಜನ ಕನಸಿಗೆ ಗಾಯಿತ್ರಿ ತಣ್ಣೀರೆರಚಿಬಿಟ್ಟಳು. ಬಚಾವಾಗಲೆಂದೇ ಪ್ರತ್ಯೇಕ ಮನೆ ಮಾಡಬೇಕು, ರಾಜನ ಸಂಬಂಧಿಗಳ್ಯಾರೂ ಮನೆಗೆ ಬರಕೂಡದು ಮತ್ತು ಮದುವೆಯಾಗಿ ಎರಡು ವರ್ಷದ ತನಕ ತನ್ನನ್ನು ಮುಟ್ಟಕೂಡದು ಎಂದು ವಿಚಿತ್ರ ಷರತ್ತುಗಳನ್ನು ವಿಧಿಸಿದ್ದಾಳೆ. ಗಾಯಿತ್ರಿಯನ್ನು ವಿಪರೀತ ಹಚ್ಚಿಕೊಂಡಿದ್ದ ರಾಜ ಇದಕ್ಕೂ ಒಪ್ಪಿ ತ್ಯಾಗರಾಜನಗರದಲ್ಲಿ ಎರಡು ಬೆಡ್‌ರೂಮಿನ ಮನೆ ಮಾಡಿದ್ದಾನೆ. 2008 ರ ಡಿಸೆಂಬರ್ ತಿಂಗಳ ಒಂದು ದಿನ ಗಾಯಿತ್ರಿಯ ರೂಮಿನಲ್ಲಿ ಸಿಂಗರಿಸಿದ್ದ ಲವ್ ಸಂಕೇತವಿದ್ದ ಪುಟ್ಟ ಬೋರ್ಡೊಂದು ರಾಜನ ಕಣ್ಣಿಗೆ ಬಿತ್ತು. ಹ್ಯಾಪಿಬರ್ತ್‌ಡೇ ಪ್ರವೀಣ್ ಎಂದು ಇಂಗ್ಲಿಷಿನಲ್ಲಿ ಬರೆದಿದ್ದ ಆ ಫಲಕದಲ್ಲಿ ಗಾಯಿತ್ರಿಯ ಹೆಸರಿತ್ತು.

ಗುಮಾನಿ ಬಂದು ಆಕೆಯ ಮೊಬೈಲ್ ಅನ್ನು ತಡಕಿದರೆ ಅದರಲ್ಲಿ ಪ್ರವೀಣನ ಜೊತೆ ಆಕೆ ಚಕ್ಕಂದವಾಡುತ್ತಿದ್ದ ವಿವಿಧ ದೃಶ್ಯಾವಳಿಗಳಿದ್ದವು. ಮೊದಲ ಬಾರಿಗೆ ರಾಜನಿಗಾದ ಆಘಾತವದು. ಯಾವುದೋ ಕಾಂಟ್ಯಾಕ್ಟ್ ಹಿಡಿದು ಗಾಯಿತ್ರಿಯ ಮೊಬೈಲ್ ಕರೆಗಳ ವಿವರ ತರಿಸಿಕೊಂಡರೆ ಅದರಲ್ಲಿ ಮತ್ತಷ್ಟು ಆಘಾತಕಾರಿ ಸತ್ಯಗಳಿದ್ದವು. ದಿನವೊಂದಕ್ಕೆ ಕಮ್ಮಿಯೆಂದರೂ ಮೂವತ್ತು ಬಾರಿ ಪ್ರವೀಣ್ ಆಕೆಗೆ ಫೋನ್ ಮಾಡುತ್ತಿದ್ದ. ಅಶ್ಲೀಲ ಎಸ್ಸೆಮ್ಮೆಸ್ಸುಗಳನ್ನು ಕಳಿಸಿದ್ದ. ಈಕೆಯ outgoing ಪಟ್ಟಿಯಲ್ಲಿ ದಿನಕ್ಕೆ ಆತನಿಗೇ ಸಿಕ್ಕಾಪಟ್ಟೆ ಕರೆಗಳಿದ್ದವು. ಎಂಗೇಜ್‌ಮೆಂಟಿನ ದಿನವೇ ಗಾಯಿತ್ರಿ ಪ್ರವೀಣನ ಜೊತೆ ಒಂದೂವರೆ ಗಂಟೆ ಮಾತಾಡಿದ್ದಳು!

ಪ್ರವೀಣ್ ಮತ್ತು ಗಾಯಿತ್ರಿ ನಡುವಿನ ಸಂಬಂಧ ಎಂಥಾದ್ದೆಂಬುದು ರಾಜನಿಗೆ ಅರ್ಥವಾಗಲು ಎಷ್ಟು ಹೊತ್ತು? ಅಲ್ಲಿಂದಾಚೆಗೆ ಗಾಯಿತ್ರಿಯನ್ನು ಸದ್ದಿಲ್ಲದೆ ಹಿಂಬಾಲಿಸುವಂತೆ ಹುಡುಗರನ್ನು ಬಿಟ್ಟ. ಆದೊಮ್ಮೆ ಪುನಾದಲ್ಲಿ ಟ್ರೈನಿಂಗ್ ಇದೆಯೆಂದು ಮೆಜೆಸ್ಟಿಕ್‌ನಲ್ಲಿ ರೈಲು ಹತ್ತಿದ ಗಾಯಿತ್ರಿ ಯಶವಂತಪುರದಲ್ಲಿ ಇಳಿದವಳೇ ಸೀದಾ ಪ್ರವೀಣನ ಕಾರು ಹತ್ತಿದ್ದಾಳೆ. ಮತ್ತೊಂದು ಕಾರಿನಲ್ಲಿ ತನ್ನ ಗಂಡ ಹಿಂಬಾಲಿಸುತ್ತಿದ್ದಾನೆಂಬುದು ಆಕೆಗೆಲ್ಲಿ ಗೊತ್ತಾಗಬೇಕು?

ಹಾಗೇ ಪ್ರವೀಣನ ಕಾರು ಹತ್ತಿದ ಗಾಯಿತ್ರಿಯನ್ನು ಮೈಸೂರಿನ ತನಕ ರಾಜ ಹಿಂಬಾಲಿಸಿದ್ದಾನೆ. ಮೈಸೂರಿನಲ್ಲಿ ನಾಲ್ಕು ದಿನಗಳ ಕಾಲ ಸಂದೇಶ್ ಪ್ರಿನ್ಸ್ ಹೋಟೆಲಿನ ಒಂದೇ ಕೋಣೆಯಲ್ಲಿ ಇಬ್ಬರೂ ತಂಗಿದ್ದಾರೆ. ಇದನ್ನೂ ಕಣ್ಣಿಟ್ಟು ಕಾದ ರಾಜ ಎಲ್ಲಾ ಮುಗಿಸಿ ವಾಪಸ್ಸು ಮನೆಗೆ ಬಂದು ಗಾಯಿತ್ರಿಯನ್ನು ಹಿಗ್ಗಾಮುಗ್ಗಾ ಥಳಿಸಿಬಿಟ್ಟ.

ಇಷ್ಟಾಗಿದ್ದೇ ತಡ ಗಾಯಿತ್ರಿ ಬಸವನಗುಡಿ ಪೊಲೀಸ್ ಠಾಣೆಗೆ ಬಂದು ವರದಕ್ಷಿಣೆ ಕಿರುಕುಳದ ದೂರು ಕೊಟ್ಟಿದ್ದಾಳೆ. ಪೊಲೀಸರು ರಾಜನನ್ನು ಹಿಡಿದು ಜೈಲಿಗೆ ದಬ್ಬಿದರೆ ಮೂರೇ ದಿನಕ್ಕೆ ಜಾಮೀನಿನ ಮೇಲೆ ಹೊರಬಂದ ರಾಜ ಹಿರಿಯರನ್ನು ಸೇರಿಸಿ ಹೇಗೋ ಗಾಯಿತ್ರಿಯನ್ನು ಒಪ್ಪಿಸಿದ್ದಾನೆ. 2009 ರ ಮಾರ್ಚ್ ತಿಂಗಳಲ್ಲಿ ತಮಿಳುನಾಡಿಗೆ ಹೋಗುತ್ತೇನೆಂದು ಹೊರಟ ರಾಜ ಏನೋ ಯಡವಟ್ಟಾಯಿತೆಂದು ಅವತ್ತು ರಾತ್ರಿಯೇ ಮನೆಗೆ ಬಂದರೆ ಆತನಿಗೆ ಮತ್ತೊಂದು ಶಾಕ್ ಕಾದಿತ್ತು.

ಗಾಯಿತ್ರಿ ಜೊತೆ ಬೆಡ್‌ರೂಮಿನಲ್ಲಿ ಪ್ರವೀಣ್ ಚಕ್ಕಂದ ಆಡುತ್ತಿದ್ದ!

ರಾಜನನ್ನು ಕಂಡಿದ್ದೇ ಎದ್ದೂ ಬಿದ್ದು ಓಡಿಹೋದ ಪ್ರವೀಣ್‌ನನ್ನು ಎಳೆದು ತಂದ ರಾಜನ ಹುಡುಗರು ಹಿರಿಯರನ್ನು ಸೇರಿಸಿ ಪಂಚಾಯ್ತಿ ಮಾಡಿದ್ದಾರೆ. ತನ್ನ ಮತ್ತು ಗಾಯಿತ್ರಿ ಸಂಬಂಧವನ್ನು ಪ್ರಶ್ನಿಸಿದ ರಾಜನಿಗೆ ಅಲ್ಲಯ್ಯಾ; ನಿನ್ನ ಹೆಂಡ್ತಿ ಕರೆದಿದ್ದಕ್ಕೇ ನಾನು ಬಂದಿರೋದು. ಮೊದಲು ನಿನ್ನ ಹೆಂಡ್ತೀನ ನೆಟ್ಟಗಿಟ್ಟುಕೋ....' ಎಂದು ಮುಖಕ್ಕೆ ಹೊಡೆದಂತೆ ಝಾಡಿಸಿಬಿಟ್ಟ ಪ್ರವೀಣ್.

ಇದಾಗಿದ್ದೇ ಗಾಯಿತ್ರಿ ತನ್ನ ವಸ್ತು ಒಡವೆಗಳ ಸಮೇತ ತಂದೆಯ ಮನೆ ಸೇರಿಕೊಂಡಿದ್ದಾಳೆ. ರಾಜ ಅಲ್ಲಿಗೇ ನುಗ್ಗಿ ಗಾಯಿತ್ರಿಯ ತಾಯಿಯ ಮೇಲೂ ಕೈ ಮಾಡಿದ್ದಾನೆ. ಇದಕ್ಕೂ ಮತ್ತೊಂದು ಕಂಪ್ಲೇಂಟ್ ಕೊಟ್ಟ ಗಾಯಿತ್ರಿ ಮತ್ತೊಮ್ಮೆ ರಾಜನನ್ನು ಜೈಲಿಗೆ ಹಾಕಿಸಿದ್ದಾಳೆ. ಈ ಹೊತ್ತಿಗಾಗಲೇ ಗಾಯಿತ್ರಿಯಿಂದ ರಾಜನ ವಿರುದ್ಧ ಜಯನಗರ ಮತ್ತು ಬಸವನಗುಡಿ ಪೊಲೀಸ್ ಠಾಣೆಗಳಲ್ಲಿ ಒಂಭತ್ತು ಕೇಸುಗಳು ಬಿದ್ದಿದ್ದವು.

ಪದೇಪದೇ ಜಂಟಿ ಪೊಲೀಸ್ ಕಮೀಷನರ್ ಅಲೋಕ್ ಕುಮಾರ್‌ರನ್ನು ಕಂಡು ರಕ್ಷಣೆ ಕೊಡಿಸುವಂತೆ ಕಣ್ಣೀರಿಟ್ಟಿದ್ದಾಳೆ. ಯಾವ ಪ್ರವೀಣನನ್ನು ಆಕೆ ಈಪಾಟಿ ಹಚ್ಚಿಕೊಂಡಿದ್ದಳೋ ಆತ ರಾಜನಿಗೆ ಹೆದರಿಕೊಂಡು ಬೆಂಗಳೂರನ್ನೇ ಬಿಟ್ಟು ಹೈದ್ರಾಬಾದ್ ಸೇರಿಕೊಂಡದ್ದು ಆಕೆಗಾದ ಮತ್ತೊಂದು ಆಘಾತ. ಹಾಗಂತ ಗಾಯಿತ್ರಿ ಜೀವನೋತ್ಸಾಹ ಕಳೆದುಕೊಳ್ಳಲಿಲ್ಲ. ಚಂದ್ರಶೇಖರ್ ಎಂಬ ಮತ್ತೊಬ್ಬ ಐಎನ್‌ಜಿ ವೈಶ್ಯ ಬ್ಯಾಂಕಿನ ಯುವ ಅಧಿಕಾರಿ ಜೊತೆ ಸುತ್ತಾಡಲಾರಂಭಿಸಿದ್ದಾಳೆ. ಈ ಮಧ್ಯೆ ಆಕೆಗೆ ಡೈವೋರ್ಸ್ ಕೊಟ್ಟು ಮತ್ತೊಂದು ಮದುವೆಯಾಗುವಂತೆ ರಾಜನ ಹಿತೈಷಿಗಳು ಸಲಹೆ ಕೊಟ್ಟಿದ್ದಾರೆ. ಜಯನಗರದ ಎಸಿಪಿ ರಮೇಶ್ ಚಂದ್ರ ಕೂಡ ಆಕೆಗೆ ಇಷ್ಟ ಇಲ್ಲ ಅಂದ್ರೆ ಅವಳ ಪಾಡಿಗೆ ಬಿಟ್ಟು ಬಿಡಯ್ಯಾ ಎಂದೇ ಬುದ್ಧಿ ಹೇಳಿದ್ದಾರೆ.

ಆದರೆ ರಾಜನ ಕ್ರಿಮಿನಲ್ ಮನಸ್ಸು ಬೇರೆಯದೇ ಲೆಕ್ಕಾಚಾರಕ್ಕಿಳಿದಿತ್ತು. ತಾನೇ ಸಾಕಿದಾ ಗಿಣಿ ತನ್ನನ್ನೇ ಹದ್ದಾಗಿ ಕುಕ್ಕುತ್ತಿದೆ. ಅದಕ್ಕೊಂದು ಗತಿ ಕಾಣಿಸಲೆಂದೇ ಹಳೇ ಕೇಸೊಂದರ ಜಾಮೀನು ರದ್ದುಪಡಿಸಿ ಜೈಲು ಹೊಕ್ಕು ಕೂತ. ಜೈಲೊಳಗಿದ್ದೇ ತನ್ನ ಶಿಷ್ಯರಿಗೆ ಆದೇಶ ಕೊಟ್ಟ. ಆಗಸ್ಟ್ ಹದಿನೆಂಟರ ಬೆಳಿಗ್ಗೆ ಗಾಯಿತ್ರಿ ತನ್ನ ಮನೆಯಿಂದ ಸ್ಕೂಟಿಯಲ್ಲಿ ಹತ್ತಡಿಯನ್ನೂ ಕ್ರಮಿಸಿಲ್ಲ; ಕಾರಲ್ಲಿ ಹೊಂಚಿ ಕುಳಿತಿದ್ದ ಇಬ್ಬರು ಹಂತಕರು ಲಾಂಗ್ ಬೀಸಿದ್ದಾರೆ. ಎರಡೇ ಏಟಿಗೆ ತನ್ನ ಮನೆ ಮುಂದೆಯೇ ಹೆಣವಾಗಿದ್ದಾಳೆ ಗಾಯಿತ್ರಿ.

ಅದೇನೇನು ಕನಸು ಕಟ್ಟಿದ್ದಳೊ? ರಕ್ತ ಸಂಬಂಧದ ಸಂಕೋಲೆಗೆ ಸಿಲುಕಿ ರೌಡಿಯೊಬ್ಬನ ಪತ್ನಿಯಾಗುವುದು ಆಕೆಗೆ ಅಸಹ್ಯ ಬರಿಸಿತ್ತೆ? ಅದರಿಂದ ಬಿಡುಗಡೆಯಾಗುವ ಧೈರ್ಯ ಸಾಲದೇ ಹೋಯಿತೆ? ಪ್ರವೀಣನ ಮೋಹಕ್ಕೆ ಬಿದ್ದು ದುರಂತಕ್ಕೆ ತಲೆ ಕೊಟ್ಟಳೆ? ಮೋಹದ ಮರೆಯಲ್ಲೇ ಸಾವು ಅವಿತು ಕುಳಿತದ್ದು ಮೊದಲೇ ಗೊತ್ತಿತ್ತೇ? ಅಥವಾ ಗಂಡನ ರೂಪದಲ್ಲಿ ಯಮ ಹೊಂಚಿ ಕೂತಿದ್ದನೆ?

ತನ್ನಿಚ್ಛೆಗೆ ತಕ್ಕಂತೆ ಬದುಕಲು ಹೋಗಿ ಹೆಣವಾದ ನತದೃಷ್ಟೆ ಆಕೆ.

● ರಾ. ಸೋಮನಾಥ್

## ಅಮೆರಿಕಾ ಸೇರಿಕೊಂಡಿದ್ದರೆ ಬದುಕಿರುತ್ತಿದ್ದಳೇನೋ?

ತೋಪುರಾಜನ ಹೆಸರು ಇತ್ತೀಚೆಗೆ ಕೇಳಿಬಂದದ್ದು ತ್ಯಾಗರಾಜನಗರದ ಪೊಲೀಸ್ ಪೇದೆ ರಾಜಣ್ಣನ ಮಗ ಒಂಟೆ ನವೀನನ ಕೊಲೆ ಕೇಸಿನಲ್ಲಿ. 2009 ರ ಫೆಬ್ರವರಿ 17 ರಂದು ತ್ಯಾಗರಾಜನಗರದ ನಂದಿನಿ ಹೋಟೆಲ್ ಬಳಿ ಬಾಕ್ಸರ್ ಮಂಜ, ಕೋದಂಡ, ಮೆಕ್ಕಾ ರಘು, ಕರಿಬೇವು ಸೊಪ್ಪು ಮಂಜ ಮುಂತಾದ ರೌಡಿಗಳಿಂದ ನವೀನನ ಹತ್ಯೆಯಾದಾಗ ಹಂತಕರ ಪೈಕಿ ತೋಪುರಾಜನೂ ಇದ್ದ ಎಂದು ಪೇದೆ ರಾಜಣ್ಣ ದೂರು ಕೊಟ್ಟ. ಹಂತಕರಲ್ಲಿ ಮೆಕ್ಕಾ ರಘು ಸೇರಿದಂತೆ ಅರ್ಧ ಗ್ಯಾಂಗ್ ಶ್ರೀರಾಮಸೇನೆಯ ಮುತಾಲಿಕ್ ಶಿಷ್ಯರು. ತೋಪುರಾಜ ಬಿಜೆಪಿ ಕಾರ್ಯಕರ್ತ. ಪರಿಣಾಮವಾಗಿ ರಾಜ ಕೊಲೆ ಕೇಸಿಗೆ ಫಿಟ್ಟಾಗಲೇ ಇಲ್ಲ.

ಅವತ್ತೇ ರಾಜ ಜೈಲು ಪಾಲಾಗಿದ್ದರೆ ಗಾಯಿತ್ರಿಯ ದಾರಿ ಸಲೀಸಾಗುತ್ತಿತ್ತು. ಗಾಯಿತ್ರಿಯನ್ನು ವಿಪರೀತ ಹಚ್ಚಿಕೊಂಡಿದ್ದ ರಾಜನಿಗಿದ್ದ ಕೊನೆಯ ಆಸೆಯೆಂದರೆ ಕನಿಷ್ಠ ಮಗುವಾದ ಮೇಲಾದರೂ ಆಕೆ ಸರಿಹೋಗಬಹುದು ಎಂಬುದು. ಆದರೆ ಗಾಯಿತ್ರಿ ಅದ್ಯಾವುದಕ್ಕೂ ಅವಕಾಶವನ್ನೇ ಕೊಡಲಿಲ್ಲ. ಆನಂತರ ಅಮೆರಿಕಕ್ಕೆ ಹೋಗಿ ಅಲ್ಲೇ ನೆಲೆಸಿ ಕಾಯಮ್ಮಾಗಿ ಪ್ರವೀಣನ ಜೊತೆಯಾಗುವುದು ಆಕೆಯ ಉದ್ದೇಶವಾಗಿತ್ತು. ಅದಕ್ಕೆಂದೇ ಪಾಸ್‌ಪೋರ್ಟ್ ಮಾಡಿಟ್ಟುಕೊಂಡಿದ್ದಳು. ವೀಸಾದ ನಿರೀಕ್ಷೆಯಲ್ಲೇ ದಿನ ಕಳೆಯುತ್ತಿದ್ದಳು. ಅಲ್ಲಿಯತನಕ ರಾಜ ಜೈಲಲ್ಲೇ ಇರುವಂತೆ ಮಾಡಲು ಹೋಗಿ ಸಣ್ಣಪುಟ್ಟದ್ದಕ್ಕೂ ದೂರು ಕೊಡುತ್ತಿದ್ದಳು. ಆದರೆ ಅದೇ ಆಕೆಗೆ ಮುಳುವಾಯಿತು.

# ರಿಗೆರೆ ಮಠದ ರೈಡು ಮಾಡಿದ್ದು ತೆರಿಗೆ ಇಲಾಖೆ
# ರವಿ ಇಟ್ಟಿದ್ದು ಸ್ವಾಮಿಗಳು





ನಮ್ಮ ಗುರುಗಳು ಸರ್ವಶಕ್ತರು, ಅಜಾತಶತ್ರುಗಳು, ಪ್ರಶ್ನಾತೀತರು, ಸರ್ಕಾರಗಳನ್ನೇ ನಡುಗಿಸಬಲ್ಲ ಶಕ್ತಿಯುಳ್ಳವರು; ಅವರು ಗೆರೆ ಎಳೆದರೆ ಮುಗಿದೇ ಹೋಯಿತು......! ಎಂಬಂತಹ ಗಾಢನಂಬಿಕೆಯಲ್ಲಿದ್ದ ಸಾದಲಿಂಗಾಯತ ಸಮುದಾಯಕ್ಕೆ ತೆರಿಗೆ ಇಲಾಖೆಯ ಅಧಿಕಾರಿಗಳು ಸಿರಿಗೆರೆ ಮಠಕ್ಕೆ ದಾಳಿ ಮಾಡಿದರೆಂಬ ಒಂದು ಸಾಲಿನ ಸುದ್ದಿ ದೊಡ್ಡ ಆಘಾತವನ್ನೇ ಉಂಟು ಮಾಡಿದೆ.

ಯಡಿಯೂರಪ್ಪ ಉಪಮುಖ್ಯಮಂತ್ರಿ, ನಂತರ ಮುಖ್ಯಮಂತ್ರಿಯಾಗಿ ಅಧಿಕಾರದ ಚುಕ್ಕಾಣಿ ಹಿಡಿದ ಇಡೀ ರಾಜಕೀಯ ಪ್ರಕ್ರಿಯೆಯುದ್ದಕ್ಕೂ ಸಿರಿಗೆರೆಯ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳು ವಹಿಸಿದ ಪಾತ್ರ ಅಂಥದ್ದೊಂದು ಇಮೇಜನ್ನು ಸಮುದಾಯದಲ್ಲಿ ಸೃಷ್ಟಿಸಿಬಿಟ್ಟಿತ್ತು. ಇಡೀ ಬಿಜೆಪಿ ಸರ್ಕಾರವೇ ನಮ್ಮ ಸ್ವಾಮಿಗಳ ಕೈಯಲ್ಲಿದೆ ಎಂಬ ಭಾವನೆ ಬೇರೂರಿಬಿಟ್ಟಿತ್ತು. ಯಡ್ಡಿ ಕೂಡಾ ನಿಂತಲ್ಲಿ ಕುಂತಲ್ಲಿ ಸಿರಿಗೆರೆ ಸ್ವಾಮಿಗಳ ಜಪ ಮಾಡುತ್ತಿದ್ದದ್ದು ರಾಜಕೀಯ ಸಂಕಷ್ಟ ಒದಗಿಬಂದಾಗಲೆಲ್ಲಾ ಸಿರಿಗೆರೆ ಮಠದ ಕಡೆ ನೋಡುತ್ತಾ ಇದ್ದುದು ಇದೆಲ್ಲಕ್ಕೆ ಕಾರಣವಾಗಿತ್ತು. ಯಡ್ಡಿ ಸರ್ಕಾರವೆಂದರೆ ಸಾದ ಲಿಂಗಾಯತ ಸಮುದಾಯದ 'ಸುವರ್ಣಕಾಲ' ಎಂದೇ ವ್ಯಾಖ್ಯಾನಿಸುವ ಆರಂಭವಾಗಿಬಿಟ್ಟಿತ್ತು. ಸಾದ ಲಿಂಗಾಯತರಿಗೆ ೨(ಎ) ಪ್ರಮಾಣಪತ್ರ ನೀಡುವ ವಿಷಯದಲ್ಲಿ ಸರ್ಕಾರ ಅನುಸರಿಸಿದ ಮೃದುಧೋರಣೆ ಹಾಗೂ ಇದಕ್ಕೆ ವ್ಯಕ್ತವಾದ ಪ್ರತಿಭಟನೆಗಳನ್ನು ಕಡೆಗಣಿಸಿದ್ದು ಕೂಡಾ ಇಂಥದ್ದೊಂದು ನಂಬಿಕೆ ಬಲಗೊಳ್ಳುವಂತೆ ಮಾಡಿತ್ತು.

ಏನಾದರೇನಂತೆ ಈಗ ಸಿರಿಗೆರೆ ಮಠದ ಕೀರ್ತಿ ಕಲಶ ಕಳಚಿ ಬಿದ್ದಿದೆ. ಹಣಬಲ, ಜಾತಿಬಲ, ರಾಜಕೀಯ ಬಲಗಳೆಲ್ಲಾ ಸಿರಿಗೆರೆ ಮಠದ ಅಂಗಳದಲ್ಲಿ ಕಾಲು ಮುರಿದುಕೊಂಡು ಬಿದ್ದಿದ್ದರೂ ತೆರಿಗೆ ಆದಾಯ ಅಧಿಕಾರಿಗಳ ದಂಡು ಯಾವುದನ್ನೂ ಲೆಕ್ಕಿಸಿಲ್ಲ. ರೇಡು ನಡೆದು ಹೋಗಿದೆ. ಇದರಿಂದ ಆಗಿರುವ ಸಾಮಾಜಿಕ ಮುಜುಗರದಿಂದ ಹೊರಬರುವುದು ಹೇಗೆ? ಮಠದ ಪ್ರತಿಷ್ಠೆಯನ್ನು ಪುನಃ ಸ್ಥಾಪಿಸಿಕೊಳ್ಳುವುದು ಹೇಗೆ ಎಂಬೆಲ್ಲ ಚಿಂತನೆಗಳು ನಡೆಯುತ್ತಿವೆ.

ಹಾಗೆ ನೋಡಿದರೆ ಇಂಥದ್ದೊಂದು ಅನಾಹುತಕಾರಿ ಬೆಳವಣಿಗೆಗೆ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳೇ ಕಾರಣ. ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ತಮ್ಮ ಸಮಾಜಮುಖೀ ಕಾರ್ಯ ಚಟುವಟಿಕೆಗಳಿಂದ ಸಿರಿಗೆರೆ ಮಠಕ್ಕೆ ಒಂದು ಬೃಹತ್ ಸಾಮಾಜಿಕ ತಳಹದಿಯನ್ನು ಹಾಕಿದ್ದರು. ಅವರೆಂದೂ ದುಡ್ಡಿನ ಹಿಂದೆ ಹೋಗಲಿಲ್ಲ. ಗ್ರಾಮೀಣ ಜನಪರ ಕಾಳಜಿಯೇ ಮೈವೆತ್ತಂತೆ ಹಿರಿಯ ಸ್ವಾಮಿಗಳು ಹಳ್ಳಿ-ಹಳ್ಳಿಗಳಲ್ಲಿ ಶಾಲಾ-ಕಾಲೇಜುಗಳನ್ನು ಆರಂಭಿಸಿ ಜನರಲ್ಲಿ ಜಾಗೃತಿಯ ಹಣತೆಯನ್ನು ಹಚ್ಚಿದ್ದರು.

ಹಳ್ಳಿಯ ಜನ ಅಕ್ಷರಸ್ಥರಾಗಬೇಕು, ವಿಚಾರವಂತರಾಗಬೇಕು ಎಂಬುದನ್ನೇ ಮುಖ್ಯ ಉದ್ದೇಶವನ್ನಾಗಿರಿಸಿಕೊಂಡು ಯಾವುದೇ ಭಿಡೆಯಿಲ್ಲದೇ ಎಲ್ಲಾ ಜಾತಿಯ ಜನರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದರು.

ಮರುಳಸಿದ್ಧ ಮಾದಿಗರವನು ಎಂಬುದನ್ನು ಹಳ್ಳಿಹಳ್ಳಿಯಲ್ಲೂ ಸಾರುತ್ತಿದ್ದರು. ಮಹಾತ್ಮಾ ಗಾಂಧೀಜಿಯವರಿಂದ ಪ್ರಭಾವಿತರಾಗಿ 1946 ನೇ ಇಸವಿಯಲ್ಲೇ ಸಹಭೋಜನ ಮಾಡಿದ್ದರು. ವಚನ ಸಂಗೀತವನ್ನು ಜನಪ್ರಿಯಗೊಳಿಸಿ ಬಸವಣ್ಣ, ಅಕ್ಕಮಹಾದೇವಿ ಮುಂತಾದ ವಚನಕಾರರ ವಚನಗಳನ್ನು ಜನರಿಗೆ ತಲುಪಿಸುವ ಪ್ರಯತ್ನ ಮಾಡಿದರು. ಶರಣಸತಿ ಲಿಂಗಪತಿ, ವಿಶ್ವಬಂಧು ಮರುಳಸಿದ್ಧ ಬಸವಣ್ಣನ ಕುರಿತ ನಾಟಕ ಸೇರಿದಂತೆ ಐದಾರು ನಾಟಕಗಳನ್ನು ಬರೆದು ಹಳ್ಳಿಹಳ್ಳಿಗಳಲ್ಲಿ ಪ್ರದರ್ಶಿಸಿ ಬಸವಣ್ಣನವರ ವಿಚಾರ ಧಾರೆಗಳನ್ನು ನಿಜಾರ್ಥದಲ್ಲಿ ಜನತೆಯ ನಡುವೆ ಪ್ರತಿಷ್ಠಾಪಿಸುವ ಪ್ರಯತ್ನ ಮಾಡಿದರು.

ವಿಗ್ರಹಾರಾಧನೆ ವಿರುದ್ಧ ಸದಾ ದನಿಯೆತ್ತುತ್ತಿದ್ದ ಹಿರಿಯ ಸ್ವಾಮೀಜಿಗಳು ಗಣೇಶೋತ್ಸವದಂತಹ ಆಚರಣೆಗಳಿಗೆ ಪ್ರೋತ್ಸಾಹ ನೀಡದೆ ಲಿಂಗಪೂಜೆಯನ್ನು ಜನಪ್ರಿಯಗೊಳಿಸಿದರು. ರಾಜಕೀಯವನ್ನೂ ಸದುದ್ದೇಶಕ್ಕಾಗಿಯೇ ಬಳಸಿಕೊಂಡರು. ಹೈಸ್ಕೂಲ್ ಮೇಷ್ಟ್ರಾಗಿದ್ದ ದುಗ್ಗಪ್ಪನವರನ್ನು ರಾಜಕೀಯವಾಗಿ ಬೆಳೆಸಿ ಕೆಪಿಎಸ್‌ಸಿಗೆ ಅಧ್ಯಕ್ಷನನ್ನಾಗಿ ನೇಮಿಸುವವರೆಗೂ ತಮ್ಮ ಪ್ರಭಾವ ಬಳಸಿದ್ದರು. ಅವರು ಜೀವಂತವಾಗಿರುವವರೆಗೂ ಸಿರಿಗೆರೆ ಮಠ ಒಂದು ಜಾತ್ಯತೀತ ಮಠವಾಗಿ ಎಲ್ಲರ ಪ್ರೀತಿ-ಪ್ರಶಂಸೆಗಳಿಗೆ ಪಾತ್ರವಾಗಿತ್ತು. ಆರೋಗ್ಯಕರ ಸಮಾಜದ ನಿರ್ಮಾಣ ಅವರ ಆದ್ಯತೆಯ ವಿಷಯವಾಗಿತ್ತು.

ಹಿರಿಯ ಜಗದ್ಗುರು ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ತರುವಾಯ ಗದ್ದುಗೆಗೇರಿದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಅವಧಿಯಲ್ಲಿ ಏನೆಲ್ಲಾ ಬದಲಾವಣೆಗಳಾದವು ಎಂಬುದನ್ನು ಇಲ್ಲಿ ದಾಖಲಿಸಬೇಕಾದ ಅಗತ್ಯವಿಲ್ಲ.

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳಿಗೆ ಅಪಾರವಾದ ತಿಳಿವಳಿಕೆ, ವೈಚಾರಿಕ ಪ್ರಜ್ಞೆ, ಸಾಂಸ್ಕೃತಿಕ ಕಾಳಜಿ ಎಲ್ಲ ಇದ್ದರೂ ಅವರ ಪ್ರಾಯೋಗಿಕ ನಡೆ-ನುಡಿ ಮಾತ್ರ ಇದಕ್ಕೆ ತದ್ವಿರುದ್ಧವಾದುದಾಗಿತ್ತು. ಮುಖ್ಯವಾಗಿ ಸಿರಿಗೆರೆ ಮಠ ಎಂದರೆ ಅದು ಸಾದುಲಿಂಗಾಯಿತರ ಮಠ ಎಂದು ಪ್ರತಿಷ್ಠಾಪಿಸಲಾಯಿತು. ಸಂಸ್ಥಾನವನ್ನು ಆರ್ಥಿಕವಾಗಿ ಸಬಲಗೊಳಿಸಿದ ಕೀರ್ತಿ ಇವರಿಗಿದೆಯಾದರೂ ಇವರ ಸಂಪತ್ತಿ ಪ್ರೀತಿ, ಫಾರಿನ್ ವ್ಯಾಮೋಹ, ವೇದಾಧ್ಯಯನ ಕಾಳಜಿ ಎಲ್ಲವೂ ಒಟ್ಟಾಗಿ ಬಸವಾದಿ ಪ್ರಥಮರ ಕನಸು-ಆಶಯಗಳಿಗೆ ತದ್ವಿರುದ್ಧವಾದ, ಪ್ರತಿಗಾಮಿ ಧೋರಣೆಯನ್ನೇ ಉಸಿರಾಗಿಸಿಕೊಂಡಿರುವ ಬಿಜೆಪಿಯನ್ನು ಅಧಿಕಾರಕ್ಕೆ ತಂದಿತು.

ಬಸವಾದಿ ಪ್ರಥಮರ ಆಶಯಗಳ ಹಾದಿಯಲ್ಲಿ ನಡೆಯಬೇಕಿದ್ದ ಬಹುಸಂಖ್ಯಾತ ಸಾದಲಿಂಗಾಯತ ಸಮುದಾಯವನ್ನು ಪ್ರತಿಗಾಮಿ ರಾಜಕೀಯಕ್ಕೆ ಗಿರವಿ ಇಟ್ಟ ಕುಖ್ಯಾತಿ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳಿಗೆ ಸಲ್ಲುತ್ತದೆ. ಇದು ಮಠದ ಮೇಲೆ ನಡೆದ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳ ರೇಡಿಗಿಂತ ಸಾವಿರ ಪಟ್ಟು ಅನಾಹುತಕಾರಿಯಾದುದು, ಅಪಾಯಕಾರಿಯಾದುದು.


...ಸ್ತುತ ರಾಜಕಾರಣದ ಸಂದರ್ಭದಲ್ಲಿ ಪರ್ಯಾಯ ...ಮ ಶಕ್ತಿ ಕೇಂದ್ರವೆಂದೇ ಬಿಂಬಿಸಲ್ಪಟ್ಟಿರುವ ಸಿರಿಗೆರೆ ...ಮೇಲೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿ ...ಪಿಕ ರೇಡು ಮಾಡಿರುವುದು ಅತ್ಯಂತ ಆಶ್ಚರ್ಯ ...ಗವನ್ನುಂಟುಮಾಡಿದೆ.

...ಗೆರೆ ಮಠಕ್ಕೆ ದಾಂಗುಡಿಯಿಟ್ಟ ತೆರಿಗೆ ಇಲಾಖೆಯ ...ಗಳಿಗೆ ಏನು ಸಿಕ್ಕಿತೋ-ಬಿಟ್ಟಿತೋ ಅದು ಮುಖ್ಯ ... ಅಲ್ಲ. ಅಧಿಕಾರಿಗಳು ಮಠದ ಆರ್ಥಿಕ ...ಗಗಳ ಕುರಿತು ಆಕ್ಷೇಪಣೆ ವ್ಯಕ್ತಪಡಿಸಿದ್ದಾರಾ? ...ನುಯಾಯಿಗಳೇ ಹೇಳುವಂತೆ ಕೇವಲ ಪರಿಶೀಲನೆ ...ವಾ? ಯಡಿಯೂರಪ್ಪ ದುಡ್ಡು ಇಟ್ಟದ್ದು ನಿಜವಾ? ... ನಡೆದಿರುವುದೇನು....? ಎಲ್ಲೆಡೆ ಹೀಗೆ ಕೊನೆ ...ಲ್ಲದ ಚರ್ಚೆಗಳು ನಡೆಯುತ್ತಲೇ ಇವೆ. ಇದು ...ವಿಕವಾದದ್ದು.

...ರೆ ಇಂತಹ ಚರ್ಚೆಗಳಾಚೆ ನಿಜಕ್ಕೂ ಆತಂಕ...ರಿಂದ ಕನಲಿ ಹೋಗುತ್ತಿರುವವರೆಂದರೆ ಇಡೀ ...ನ್ನಂತ ಇರುವ ಸಾದ ಲಿಂಗಾಯತ ಸಮುದಾಯ ...ತ್ತು ಇಡೀ ಸಮುದಾಯ ತನ್ನ ಎಲ್ಲಾ ರಾಜಕೀಯ, ...ಕ, ಆರ್ಥಿಕ ಆಗು-ಹೋಗುಗಳಿಗೂಮದುವೆ ...ಮುಂತಹ ಕೌಟುಂಬಿಕ ಕೆಲಸಗಳಿಗೂ ಲಾಂಛನ ... ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳನ್ನು ...ಸಿಕೊಂಡು ಬಿಟ್ಟಿದ್ದಾರೆ.

● ವರದಿಗಾರ

## ...ರಿಗೆರೆ ಮಠದ ಮೇಲೇ ರೈಡ್ ಯಾಕೆ?



...ಇಡೀ ದೇಶದಲ್ಲಿ ದೇವಸ್ಥಾನಗಳ..., ಮಠಮಾನ್ಯಗಳಂಥ ಧಾರ್ಮಿಕ ...ಳ ಮೇಲೆ ಆದಾಯ ತೆರಿಗೆ ...ರಿಗಳು ಕಪ್ಪು ಹಣ ...ಕೊಂಡು ದಾಳಿ ಮಾಡಿದ್ದು ... ವಿರಳ. ಆದರಲ್ಲೂ ...ನ್ಯಗಳಿಂದಲೇ ತುಂಬಿರುವ ...ಕದಲ್ಲಿ ಮಠವೊಂದರ ಮೇಲೆ ...ಮಾಗಿದ್ದು ಪ್ರಾಯಶಃ ಇದೇ ...ರಬೇಕು. ಹಾಗೆ ನೋಡಿದರೆ ...ಕದಲ್ಲಿ ಅಗರ್ಭ ಶ್ರೀಮಂತ ...ಗೇನೂ ಕೊರತೆಯಿಲ್ಲ. ...ಯ ಆಶ್ರಮಗಳು ಮತ್ತು ...ಯ ಶಾರದಾಪೀಠಗಳಂಥ ಬ್ರಾಹ್ಮಣರ ...ಬಹುದು; ಆದಿಚುಂಚನಗಿರಿಯಂಥ ...ಗ ಮಠಪರಿಬಹುದು; ...ರು-ಸಿದ್ಧಗಂಗೆಯಂಥ ಲಿಂಗಾಯತ ...ಬಹುದು; ಅಧಿಕಾರಿಗಳಿಗೆ ಹೋಲಿಸಿದರೆ ... ಸಾದು ಲಿಂಗಾಯತರ ಸಿರಿಗೆರೆ ಮಠಕ್ಕಿಂತ ... ಹೆಚ್ಚು ಶ್ರೀಮಂತವಾಗಿರುವ ... ಆದರೂ ಇನ್‌ಕಂ ಟ್ಯಾಕ್ಸ್ ...ಗಳು ಇವೆಲ್ಲವುಗಳನ್ನು ಬಿಟ್ಟು ಸಿರಿಗೆರೆ ... ದಾಳಿಗೆ ಏಕೆ ಆಯ್ಕೆಯಾದರು?

ಪ್ರಾಯಶಃ ಈ ಪ್ರಶ್ನೆಗೆ ಸದ್ಯಕ್ಕೆ ಉತ್ತರವಿಲ್ಲ. ಭವಿಷ್ಯದಲ್ಲಿ ಖಂಡಿತಾ ಸಿಗಬಹುದು.

ರಾಜ್ಯದಲ್ಲಿ ಒಕ್ಕಲಿಗರ ದೇವೇಗೌಡ, ಎಸ್ಸೆಂ ಕೃಷ್ಣ ಕುಮಾರಸ್ವಾಮಿಯಂಥ ಒಕ್ಕಲಿಗ ನಾಯಕರ ಸರ್ಕಾರವಿದ್ದಾಗ ಆದಿಚುಂಚನಗಿರಿ ಮಠದ ದರ್ಬಾರು ನಡೆಯುತ್ತಿತ್ತು. ಈಗ ಯಡಿಯೂರಪ್ಪನ ಲಿಂಗಾಯತ ಸರ್ಕಾರ ಅಧಿಕಾರದಲ್ಲಿರುವುದರಿಂದ ಲಿಂಗಾಯತ ಮಠಗಳ ದರ್ಬಾರು ನಡೆಯುತ್ತಿದೆ. ಆದರಲ್ಲೂ ಯಡ್ಡಿಯ ತಲೆಯ ಮೇಲೆ ತೂಗುಗತ್ತಿ ಸದಾ ನೇತಾಡುತ್ತಲೇ ಇದೆ. ಒಂದೆಡೆ ಪಕ್ಷದೊಳಗೆ ಭಿನ್ನಮತೀಯರ ಕಾಟ, ಇನ್ನೊಂದೆಡೆ ಪಕ್ಷದ ಹೈಕಮಾಂಡ್ ರಾಜ್ಯದ ನಾಯಕತ್ವದಲ್ಲಿ ಬದಲಾವಣೆ ಮಾಡಬಹುದಾದ ಭೀತಿ. ಹೀಗಾಗಿ, ತನ್ನ ಮುಖ್ಯಮಂತ್ರಿ ಕುರ್ಚಿ ಯಾವಾಗ ಬೇಕಾದರೂ ಬೀಳಬಹುದು ಎಂಬ ಭೀತಿ ಯಡ್ಡಿಗೆ ಇದ್ದೇ ಇದೆ. ಮುಂದೊಂದು ದಿನ ಅಂಥ ಪರಿಸ್ಥಿತಿ ಎದುರಾದರೆ ಕೋಟಿ ಕೋಟಿ ದುಡ್ಡು ಹರಿಸಿ ಎಮ್ಮೆಲ್ಲೆಗಳನ್ನು ಖರೀದಿಸುವ ಮೂಲಕ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವ ಆಲೋಚನೆಯೂ ಅವರಿಗಿದೆ. ಅಂದರೆ, ತಮ್ಮ ಕುರ್ಚಿ ಭವಿಷ್ಯದಲ್ಲಿ ಭದ್ರವಾಗಿರಬೇಕೆಂದರೆ ಕೈಯಲ್ಲಿ ಸಮುದ್ರದಂತೆ ದುಡ್ಡಿರಬೇಕು. ಅಷ್ಟೊಂದು ದುಡ್ಡು ಬೇಕೆಂದರೆ ಈಗಿರುವ ಅಧಿಕಾರವನ್ನು ಬಳಸಿಕೊಂಡು ರಾಜ್ಯವನ್ನು ಲೂಟಿ ಹೊಡೆಯಬೇಕು. ಈ ಹಿನ್ನೆಲೆಯಲ್ಲೇ ಯಡಿಯೂರಪ್ಪ ಮತ್ತು ಅವರ ಮಕ್ಕಳು ಸೇರಿಕೊಂಡು ಕಾಂಟ್ರಾಕ್ಟ್, ಟ್ರಾನ್ಸ್‌ಫರ್, ಪರವಾನಿಗೆ - ಹೀಗೆ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಬೇಕಾಬಿಟ್ಟಿ ದುಡ್ಡು ಗೆಬರುತ್ತಿದ್ದಾರೆ. ಆದರೆ, ಯಡ್ಡಿಗೆ ಸಮಸ್ಯೆಯಿರುವುದು ಗೆಬರಿಕೊಂಡ ದುಡ್ಡನ್ನು ಶೇಖರಿಸಿಟ್ಟುಕೊಳ್ಳುವುದೆಲ್ಲಿ? ಮನೆಯಲ್ಲಿಟ್ಟರೆ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳ ಕಾಟ, ರಿಯಲ್ ಎಸ್ಟೇಟ್ ಮತ್ತಿತರ ಉದ್ಯಮದಲ್ಲಿ ತೊಡಗಿಸಿದರೆ ವಿರೋಧಿಗಳ ಕಾಟ. ಮಠದಲ್ಲೋ, ದೇವಸ್ಥಾನದಲ್ಲೋ ಇಟ್ಟರೆ ಯಾರಿಗೂ ಅನುಮಾನ ಬರುವುದಿಲ್ಲ, ಆದರೆ ಯಾವ ಮಠದಲ್ಲಿಡಬೇಕು? ಅದಕ್ಕೆ ಬಹಳ ನಂಬಿಕಸ್ತ ಮಠವೇ ಬೇಕು. ಯಡಿಯೂರಪ್ಪ ಮುಖ್ಯಮಂತ್ರಿಯಾದ ಮೇಲೆ ವಾರಕ್ಕೆ ಮೂರು ಬಾರಿ ಅಡ್ಡಬೀಳುತ್ತಿರುವುದು ಸಿರಿಗೆರೆ ಮಠದ ಸ್ವಾಮಿಗಳಿಗೆ. ಯಡ್ಡಿಯ ಅಧಿಕಾರದ ವಿರುದ್ಧ ಯಾರಾದರೂ ಕೆಮ್ಮಿದರೆ ಯಡ್ಡಿಗಿಂತ ಮೊದಲು ಸಿಡಿಮಿಡಿಗೊಂಡು ದಂಡ ಬೀಸುವವರು ಸಿರಿಗೆರೆ ಮಠದ ಸ್ವಾಮಿಗಳು. ಅವರಿಬ್ಬರೂ ಅಷ್ಟರಮಟ್ಟಿಗೆ ಒಬ್ಬರನ್ನೊಬ್ಬರು ರಕ್ಷಿಸಿಕೊಳ್ಳುತ್ತಿರುವವರು. ಹೀಗಾಗಿ, ಯಡ್ಡಿ ಸಿರಿಗೆರೆ ಮಠದಲ್ಲೇ ದುಡ್ಡಿಟ್ಟಿದ್ದಾರೆ ಎಂಬುದು ಬಹಳ ಜನರಲ್ಲಿರುವ ದಟ್ಟ ಅನುಮಾನ. ಈ ಅನುಮಾನವನ್ನು ಬೆನ್ನುಹತ್ತಿಯೇ ಕೇಂದ್ರದ ಇನ್‌ಕಂ ಟ್ಯಾಕ್ಸ್ ಆಫೀಸರ್‌ಗಳು ಸಿರಿಗೆರೆ ಮಠಕ್ಕೆ ಲಗ್ಗೆಯಿಟ್ಟಿದ್ದಾರೆಂಬುದು ಬಲ್ಲವರ ಅಭಿಪ್ರಾಯ.

ಸದ್ಯದ ಪರಿಸ್ಥಿತಿಯಲ್ಲಿ ಯಾರೂ ಏನೂ ಬಾಯ್ಬಿಡುತ್ತಿಲ್ಲವಾದ್ದರಿಂದ ದಾಳಿಯಲ್ಲಿ ಎಷ್ಟು ದುಡ್ಡು ಸಿಕ್ಕಿತು, ಏನಾಯಿತು ಎಂಬೆಲ್ಲಾ ಪ್ರಶ್ನೆಗಳಿಗೆ ಉತ್ತರವಿಲ್ಲ. ಭವಿಷ್ಯದಲ್ಲಿ ಅವೆಲ್ಲ ಹೊರಬೀಳುವುದರಲ್ಲಿ ಅನುಮಾನವೂ ಇಲ್ಲ. ■

ಲಂಕೇಶ್

# ಚಿಕುನ್‌ಗುನ್ಯ: ಪರಿಹಾರಕ್ಕೊಂದು ಕಷಾಯ

ಚಿಕುನ್‌ಗುನ್ಯ ಬಗ್ಗೆ ಕೆ.ಪಿ. ಸುರೇಶರ 'ನೋವುಭರಿತ ಹಾಸ್ಯ ಪ್ರಬಂಧ' ಬಹಳ ಯಥಾರ್ಥವಾಗಿತ್ತು. ಅವರ ಒಂದೊಂದು ವಾಕ್ಯವೂ ನಿಜ. (ಲಾಸ್ಟ್-ಬಟ್-ಒನ್ ಪ್ಯಾರಾವರೆಗೂ!) ಹಾಸ್ಯದ ಲೇಪನ ನೀಡಿದ್ದರೂ ಆ ಯಾತನೆ.... ಅಬ್ಬ! ನಡೆಯಲಾಗದಿದ್ದರೂ ನಡೆಯಲೇಬೇಕಾಗಿ ಬರುವ ಕಾಯಿಲೆಬಾಧಿತರ ಆ ಪಾಡು, ನೋವು ಅನುಭವಿಸಿದವರಿಗೇ ಗೊತ್ತು. ಕಣ್ಣೀರು ತುಳುಕಗೊಡದಂತೆ ಬ್ಯಾಲೆನ್ಸ್ ಮಾಡ್ತಾ ಹೆಜ್ಜೆ ಮೇಲೆ ಹೆಜ್ಜೆ ಹಾಕಿ; ಇನ್ನೂ ಉಳಿದಿರುವ ದೂರವನ್ನು ಕಣ್ಣು-ಮನಸ್ಸುಗಳಲ್ಲೇ ಅಳೆದು ಹತಾಶೆಯಿಂದ ಕಾಲೆಳೆಯುತ್ತಾ..... ಯಾಕೆ ಹೇಳುವುದು ಬಿಡಿ!

ಅದಿರಲಿ. ಅದಕ್ಕೆ ಒಂದು ನಾಟಿ ಮದ್ದು ಬಹಳ ಉಪಯುಕ್ತ ಅಂತ ನಮಗೆ ಕಂಡಿದೆ. ಕಳೆದ ವರ್ಷ ನನ್ನ ಮಡದಿಗೆ ಈ ಕಾಯಿಲೆ ಬಂದಿದ್ದಾಗ ಪತ್ರಿಕೆಯೊಂದರಲ್ಲಿ ಬಂದಿದ್ದ ಈ ವೈದ್ಯವನ್ನು ಆಕೆ ಮಾಡಿ ನೋಡಿ ಯಥೇಚ್ಛ ಪ್ರಯೋಜನ ಪಡೆದಿದ್ದರು. ಈ ಬಾರಿ ನನಗೂ ಈ ಕಾಯಿಲೆ ತಗುಲಿಕೊಂಡಾಗ ಅದೇ ಪ್ರಯೋಗ ನಡೆದಿದೆ, ಪ್ರಯೋಜನ ಬಂದಿದೆ. ಈಗಲೂ ಬೆಂಗಳೂರಿನಲ್ಲಿ ಅಸಂಖ್ಯ ಜನ ಈ ಕಾಯಿಲೆಯಿಂದ ನರಳುತ್ತಿರುವುದರಿಂದ ಕೆಲವರಿಗಾದರೂ ಪ್ರಯೋಜನವಾಗಲಿ ಅಂತ ಬರೀತಿದೀನಿ. ಇದನ್ನು ಶಾಸ್ತ್ರೋಕ್ತ ಜ್ಞಾನದಿಂದ ಬರೆದಿಲ್ಲ. ನಾವು ಮದ್ದು ಮಾಡುತ್ತಿರುವ ರೀತಿಯನ್ನು ಬರೀತಿದೀನಿ. ಬರೆದಿದ್ದರಲ್ಲಿ ಒಂದು ವೇಳೆ ಅಲ್ಪಸ್ವಲ್ಪ ಅರೆ-ಕೊರೆ ಇದ್ದರೂ ಸಮಸ್ಯೆಯೇನಿಲ್ಲ ಅಂದ್ಕೊಂಡಿದೀನಿ. ಯಾಕೆಂದರೆ ಅಡ್ಡ ಪರಿಣಾಮ ಕಿಂಚಿತ್ತೂ ಇಲ್ಲ, ಫಲಿತಾಂಶ ಖಚಿತ.

ಇದೊಂದು ಕಷಾಯ. ಭದ್ರಮುಷ್ಟಿ ಮತ್ತು ಅಮೃತಬಳ್ಳಿ ಎಂಬೆರಡು ಗಿಡ ಮೂಲಿಕೆಗಳಿಂದ ಮಾಡಿಕೊಳ್ಳುವುದು. ಇವು ಯಾವುದೇ ಗಿಡಮೂಲಿಕೆ ಅಂಗಡಿಗಳಲ್ಲಿ (ಗಂಧಿಗೆ ಅಂಗಡಿ ಅಥವಾ ಪಸ್ಸಾರಿ ಅಂಗಡಿ ಎನ್ನುತ್ತಾರೆ) ದೊರೆಯುತ್ತವೆ. ಕಾಯಿಲೆಯ ವೈರಸ್ಸು ನಮ್ಮ ಎಲ್ಲಾ ಮೂಳೆ ಸಂದು (ಜಾಯಿಂಟ್)ಗಳಲ್ಲಿರುವ ಸತ್ವವೊಂದನ್ನು ತಿಂದು ಹಾಕಿರುತ್ತದೆ. ಬಹುಶಃ ಈ ಕಷಾಯ ಮೂಳೆ-ಸಂದುಗಳಿಗೆ ಒಂದಿಷ್ಟು ಶಕ್ತಿ ಸತ್ವ ತುಂಬುತ್ತಾ ಹೋಗುತ್ತದೆಂದು ಕಾಣುತ್ತದೆ. ತೀವ್ರ ನೋವಿರುವವರಿಗೆ 10-15 ದಿನದೊಳಗೆ ಫಲ ಕಾಣತೊಡಗುತ್ತದೆ. ಆದರೂ ಗಣನೀಯ ಗುಣ ಕಾಣಬೇಕಾದರೆ ದೀರ್ಘಕಾಲ ಕುಡಿಯುತ್ತಾ ಹೋಗಬೇಕು. ಏನಿದ್ದರೂ ಪೂರ್ತಿ ಮೊದಲಿನ ಮನುಷ್ಯರಾಗುವುದು ಅಸಾಧ್ಯವೇ ಎಂಬುದು ನನ್ನ ಅನಿಸಿಕೆ. ಆದರೆ ಕಷಾಯದಿಂದ ಕನಿಷ್ಠ ಮುಕ್ಕಾಲು ಭಾಗ ಗುಣ ಕಾಣಲು ಸಾಧ್ಯವಿದೆ ಎನ್ನಿಸಿದೆ.

## ಒಂದು ಪತ್ರ

ಕಷಾಯದ ವಿವರ: ಭದ್ರಮುಷ್ಟಿ ಮತ್ತು ಅಮೃತಬಳ್ಳಿಯನ್ನು ಗಂಧಿಗೆ ಅಂಗಡಿಯಿಂದ ತಲಾ 50 ಅಥವಾ 100 ಗ್ರಾಂ ತಂದು ಮಾಡಿ ನೋಡಬಹುದು. ಭದ್ರಮುಷ್ಟಿ ಬಲುಗಟ್ಟಿ. ಮಿಕ್ಸಿಯಲ್ಲಿ ಹಾಗೇ ಪುಡಿಯಾಗದು. ಬಿಸಿಲಲ್ಲಿ ಒಣಗಿಸಿಕೊಂಡು, ಚಚ್ಚಿ ಚೂರು ಮಾಡಿಕೊಂಡು ಎರಡನ್ನೂ ಮಿಕ್ಸಿಗೆ ಹಾಕಿ. ಜರಡಿ ಆಡಿಸಿ ಪುನಃ ಮಿಕ್ಸಿಗೆ ಹಾಕಿ ಹೀಗೆ ಅಷ್ಟನ್ನೂ ಪುಡಿ ಮಾಡಿಟ್ಟುಕೊಳ್ಳುವುದು. ಸುಮಾರು 250 ಮಿ.ಮೀ. ನೀರಿಗೆ ಕೇವಲ ಅರ್ಧ ಟೀ ಚಮಚ (ಏಳೆಂಟು ಗ್ರಾಂನಷ್ಟು) ಪುಡಿಹಾಕಿ ಒಂದು 10 ನಿಮಿಷ ಕುದಿಸುವುದು. ಅಲ್ಲೇ ನಿಂತು ಕುದಿಸಬೇಕು, ಇಲ್ಲದಿದ್ದರೆ ಉಕ್ಕಿ ಹೋಗಿ ಔಷಧಿ ಎಲ್ಲಾ ವೇಸ್ಟ್ ಆದೀತು. ಈ ಕಷಾಯವನ್ನು ಒಂದರಿಂದ ಎರಡು ಗಂಟೆಗೊಮ್ಮೆಯಂತೆ ದಿನಕ್ಕೆ ಕನಿಷ್ಠ ಐದಾರು ಬಾರಿ ಕುಡಿಯಬೇಕು. ಪ್ರತಿ ಬಾರಿ 30-40 ಮಿ.ಲೀ. ಕುಡಿದರೆ ಸಾಕು. ಬೆಳಿಗ್ಗೆ-ಮಧ್ಯಾಹ್ನ ಹೀಗೆ ಎರಡು ಬಾರಿ ಕುದಿಸಿಟ್ಟುಕೊಳ್ಳುವುದು ಒಳ್ಳೆಯದು. ಹೊರಗೆ ಓಡಾಡುವವರು ಸಹ ನೀರಿನ ಬಾಟಲಿಯಲ್ಲಿ ಇದನ್ನೇ (ಬೇಕಿದ್ದರೆ ಸ್ವಲ್ಪ ಡೈಲ್ಯೂಟ್ ಮಾಡಿ) ತುಂಬಿಕೊಂಡು ಆಗಾಗ ಕುಡಿಯಬಹುದು. ನಾನು ಹಾಗೇ ಮಾಡುವುದು.


ಕಾಲುನೋವು ಗುಣವಾಗುವುದು ತೀರಾ ನಿಧಾನ. ಮಿಕ್ಕ ಭಾಗದ ನೋವು ಬಹುಪಾಲು ಶೇ. 90 ರವರೆಗೂ ಕಮ್ಮಿಯಾಗುತ್ತದೆ. ಗಂಟೆಗಟ್ಟಲೆ ಸತತ ಬರೆಯುವುದು ಅಥವಾ ಟೈಪು ಮಾಡುವುದು, ಕನಿಷ್ಠ ಮಿತಿಗಿಂತ ಹೆಚ್ಚು ಭಾರ ಎತ್ತುವುದು ಮುಂತಾಗಿ ಮಾಡಿದರೆ ಆಯಾ ನೋವು ಹೆಚ್ಚಾಗುತ್ತೆ, ಆದರೆ ಬೇಗ ಕಮ್ಮಿಯೂ ಆಗುತ್ತೆ. (ದೀರ್ಘ ಕಾಲ ದಿನಕ್ಕೆ ಐದಾರು ಬಾರಿಯಾದರೂ ಈ ಕಹಿ ಕಷಾಯ ಕುಡಿಯುವ ತಾಳ್ಮೆಯಿಲ್ಲದವರು ಇದನ್ನು ಮಾಡಲು ಹೋಗಬೇಡಿ. ಆಸ್ಪತ್ರೆ-ಅಂಗಡಿಗಳ ನೋವು ನಿವಾರಕಗಳನ್ನೇ ನುಂಗುತ್ತ ಅನುಭವಿಸಿಕೊಂಡಿರಿ! ನಾಲ್ಕಾರು ದಿನ ಹೇಗೆಹೇಗೋ ಮಾಡಿ ಕುಡಿದಂತೆ ಮಾಡಿ, "ನಾನೂ ಮಾಡಿ ನೋಡಿದೆ, ಅಷ್ಟೇನೂ ಗುಣ ಕಾಣಲಿಲ್ಲಪ್ಪ" ಅಂತ ನೆಗೆಟಿವ್ ಸರ್ಟಿಫಿಕೇಟು ಕೊಡುವುದು ಬೇಡ).

ಇದಕ್ಕೆ ಪೂರಕವಾಗಿ, ಮುಖ್ಯವಾಗಿ ಕಾಲುನೋವಿಗೆ ವರದಾನವಾಗಬಲ್ಲ ಇನ್ನೊಂದು ಔಷಧಿ ಇದೆ. "ತ್ಯಾಂಪಣ್ಣ ಭಂಡಾರಿಯವರ ನೋವಿನೆಣ್ಣೆ" ಎಂದು ಇದರ ಹೆಸರು. 'ಮಂಗಳೂರು ಸ್ಟೋರ್'ಗಳಲ್ಲಿ ಮಾತ್ರ ಸಿಗುತ್ತದೆ. (ನಾನು ಕಂಡಂತೆ ಬೇರೆಲ್ಲೂ ಸಿಗಲ್ಲ). ನೋವು ತೀವ್ರವಾಗಿರುವ ಭಾಗಕ್ಕೆ ಸ್ವಲ್ಪವೇ ಎಣ್ಣೆ ತೀಡಿ, ನವಿರಾಗಿ ಒಂದೈದು ನಿಮಿಷ ನೀವಿಕೊಳ್ಳಬೇಕು. ತುಂಬಾ ಎಣ್ಣೆ ಬಳಸಬೇಕಿಲ್ಲ, ಖಸಾಖಸ್ ಮಸಾಜು ಮಾಡುವುದೂ ಬೇಕಿಲ್ಲ. ನೋವು ತೀವ್ರವಾಗಿದ್ದಾಗ ಯಾವ ಹೊತ್ತಿನಲ್ಲಾದರೂ ಹಚ್ಚಿಕೊಳ್ಳಬಹುದು- ದಿನಕ್ಕೆ 2-3 ಬಾರಿ ಬೇಕಾದರೂ. ರಾತ್ರಿ ಮಲಗುವ ಮೊದಲು ಹಚ್ಚಿ ನೀವಿಕೊಂಡರೆ, ರಾತ್ರಿ ನಿದ್ದೆ ಕೊಡದಂತೆ ಪ್ರಾಣ ಹಿಂಡುವ ನೋವು ನಿಶ್ಶೇಷವಾಗಿ, ಒಳ್ಳೆಯ ನಿದ್ದೆ ಬರುತ್ತದೆ. ಬೇರೆಯವರ ಕೈಲಿ ಹಚ್ಚಿಸಿ ನೀವಿಸಿಕೊಂಡರೆ ಪ್ರಯೋಜನ ಅತಿಹೆಚ್ಚು ಎಂದು ಕಂಡಿದೆ ನಮಗೆ. ಚಿಕುನ್‌ಗುನ್ಯಾಕ್ಕೆ ಮಾತ್ರ ಎಂದೇನಿಲ್ಲ, ಯಾವ ನೋವಿರುವವರೂ ಬಳಸಬಹುದು. ಹಚ್ಚಿಕೊಂಡ ನಂತರ ಸ್ವಲ್ಪ ಹೊತ್ತಾದರೂ ಆ ಭಾಗಕ್ಕೆ ವಿಶ್ರಾಂತಿ ಕೊಡುವುದೊಳ್ಳೆಯದು. ನೋವು ಕಮ್ಮಿಯಿದ್ದಾಗ ಹಚ್ಚದೆ ಇದ್ದರೂ ಪರವಾಗಿಲ್ಲ. ಮೇಲೆ ಹೇಳಿದ ಕಷಾಯವನ್ನಾದರೆ ಸತತವಾಗಿ ಕುಡಿಯಬೇಕು. ಅದು ಕಾಯಿಲೆಯ ಪರಿಣಾಮವನ್ನೇ ಕ್ರಮೇಣ ತೊಡೆದು ಹಾಕುತ್ತದೆ ಎಂದು ನನ್ನ ಅನಿಸಿಕೆ. ಈ ಎಣ್ಣೆ ತಕ್ಷಣ ನೋವು ಶಮನ ಮಾಡುತ್ತದೆ, ಹೆಚ್ಚು ಕಾಲ ಪರಿಣಾಮ ಇರುತ್ತದೆ.

-ನಾರಾಯಣ್, ಬೆಂಗಳೂರು

# ತೀರ್ಥಹಳ್ಳಿ: ಮಹಾಬಳೇಶಗೌಡರ ಕಿಡ್ನಾ ಮಾಡಿದೋನು ಷಡ್ಡಕ ಮಂಜುನಾಥ

ಆಗಸ್ಟ್ 15ರಂದು ಕಿಡ್ನಾಪ್ ಆಗಿ, ಅಂದೇ ಸಂಜೆ ಆತಂಕದ ನಡುವೆ ಜೀವ ಉಳಿಸಿಕೊಂಡು ವಾಪಸ್ ಆಗಿದ್ದಾರೆ ತೀರ್ಥಹಳ್ಳಿಯ ಕಾಂಗ್ರೆಸ್ ನಾಯಕರಲ್ಲೊಬ್ಬರಾದ ಮಹಾಬಳೇಶಗೌಡರು. ಅವರನ್ನು ಕಿಡ್ನಾಪ್ ಮಾಡಿದ್ದು ಅವರ ಷಡ್ಡಕ ಮಂಜುನಾಥ್. ಇದು ಹಣದಾಸೆಗಾಗಿ ನಡೆದ ಕಿಡ್ನಾಪ್ ಅಲ್ಲ, ಆಸ್ತಿ ಜಗಳಕ್ಕೂ ಅಲ್ಲ, ರಾಜಕೀಯ ದ್ವೇಷಕ್ಕೂ ಅಲ್ಲ!




ಮಂಜುನಾಥ್

ತನ್ನ ಹುಂಬ ಬುದ್ಧಿಯ ಕಾರಣದಿಂದಾಗಿ ಹೆಂಡತಿ, ಇಬ್ಬರು ಹೆಣ್ಣುಮಕ್ಕಳನ್ನು ದೂರ ಮಾಡಿಕೊಂಡ ಮಂಜುನಾಥ್, ಹಲವಾರು ಕೋಟಿಗಳು ಕಾಲಬಳಿ ಕೊಳೆಯುತ್ತಿದ್ದರೂ ಅನಾಥನಂತಾದ. ಇಷ್ಟಕ್ಕೆಲ್ಲ ಕಾರಣ ತನ್ನ ಷಡ್ಡಕ, ಕೋಣಂದೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಾಬಳೇಶಗೌಡರೇ ಕಾರಣ ಎಂದು ಭ್ರಮಿಸುತ್ತ ಭ್ರಮಿಸುತ್ತ ಗೌಡರ ವಿರುದ್ಧ ಅನಗತ್ಯ ದ್ವೇಷ ಕಾರತೊಡಗಿದ. ಕೊನೆಗೆ ಗೌಡರಿಗೆ 'ತಕ್ಕಪಾಠ' ಕಲಿಸಲೆಂದು ಕಿಡ್ನಾಪ್ ಮಾಡಿದ, ಹುಚ್ಚು ಆವೇಶದಲ್ಲಿ ಕೊಲೆ ಮಾಡಲು ನಿರ್ಧರಿಸಿದ.... ಆದರೆ ಪೊಲೀಸರ ಸಕಾಲಿಕ ಕಾರ್ಯಾಚರಣೆಯಿಂದಾಗಿ ಕೇವಲ ಐದಾರು ತಾಸುಗಳಲ್ಲಿ ಪೊಲೀಸರ ಬಲೆಗೆ ಬಿದ್ದ. ಮೊದಲೇ ಪ್ಲಾನು ಮಾಡಿದಂತೆ, ಈಗ ಅನಾರೋಗ್ಯದ ನೆಪವೊಡ್ಡಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಮಲಗಿದ್ದಾನೆ. ಇವನಿಗೆ ಸಾಥ್ ನೀಡಿದ ಭದ್ರಾವತಿಯ ರೌಡಿಗಳಾದ ಸುಧೀರ್ ಮತ್ತು ಕನಕ ಕಂಬಿ ಎಣಿಸುತ್ತಿದ್ದಾರೆ.

## ದ್ವೇಷಕ್ಕೆ ಹಿನ್ನೆಲೆ

ತೀರ್ಥಹಳ್ಳಿಯ ಅರಗದಿಂದ ನಾಲ್ಕು ಕಿ.ಮೀ ದೂರದ ಮನೆಯಲ್ಲಿ ವಾಸವಾಗಿರುವ ತಾಲ್ಲೂಕು ಕಾಂಗ್ರೆಸ್ ನಾಯಕ ಮಹಾಬಳೇಶಗೌಡರ ಪತ್ನಿಯ ತಂಗಿಯನ್ನು ಶಿವಮೊಗ್ಗದ ಅಡಿಕೆ ಮಂಡಿಯ ಬಡ್ಡಿಕುಳ ಮಂಜುನಾಥನಿಗೆ ಮದುವೆ ಮಾಡಿಕೊಡಲಾಗಿತ್ತು. ಮಂಜುನಾಥ ಮದುವೆಗೆ ಮೊದಲೇ ತನ್ನ ಕುತಂತ್ರಗಳಿಂದ ಅಪಾರ ಹಣ ಮಾಡಿದ್ದ. ಇಬ್ಬರು ಹೆಣ್ಣುಮಕ್ಕಳು ಬೆಳೆದು ದೊಡ್ಡವರಾಗೋವರೆಗೂ ಮಂಜುನಾಥನ ಕುಟುಂಬದಲ್ಲಿ ಏನೇನೂ ಕಿರಿಕಿರಿ ಇರಲಿಲ್ಲ. ಮಂಜುನಾಥನ ಮೊದಲ ಮಗಳು ಕ್ರಿಶ್ಚಿಯನ್ ಯುವಕನನ್ನು ಪ್ರೇಮಿಸಿ ಮದುವೆಯಾದಳು. ಇದಕ್ಕೆ ಮಂಜುನಾಥ್ ಭಾರೀ ಪ್ರತಿರೋಧವೊಡ್ಡಿದ. ಆದರೆ ಅಪಾರ ಆಸ್ತಿ ತ್ಯಜಿಸಲೂ ಸಜ್ಜಾಗಿದ್ದ ಮಗಳು ಪ್ರೇಮಿಸಿದವನ ಜೊತೆ ವಿವಾಹವಾದಳು. ಆಗ ಮದುವೆಗೆ ಮಹಾಬಳೇಶಗೌಡರು ಸಪೋರ್ಟು ಮಾಡಿದ್ದರು. ಇದು ಮಂಜುನಾಥ್‌ನಲ್ಲಿ ಮೊದಲ ಬಾರಿಗೆ ಗೌಡರ ವಿರುದ್ಧ ಅಸಹನೆ ಹುಟ್ಟುವಂತೆ ಮಾಡಿತ್ತು.



ಮಹಾಬಳೇಶಗ

ಮೊದಲ ಮಗಳಿಗೆ ಒಂಚೂರೂ ಆಸ್ತಿ ಸೇರಬಾರದೆಂದು ನಿರ್ಧರಿಸಿದ ಮಂಜುನಾಥ್ ಇಡೀ ಆಸ್ತಿಯನ್ನು ಹೆಂಡತಿ ಮತ್ತು ಎರಡನೇ ಮಗಳ ಹೆಸರಿಗೆ ಬರೆದ. ಡಿವೈಎಸ್ಪಿಯಾಗಿರುವ ವರನೊಬ್ಬನನ್ನು ಹುಡುಕಿ ತನ್ನ ಎರಡನೇ ಮಗಳ ಮದುವೆಗೆ ತಯಾರಿ ನಡೆಸಿದ. ಎರಡನೇ ಮಗಳು ಈ ಮದುವೆಗೆ ಒಪ್ಪಲಿಲ್ಲ, ಆಕೆ ಶಿವಮೊಗ್ಗ ವಿ.ವಿ.ಯ ನಿವೃತ್ತ ವಿ.ಸಿ. ಅಂಬಳಿಕೆ ಹಿರಣ್ಯಗೌಡರ ಪುತ್ರ ಸಂತೋಷನನ್ನು ಮದುವೆಯಾಗುವುದಾಗಿ ಹಠ ಹಿಡಿದಳು. ಇದನ್ನು ತಪ್ಪಿಸಲು ಸಂಬಂಧಿಕರನ್ನೆಲ್ಲ ಮನೆಗೆ ಕರೆಸಿದ ಮಂಜುನಾಥ್ ಮಗಳಿಗೆ ಬುದ್ಧಿ ಹೇಳಿಸಲು ಯತ್ನಿಸಿದ. ಹಠಬಿಡದ ಮಗಳಿಗೆ ಎಲ್ಲರ ಎದುರು ಹೊಡೆದುಬಿಟ್ಟ. ಆಗ ಎರಡನೇ ಮಗಳು ಸೀದಾ ಎದ್ದವಳೆ ಮಹಾಬಳೇಶಗೌಡರ ಕಾರು ಏರಿ ಕುಳಿತುಬಿಟ್ಟಳು.

ಮಹಾಬಳೇಶಗೌಡರು 15 ದಿನ ಅವಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು, ಮಂಜುನಾಥ್‌ಗೆ ಗೊತ್ತಿಲ್ಲದಂತೆ ಆಕೆಯ ಇಷ್ಟದಂತೆ ಸಂತೋಷನೊಂದಿಗೆ ಮದುವೆ ಮಾಡಿದರು. ಅಂದಂತೆ ಈ ಸಂತೋಷ್ ಮಹಾಬಳೇಶಗೌಡರ ಅಳಿಯನ ತಮ್ಮ. ಇದು ಗೊತ್ತಾಗಿದ್ದೇ ತಡ, ಮಂಜುನಾಥ್ ಮಹಾಬಳೇಶಗೌಡರ ಮೇಲೆ ಕೊತಕೊತ ಕುದಿಯತೊಡಗಿದ. ತನ್ನ ಇಬ್ಬರು ಹೆಣ್ಣು ಮಕ್ಕಳನ್ನು ಅವರ ಇಚ್ಛೆಯಂತೆ ಸಂತೋಷದಿಂದ ಮದುವೆ ಮಾಡಿಕೊಟ್ಟು ಆರಾಮವಾಗಿರಬಹುದಾಗಿದ್ದ ಮಂಜುನಾಥ್ ತನ್ನ ಹಠ ಸಾಧಿಸಲು ಹೋಗಿ ಇಬ್ಬರೂ ಮಕ್ಕಳಿಂದ ದೂರವಾದ. ಆ ಸಿಟ್ಟಿನಲ್ಲಿ ಹೆಂಡತಿಗೆ ಹಿಂಸೆ ಕೊಡಲಾರಂಭಿಸಿದ. ಸಾಕಾಗಿ ಹೋದ ಆತನ ಪತ್ನಿಯೂ ಮನೆ ತೊರೆದುಹೋದರು. ಆಗ ಆಕೆಯ ನೆರವಿಗೆ ಬಂದಿದ್ದು ಮತ್ತೆ ಮಹಾಬಳೇಶಗೌಡರೇ. ಅವರು ಆಕೆಯನ್ನು ಆಕೆಯ ಎರಡನೇ ಮಗಳ ಮನೆಯಲ್ಲಿರಿಸಿ, ಮಂಜುನಾಥನೊಂದಿಗೆ ಸಂಪರ್ಕವೇ ಇಲ್ಲದಂತೆ ಮಾಡಿದರು. ತನಗೆ ತನ್ನ ಹೆಂಡತಿ, ಮಕ್ಕಳು ಬೇಕು ಎಂದು ಜ್ಞಾನೋದಯವಾದವನಂತೆ ಅರಚಾಡತೊಡಗಿದ ಮಂಜುನಾಥ್. ಆದರೆ ಅವರ‍್ಯಾರು ಇವನ ಬಳಿ ಬರಲು ಒಪ್ಪಲಿಲ್ಲ.

ಈ ಎರಡು ವರ್ಷಗಳಲ್ಲಿ ಮಂಜುನಾಥ್ ಮಹಾಬಳೇಶಗೌ ಹಿಂಸೆ ನೀಡಲು ವಿವಿಧ ಬಗೆಯ ವಿಫಲ ಯತ್ನ ಮಾಡಿದ. ಭದ್ರ ಮಂಗಳೂರು ರೌಡಿಗಳ ಸಂಪರ್ಕಕ್ಕೆ ಬಂದ. ಈಗ್ಗೆ ಕೆಲ ತಿಂಗಳ ಹಿಂದಷ್ಟೇ ಆತನ ಪತ್ನಿ ಡೈವೋರ್ಸ್ ನೋಟೀಸ್ ಕಳಿಸಿಬಿಟ್ಟರು. ಅ ಪೂರ್ತಿ ಅನಾಥನಾದವನಂತೆ ತೊಳಲಾಡಿದ ಮಂಜುನಾಥ್ ಮಹಾಬ ಗೌಡರನ್ನು ಕಿಡ್ನಾಪ್ ಮಾಡುವ, ಸಾಧ್ಯವಾದರೆ ಕೊಲ ಯತ್ನ ಆರಂಭಿಸಿದ. ಇದನ್ನು ಮೊದಲೇ ಗ್ರಹಿ ತೀರ್ಥಹಳ್ಳಿಯ ಪತ್ರಕರ್ತ ಅನಿಲ್ ಎಂಬುವವರು 'ವಿಧಾತಾ' ಪತ್ರಿಕೆಯಲ್ಲಿ ನಾಲ್ಕು ವಾರಗಳ ಹಿಂದೆ ಅ ಬರೆದುಬಿಟ್ಟರು. ಆಗ ಶಿವಮೊಗ್ಗ ಎಸ್ಪಿ ಮುರು ಮಂಜುನಾಥನನ್ನು ಸ್ಟೇಷನ್‌ಗೆ ಕರೆಸಿ, ಆತನ ಬಳಿ ಸ್ವರಕ್ಷಣಾ ಗನ್‌ಅನ್ನು ಕಬ್ಜಾ ಮಾಡಿಕೊಂಡು, 'ಮ ಬಳೇಶರಿಗೆ ತೊಂದರೆ ಕೊಡುವುದಿಲ್ಲ' ಎಂದು ಮು ಬರೆಸಿಕೊಂಡರು. ಇತ್ತ ತೀರ್ಥಹಳ್ಳಿಯ ಪೊಲಿ ಮಹಾಬಳೇಶಗೌಡರಿಗೆ ರಕ್ಷಣೆ ನೀಡಲು ಬಂ ಆದರೆ ಮಹಾಬಳೇಶ್ ಅದನ್ನು ನಿರಾಕರಿಸಿದ್ದರು.

## ಆಗಸ್ಟ್ 15ಕ್ಕೆ ಕಿಡ್ನಾಪ್

ಆಗಸ್ಟ್ 15ರಂದು ಅರಗದಲ್ಲಿ ಧ್ವಜಾರೋಹಣ ಮಾ ಮಹಾಬಳೇಶಗೌಡರು, ತೀರ್ಥಹಳ್ಳಿಯ ತುಂಗಾ ಕಾಲೇಜಿನ ಧ್ವಜಾರೋ ತಮ್ಮ ಆಲ್ಟೋ ಕಾರಿನಲ್ಲಿ ಹೊರಟರು. ದಾರಿಮಧ್ಯದಲ್ಲಿ ಕೆಎ-14ಎಂ6 ನಂಬರಿನ ಅಕ್ಸೆಂಟ್ ಕಾರಿನಲ್ಲಿ ಮಂಜುನಾಥ್ ಗೊತ್ತಿಲ್ಲದಂತೆ ಫಾ ಮಾಡತೊಡಗಿದ. ಜೊತೆಗೆ ಭದ್ರಾವತಿಯ ರೌಡಿಗಳಾದ ಸುಧೀರ್, ಇದ್ದರು. ತೀರ್ಥಹಳ್ಳಿಯಲ್ಲಿ ಗೌಡರು ಧ್ವಜಾರೋಹಣ ಮುಗಿಸಿ ವ ಊರಕಡೆ ಹೊರಟರು. ಆಗಲೂ ದೂರದಿಂದ ಫಾಲೋ ಮಾಡು ಇತ್ತು ಮಂಜುನಾಥನ ಕಾರು. ಅರಗದ ಮುಖ್ಯರಸ್ತೆ ದಾಟಿ ಕಾಲುದಾ ಗೌಡರ ಕಾರು ಬಂದೊಡನೆ ಹಿಂದೆಯೇ ರಭಸವಾಗಿ ಬಂತು ಮಂಜುನಾ ಕಾರು. ಅಪಾಯ ಗ್ರಹಿಸಿದ ಗೌಡರು ಕಾರಿನ ಎಲ್ಲ ಗ್ಲಾಸುಗಳನ್ನು ಮ ಮನೆ ಕಡೆ ಕಾರು ಓಡಿಸತೊಡಗಿದರು. ಮನೆ ಇನ್ನೂ ಫರ್ಲಾ ಇರುವಂತೆ ಅಡ್ಡಹಾಕಿದ ಮಂಜುನಾಥ್ ದೊಣ್ಣೆಯಿಂದ ಕಾರಿನ ಗ್ಲಾಸುಗ ಒಡೆದು, ಮಹಾಬಳೇಶಗೌಡರನ್ನು ಎತ್ತೊಯ್ದ. ಉಳಿದಿಬ್ಬರು ರೌಡಿ ಮಂಕಿಕ್ಯಾಪ್ ಹಾಕಿದ್ದರಿಂದ ಯಾರೆಂದು ಗೊತ್ತಾಗಲಿಲ್ಲ. ಬುದ್ಧಿ ಹೇ ಬಂದ ರಾಮಸ್ವಾಮಿ ಎನ್ನುವವರನ್ನು ಕೇರ್ ಮಾಡದೇ ಮಂಜುನ ಕಾಡಿನ ಕಡೆ ಹೊರಟುಬಿಟ್ಟ.

ಯಡಿಯೂರು ಹತ್ತಿರದ ಬೈಸೆ ಎಂಬ ದಟ್ಟಕಾಡಿನೊ ಕಾರು ನುಗ್ಗಿಸಿದ ಮಂಜುನಾಥ್ ಕಾರನ್ನು ಅಲ್ಲೇ ನಿ ಇನ್ನೂ ದೂರಕ್ಕೆ ಮಹಾಬಳೇಶಗೌಡರನ್ನು ಎಳೆದೊಯ್ದ. ಅವರ ಕೈಕಾಲು ಕಟ್ಟಿಹಾಕಿ, ತನ್ನ ಸಂಬಂಧಿಕರಿ ಫೋನುಮಾಡಿ ವಿಷಯ ತಿಳಿಸಿ, ಕೊಲ್ಲುವುದಾಗಿ ಬೆದರಿ ಜೊತೆಗಿದ್ದ ಇಬ್ಬರು ರೌಡಿಗಳಿಗೆ ಗೌಡರ ಕೈ ಕತ್ತರಿ ಹೇಳಿದ. ಒಪ್ಪದ ಅವರು ತಮ್ಮ ಪೇಮೆಂಟ್ ಪ ರೈಟ್ ಹೇಳಿದರು.

ಅಷ್ಟೊತ್ತಿಗಾಗಲೇ ಪೊಲೀಸರು, ಎ.ಎನ್.ಎಫ್‌ನ ಬೈಸೆ ಕಾಡಿನಲ್ಲಿ ಕಾರು ಪತ್ತೆ ಹಚ್ಚಿ ಜಾಲ ಬೀಸಿದ್ದರು. ಹೊತ್ತು ಮಹಾಬಳೇಶರ ಕುತ್ತಿಗೆಗೆ ಮಚ್ಚು ಹಿಡಿದು ಕಾರಿನತ್ತ ಹೊ ಮಂಜುನಾಥ್. ಕಾರಿನಲ್ಲಿದ್ದ ಗೋಣಿಚೀಲ ಒಯ್ಯುವುದು ಅವನ ಉ ವಾಗಿತ್ತು, ಬಹುಶಃ ಗೌಡರನ್ನು ಕೊಂದು ಅದರಲ್ಲಿ ತುಂಬಬೇಕೆಂದಿದ್ದ ಏನೋ? ಆದರೆ ಕಾರಿನ ಹತ್ತಿರ ಬರುತ್ತಿದ್ದಂತೆ ರಿವಾಲ್ವರ್ ಹಿ ಪೊಲೀಸ್ ರವಿನಾಯಕ್ ಎಚ್ಚರಿಕೆ ನೀಡಿದರು. ಆಗ ಮಚ್ಚನ್ನು ಅ ಬೀಸಿದ ಮಂಜುನಾಥ್. ಇತ್ತ ಇನ್ಸ್‌ಪೆಕ್ಟರ್ ಲಿಂಗದಾಳ ಎರಡು ಗಾಳಿಯಲ್ಲಿ ಗುಂಡುಹಾರಿಸಿ ಮಂಜುನಾಥನನ್ನು ಬಂಧಿಸಿದರು. ನೆರವಿನಿಂದ ಭದ್ರಾವತಿಯ ರೌಡಿಗಳೂ ಸಿಕ್ಕರು...

ತನ್ನ ಮಕ್ಕಳು, ಹೆಂಡತಿಗೆ ಒಳ್ಳೆಯದನ್ನೇ ಬಯಸಿದ ಮಹಾಬಳೇಶಗ ವಿರುದ್ಧ ಅನಗತ್ಯ ದ್ವೇಷ ಬೆಳೆಸಿಕೊಂಡ ಹುಂಬ ಮಂಜುನಾಥ್ ಪೊಲೀಸರ ಅತಿಥಿ.

ಇನ್ಮುಂದೆ ಮಹಾಬಳೇಶಗೌಡರು ಡೇಂಜರ್ ಜೋನ್‌ಗೆ ಬದ್ದಂತಾ ಏಕೆಂದರೆ ಜೈಲಲ್ಲಿ ಮಂಜುನಾಥನಿಗೆ ವೃತ್ತಿಪರ ಕೊಲೆಗಾ ಪರಿಚಯವಾಗುವ ಸಾಧ್ಯತೆಯಿದೆ, ಮಂಜುನಾಥನಲ್ಲಿ ದ್ವೇಷ ಹೆಪ್ಪುಗ ಜೊತೆಗೆ ಕೋಟಿಕೋಟಿ ಹಣವಿದೆ....

● ವರದಿಗ

## ಕುತಂತ್ರಿಯ ಹಿನ್ನೆಲೆ

ಮಂಜುನಾಥ್ ಮೊದಲಿನಿಂದಲೂ ಶ್ರೀಮಂತನೇನಲ್ಲ. ಶಿವಮೊಗ್ಗದ ಅಕ್ಕಿ ವ್ಯಾಪಾರ ಮಾಡ್ತಾ ಮಾಡ್ತಾ ಲಾರಿ ಕೊಂಡುಕೊಂಡ. ಗಂಧದ ಕಳ್ಳಸಾಗಾಣಿಕೆಯಂತಹ ಕೆಲಸಗಳಿಂದ ಕುಬೇರನಾದ. ಎಳ್ಳನೆ ನಾಗರಾಜಗೌಡ ಎಂಬುವರ ಶಿವಶಂಕರ್ ಬಸ್ ಕಂಪನಿ ಸೇರಿಕೊಂಡು ಅದನ್ನು ಹಳ್ಳ ಹಿಡಿಸಿ ತಾನೂ ಲಾಭ ಮಾಡಿಕೊಂಡ. ಆಗ ಇವನಿಗ ಜೊತೆಯಾಗಿದ್ದುದು ದಿವಂಗತ ಹಾ.ಮಾ. ನಾಯಕರ ಪುತ್ರರತ್ನನಂತೆ!

ಸಕ್ರೆಬೈಲು ಬಳಿ 10 ಲಕ್ಷ ಕೊಟ್ಟು ತೋಟವೊಂದನ್ನು ಖರೀದಿಸಿದ. ಆಗ ಅಡಿಕೆಗೆ ರೇಟು ಬಂತು. ತೋಟವನ್ನ 1 ಕೋಟಿ 30 ಲ ಮಾರಿ, ಅಡಿಕೆ ಮಂಡಿಯಲ್ಲಿ ಬಡ್ಡಿದಂಧೆ ಆರಂಭಿಸಿದ. ಆದರೆ ಇಲ್ಲಿವರೆಗ ರೌಡಿಗಳ ಸಂಪರ್ಕದಿಂದ ದೂರವಿದ್ದ. ಈಗ [illegible] ಕಲಿಸಲು ರೌಡಿ ಎಲಿಮೆಂಟುಗಳ ಸಹವಾಸಕ್ಕಿಳಿದು ಜೈಲುಪಾಲಾದ.



# ಬಿಜಾಪುರ: ಕಬ್ಬಿಗೆ ಕೇಸರಿ ವಿಷ! ಇದು ಯಡ್ಡಿಯ ಸಾಹಸ!!

[illegible]ಪುರದಲ್ಲಿ ಒಂದು ತಿಂಗಳಿಂದ ರಾಜ್ಯ ಸರ್ಕಾರದ ವಿರುದ್ಧ [illegible]ಗಾರರ ಪ್ರತಿಭಟನೆ ನಡೆದಿದೆ. ಐದಾರು ವರ್ಷಗಳಿಂದ [illegible]ಕುತುತ್ತವಿಂದಾಗಿ ಕಬ್ಬು ಬೆಲೆ ಕುಸಿದು ಅಸಹಾಯಕರಾಗಿದ್ದ [illegible]ಗಾರರಿಗೆ ಈ ಬಿಜೆಪಿ ಸರ್ಕಾರ ಆಶ್ವಾಸನೆ ನೀಡುತ್ತಲೇ [illegible] ಇವತ್ತಿಗೂ ಬಿಜಾಪುರದ ಕಬ್ಬು ಬೆಳೆಗಾರರಿಗೆ ನೀಡಬೇಕಾದ [illegible] ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ಬೆಂಗಳೂರಿನ [illegible]ಗೆ, ರಿಂಗ್‌ರೋಡ್‌ಗೆ ತರಾತುರಿಯಿಂದ ಅನುದಾನವನ್ನು [illegible]ಮಾಡುವ ಸರ್ಕಾರಗಳು ರೈತರಿಗೆ ಸರ್ಕಾರವೇ ನಿಗದಿಪಡಿಸಿದ [illegible]ಡಲು ಒಪ್ಪುವುದಿಲ್ಲ. ಅಂದರೆ ಈ ರಾಜ್ಯದಲ್ಲಿ ಅಭಿವೃದ್ಧಿ [illegible]ವೇ ಬೆಂಗಳೂರಿನ ಅಭಿವೃದ್ಧಿಯಾ? ಎಂಬ [illegible] ಬಿಜಾಪುರದ ರೈತರನ್ನು ಕಾಡುತ್ತಿದೆ. ಇವರ [illegible] ಮಹತ್ವ ಅರಿತ ಗದಗಿನ ತೋಂಟದಾರ್ಯ [illegible] ಬಿಜಾಪುರಕ್ಕೆ ಬಂದು ಪ್ರತಿಭಟನೆಗೆ ಬೆಂಬಲ [illegible]ರೆ. ಆದರೆ ರಾಘವೇಶ್ವರ ಅವರಿಗೆ ಸಿಕ್ಕಸಿಕ್ಕ [illegible]ಕೊಡುವುದರಲ್ಲಿ, ಗೋಮಾತೆ ಹೆಸರಲ್ಲಿ ದಲಿತರ, [illegible]ತರ ಆಹಾರ ಪದ್ಧತಿಗೇ ನಿಷೇಧ ಹೇರುವುದರಲ್ಲಿ [illegible]ವ ಈ ಸರ್ಕಾರ ಕಬ್ಬು ಬೆಳೆಗಾರರಿಗೆ ಅವರ [illegible]ಯಾದ ಮಾರುಕಟ್ಟೆ ದರವನ್ನು ನೀಡಲಿಲ್ಲ. [illegible]ಹಾರವನ್ನು ಕೊಡುತ್ತಿಲ್ಲ. ಅಂದಂತೆ ಬಿಜಾಪುರ [illegible]ಹುತೇಕ ಲಿಂಗಾಯತ ರೈತರು ಜಾತಿಯ [illegible]ವಾಗಿ ಯಡ್ಡಿಯ ಮುಖ ನೋಡಿ ಬಿಜೆಪಿಗೆ ಬೆಂಬಲಿಸಿದ್ದರು. [illegible] ಈ ಸರ್ಕಾರ ಸಂಸ್ಕೃತ ವಿಶ್ವವಿದ್ಯಾಲಯ, ಗೋಹತ್ಯೆ ನಿಷೇಧ [illegible]ಸಕ್ಕೆ ಬಾರದ ಚಟುವಟಿಕೆಗಳಲ್ಲಿ ಮುಳುಗಿ ಹೋಗಿ, ರೈತ [illegible]ವನ್ನು ನಿರ್ಲಕ್ಷ್ಯ ಮಾಡುತ್ತಿದೆ. ಬೀಜ, ಗೊಬ್ಬರದಿಂದ [illegible]ಮಾರುಕಟ್ಟೆಯ ದರದವರೆಗೂ ರೈತರಿಗೆ ಅನ್ಯಾಯವಾಗಿದೆ. [illegible]ಗೊಬ್ಬರಗಳ ಕಾಳಸಂತೆಕೋರರು ಬಹುತೇಕವಾಗಿ ಬಿಜೆಪಿ [illegible] ಲಿಂಗಾಯತ ಸಮುದಾಯದವರೇ ಆಗಿದ್ದಾರೆ. ಕಳೆದ [illegible]ಬ್ಬಳ್ಳಿಯಲ್ಲಿ ಆಹಾರ ಪೂರೈಕೆ ಮಂತ್ರಿ ಹರತಾಳು ಹಾಲಪ್ಪ [illegible]ಡಿದ ಅಕ್ಕಿ ಗೋಡೌನ್‌ಗೆ ಸಚಿವ ಉದಾಸಿಯ ಪುತ್ರ, [illegible]ಕುಮಾರ ಉದಾಸಿಯೂ ಪಾರ್ಟನರ್! ಹಾವೇರಿಯಲ್ಲಿ [illegible]ಕ್ರಮ ದಾಸ್ತಾನು ಮಾಡಿದವರೆಲ್ಲ ಉದಾಸಿಯ ಬೆಂಬಲಿಗರು. [illegible]ಮುಖ್ಯವಾಗಿ ಅವರೆಲ್ಲ ಬಿಜೆಪಿಯ ಬೆಂಬಲಿಗರು!



### ವಚನಭ್ರಷ್ಟ ಯಡ್ಡಿ!

ಕುಮಾರಸ್ವಾಮಿ ತನಗೆ ಸಿಎಂ ಪಟ್ಟ ಕೊಡಲಿಲ್ಲ ಎಂದು ಬೊಬ್ಬೆ ಹಾಕಿ, ಅರಳು-ಮರಳಿನಲ್ಲಿರಬಹುದಾದ ಸಿದ್ಧಗಂಗಾಸ್ವಾಮಿಗಳಂತವರ ಬೆಂಬಲ ಪಡೆದು, ಲಿಂಗಾಯತರಿಗೆ ಒಂದು 'ಐಡೆಂಟಿಟಿ' ಇರುವುದು ಬಿಜೆಪಿಯಲ್ಲೇ ಎಂಬ ಭ್ರಮೆ ಸೃಷ್ಟಿಸಿ ಆಯ್ಕೆಯಾದ ಯಡಿಯೂರಪ್ಪ ಹತ್ತಾರು ಸಲ ಬಿಜಾಪುರಕ್ಕೆ ಬಂದಿದ್ದಾರೆ, ಕಬ್ಬು ಬೆಳೆಗಾರರಿಗೆ ಹಳೆಯ ಪರಿಹಾರವನ್ನು ಪೂರೈಸುವ ಆಶ್ವಾಸನೆ ನೀಡಿದ್ದಾರೆ. ಕೊಡದೇ ಆಗದಿದ್ದಾಗ ಇಲೆಕ್ಷನ್ ನೀತಿಸಂಹಿತೆ ಎಂಬ ಕಾರಣವನ್ನು ಕೊಟ್ಟಿದ್ದಾರೆ.

ಆದರೀಗ?

ಬಿಜಾಪುರದಲ್ಲಿ ಯಾವ ಎಲೆಕ್ಷನ್ನೂ ಇಲ್ಲ. ರೈತರಿಗೆ ಬರಬೇಕಾದ ನ್ಯಾಯಯುತ ಪರಿಹಾರ ಕೊಡಲು ಯಡ್ಡಿಗೇನು ಅಡ್ಡಿ? ಬಹುಶಃ ಸರ್ಕಾರದಲ್ಲಿ ಹಣವಿಲ್ಲ, ಹಣವಿದ್ದರೂ ಅದು ಮೂರ್ತಿ ಸ್ಥಾಪನೆಗೋ, ಸಂಸ್ಕೃತ ವಿಶ್ವವಿದ್ಯಾಲಯ ಸ್ಥಾಪನೆಗೋ, ಗೋಕರ್ಣ ಸ್ವಾಮಿಯ ವ್ಯವಹಾರಗಳ ವಿಸ್ತರಣೆಗೋ ವ್ಯಯವಾಗುತ್ತಿದೆ ಅಷ್ಟೇ.

### ಬಿಜಾಪುರದ ಬಿಕ್ಕಟ್ಟು

ರಾಜ್ಯದಲ್ಲಿ 15 ಜಿಲ್ಲೆಗಳಲ್ಲಿ ಕಬ್ಬು ಬೆಳೆಯಲಾಗುತ್ತಿದ್ದು ಬಿಜಾಪುರ ಜಿಲ್ಲೆಯ ಬೆಳೆಗಾರರು ಪ್ರತ್ಯೇಕ ಸಮಸ್ಯೆಯನ್ನೇ ಎದುರಿಸುತ್ತಾ ಬಂದಿದ್ದಾರೆ. ಕೃಷ್ಣೆ, ಭೀಮಾ, ಮಲಪ್ರಭಾಗಳ ಕೃಪೆಯಿಂದ ಇಲ್ಲಿ ಕಬ್ಬು ವ್ಯವಸಾಯ ನಡೆಯುತ್ತಿದೆ. ಮಳೆ ಕೈಕೊಟ್ಟರೆ, ಕಬ್ಬು ಬೆಳೆಗಾರರು, ಅವರ ಹೊಲಗಳಲ್ಲಿ ದುಡಿಯುವ ಸಾಮಾನ್ಯ ಜನರು ಅತಂತ್ರರಾದಂತೆ. ಹಾಗೂಹೀಗೂ ಕಬ್ಬು ಬೆಳೆದಾಗ, ಸರ್ಕಾರದ ಸಪೋರ್ಟ್ ಇರುವ ರಾಜಕೀಯ ದಲ್ಲಾಳಿ ವ್ಯಾಪಾರಿಗಳು ಸರಿಯಾದ ರೇಟು ಕೊಡುವುದಿಲ್ಲ.

ಪ್ರತಿವರ್ಷ 70 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯುವ ಈ ಜಿಲ್ಲೆಯಲ್ಲಿ ಸಕ್ಕರೆ ಕಾರ್ಖಾನೆಗಳಿರುವುದು ಅಷ್ಟಕಷ್ಟೇ. ಆ ಕಾರಣಕ್ಕೆ ರೈತರು ಮಹಾರಾಷ್ಟ್ರದ ಸೋಲ್ಲಾಪುರ, ಸಾಂಗ್ಲಿ ಮತ್ತು ಪಕ್ಕದ ಜಿಲ್ಲೆ ಬಾಗಲಕೋಟೆಯ ಕಾರ್ಖಾನೆಗಳಿಗೆ ಸಾಗಿಸುತ್ತಾರೆ. ಆದರೆ ಬೆಲೆ ಮಾತ್ರ ನ್ಯಾಯಯುತವಾಗಿರುವುದಿಲ್ಲ. ಅವರ ಶ್ರಮಕ್ಕೆ ಬೆಲೆಯೇ ಇಲ್ಲ. ಏಕೆಂದರೆ ರಾಜ್ಯದ ಮತ್ತು ಪಕ್ಕದ ಮಹಾರಾಷ್ಟ್ರದ ಸಕ್ಕರೆ ಕಾರ್ಖಾನೆಗಳೆಲ್ಲ ರಾಜಕೀಯ ಪುಢಾರಿಗಳ ಹಿಡಿತದಲ್ಲಿವೆ.

● ಮಹಾಲಿಂಗಪ್ಪ ಆಲಬಾಳ

# ಜಾಗತೀಕರಣವ್ವೋ, ಜಾಗ'ತಿಕ'ರಣವ್ವೋ?

ಗೊತ್ತ[illegible] ಗೊತ್ತಾಗದಂತೆ ರೈತರ [illegible] ಈ ಜಾಗತೀಕರಣ. 2007 ರಲ್ಲಿ ದೇಶಿ ಮತ್ತು [illegible] ಬೆಲೆ ಕುಸಿತವಾಯ್ತು, ಇದು ಇಡೀ ಜಿಲ್ಲೆಯ ಕಬ್ಬು ಬೆಳೆಗಾರರನ್ನು, ಕಬ್ಬು ಕೃಷಿ ಮೇಲೆ ಅವಲಂಭಿತವಾದ ಕೃಷಿ ಕಾರ್ಮಿಕರನ್ನು ಅತಂತ್ರ ಸ್ಥಿತಿಗೆ ತಳ್ಳಿಬಿಟ್ಟಿತು. ಆ ಹೊತ್ತಲ್ಲೇ ಅಂದಿನ ಮಹಾರಾಷ್ಟ್ರದ ಸಿ.ಎಂ. ವಿಲಾಸರಾವ್ ದೇಶಮುಖ್ ತಮ್ಮ [illegible] ಬೆಳೆಗಾರರ ಹಿತದೃಷ್ಟಿಯ ಕಾರಣ ನೀಡಿ, ರಾಜ್ಯದ ಕಬ್ಬು ಮಹಾರಾಷ್ಟ್ರದ ಕಾರ್ಖಾನೆಗಳಿಗೆ ರವಾನೆಯಾಗದಂತೆ ಆದೇಶ ಹೊರಡಿಸಿಬಿಟ್ಟರು. ಆಗ ಇಲ್ಲಿನ ರಾಜಕಾರಣಿಗಳು [illegible] ವಿಷಯಗಳಲ್ಲಿ ಬಡಿದಾಡುತ್ತಾ ಕಾಲ ಹಾಕಿದರಷ್ಟೇ.

ಆಗ ಕಬ್ಬು ಬೆಳೆಗಾರರು ಪ್ರತಿಭಟನೆಗೆ ಇಳಿದಾಗ ಎಚ್ಚೆತ್ತುಕೊಂಡ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಮೂರು ತರಹದ ಪರಿಹಾರಗಳನ್ನು ಘೋಷಿಸಿದರು. ಅರೆಯದೇ ಉಳಿದ ಕಬ್ಬಿಗೆ ಹೆಕ್ಟೇರ್‌ವೊಂದಕ್ಕೆ 25 ಸಾವಿರ, 50 ಕಿ.ಮೀ.ಗಳಾಚೆ ಇರುವ ಕಾರ್ಖಾನೆಗಳಿಗೆ ಕಬ್ಬು ಸಾಗಿಸಿದರೆ ಪ್ರತಿ ಟನ್‌ಗೆ 2 ರೂಪಾಯಿ, ಸಕ್ಕರೆ ಅಂಶ ಕಡಿಮೆ ಇರುವ ಏಪ್ರಿಲ್-ಮೇ ತಿಂಗಳ ಕಬ್ಬು ಖರೀದಿಸುವ ಕಾರ್ಖಾನೆಗಳಿಗೆ 100 ರೂ.ಗಳ ಸಹಾಯಧನವನ್ನು ಕುಮಾರಸ್ವಾಮಿ ಘೋಷಿಸಿದರು. ಮುಂದೆ ಬಿಜಾಪುರದ ಕಬ್ಬು ಬೆಳೆಗಾರರಿಗೆಂದು 50 ಕೋಟಿ ಪರಿಹಾರ ಮೊತ್ತವನ್ನು ನಿಗದಿ ಮಾಡಲಾಯ್ತು, ಅದರಲ್ಲಿ 50 ಹಳ್ಳಿಗಳ ರೈತರಿಗೆ ಬರೀ 6 ಕೋಟಿ ವಿತರಿಸಲಾಯ್ತು. ಇಂಡಿ ತಾಲ್ಲೂಕಿನ 115 ಹಳ್ಳಿ, ಸಿಂದಗಿ ತಾಲ್ಲೂಕಿನ 110 ಹಳ್ಳಿಗಳ ಕಬ್ಬು ಬೆಳೆಗಾರರಿಗೆ ನಯಾಪೈಸೆಯ ಪರಿಹಾರವೂ ಸಿಗಲಿಲ್ಲ. ಮುಂದೆ ಕುಮಾರಸ್ವಾಮಿ ಸರ್ಕಾರ ಬಿದ್ದು ರಾಜ್ಯಪಾಲ ರಾಮೇಶ್ವರ ಠಾಕೂರ್‌ರ ಅಧಿಕಾರ ಬಂತು. ಈ ಮಹಾಶಯರು, ಫಲಾನುಭವಿಗಳಾದ 12 ಸಾವಿರ ರೈತರಲ್ಲಿ 9 ಸಾವಿರ ರೈತರನ್ನು ಅನರ್ಹಗೊಳಿಸಿ ಕೇವಲ 3 ಸಾವಿರ ಜನರಿಗೆ ಪರಿಹಾರ ನೀಡಿಬಿಟ್ಟರು!

ಮುಂದೆ ಚುನಾವಣೆ ದಿನಾಂಕ ಘೋಷಣೆಯಾಯ್ತು, ಆಗ ಎಚ್ಚರಗೊಂಡ ಯಡ್ಡಿ ರೈತರ ಸಭೆ ನಡೆಸಿ, ಪರಿಹಾರ ಕೊಟ್ಟೇ ಕೊಡ್ತೀವಿ ಅಂತ ಪ್ರಮಾಣ ಮಾಡಿದರು. ಮುಂದೆ ಅಧಿಕಾರ ಸಿಕ್ಕ ನಂತರ ಬಿಜಾಪುರದ ರೈತರನ್ನು ಮರೆತೇಬಿಟ್ಟರು. ವಚನಭ್ರಷ್ಟತೆ ಅಂದರೆ ಇದೇ ಅಲ್ಲವೇ?

ಕೃಷಿ ಕಾಲೇಜಿನ ನಿವೃತ್ತ ಪ್ರಾಚಾರ್ಯ ಎಸ್.ಎಂ. ಪಾಟೀಲ್ ನೇತೃತ್ವದಲ್ಲಿ ಪರಿಹಾರ ನೀಡಿಕೆ ಕುರಿತಾಗಿ ಸಮಿತಿ ರಚಿಸಲಾಯಿತು. 9500 ರೈತರ ಪೈಕಿ 300 ಅರ್ಜಿಗಳನ್ನು ರಿಜೆಕ್ಟ್ ಮಾಡಿದ ಈ ಸಮಿತಿ 9,200 ರೈತರಿಗೆ ಕೂಡಲೇ ಪರಿಹಾರ ನೀಡುವಂತೆ ಹೇಳಿತು. ಆದರೆ ಲೋಕಸಭಾ ಚುನಾವಣೆಯ ಗುಂಗಿನಲ್ಲಿದ್ದ ದುಡ್ಡಿಗೆ ಅದು ಮುಖ್ಯ ಅನಿಸಲೇ ಇಲ್ಲ. "ಈಗ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣೆ ಮುಗಿದನಂತರ ಎಲ್ಲ 31 ಕೋಟಿ ಪರಿಹಾರವನ್ನು ನೀಡುತ್ತೇವೆ" ಎಂದು ಬೊಗಳೆಬಿಟ್ಟ ಯಡ್ಡಿ ಇವತ್ತಿಗೂ ಆ ಕುರಿತು ಯೋಚನೆಯನ್ನೇ ಮಾಡಿಲ್ಲ!

ಬಿಜೆಪಿಗೆ ಓಟು ಕೊಟ್ಟ ಬಿಜಾಪುರದ ರೈತರು, ಅದರಲ್ಲೂ ಲಿಂಗಾಯತ ರೈತರು, ಈಗ ಪಶ್ಚಾತ್ತಾಪ ಅನುಭವಿಸುತ್ತಿದ್ದಾರೆ. ತಿಂಗಳಿಂದ ಅವರು ಬಿಜಾಪುರದ ಡಿ.ಸಿ. ಆಫೀಸ್ ಮುಂದೆ ಧರಣಿ ನಡೆಸುತ್ತಿದ್ದಾರೆ. ಇದೆಲ್ಲ ಗೊತ್ತೇ ಇಲ್ಲ ಎಂಬಂತೆ ಆಡುತ್ತಿರುವ ಸರ್ಕಾರ ಗ್ರಾಮೀಣ ಭಾಗಗಳಲ್ಲಿ ಕರೆಂಟೇ ಇಲ್ಲದಂತೆ ಮಾಡುತ್ತಿದೆ. ಗೊಬ್ಬರ-ಬೀಜಗಳ ಪೂರೈಕೆ ಮಾಡಲೂ ವಿಫಲವಾಗುತ್ತಿದೆ....

ರಾಜ್ಯದ ರೈತರು ಕೂಡಲೇ ಎಚ್ಚೆತ್ತುಕೊಂಡು ಬೀದಿಗಿಳಿಯಬೇಕಿದೆ. ಏಕೆಂದರೆ ಇದು ಅವರ ಅಸ್ತಿತ್ವದ ಪ್ರಶ್ನೆಯಷ್ಟೇ ಅಲ್ಲ; ಅವರ ಹಳ್ಳಿಯ ಅಸ್ತಿತ್ವದ ಪ್ರಶ್ನೆಯೂ ಹೌದು, ಅವರ ಕುಟುಂಬದ ಕುಡಿಗಳ ಭವಿಷ್ಯದ ಪ್ರಶ್ನೆಯೂ ಹೌದು. ■

# [illegible]ೂರು ಸಾವಿರ ಮಠದ ಪೀಠ ಹರಾಜಿಗಿಟ್ಟರು, ಹದಗೆಡಿಸಿಬಿಟ್ಟರು!

[illegible]ರುಸಾವಿರ ಮಠದ ಪೀಠವನ್ನು ಬಟಾಬಯಲಿಗೆ ತಂದಿಟ್ಟು, [illegible]ಗುತ್ತಿದ್ದಾರೆ ಗುರುಸಿದ್ದೇಶ್ವರ ಸ್ವಾಮಿ ಮತ್ತು ರುದ್ರಮುನಿಸ್ವಾಮಿ. [illegible]ದು, ಈ ಎರಡು 'ಪದಾರ್ಥ'ಗಳ ಹೆಸರನ್ನೆಲ್ಲೋ ಕೇಳಿದ್ದೀವಿ. [illegible]ಹೂಂ ಸ್ವಾಮಿ, ಅದೇ ಕೆಲವರ್ಷಗಳ ಹಿಂದೆ ಮೂರುಸಾವಿರ [illegible]ಪೀಠವನ್ನು ಕಬ್ಜಾ ಮಾಡಿಕೊಳ್ಳಲು [illegible] ನಡೆಸಿದ್ದವರು ಇವರೇ. ಆಗ ಇವರ [illegible]ಅಕ್ಷರಶಃ ಸ್ಟ್ರೀಟ್ ಫೈಟ್ ಮಾಡಿ [illegible] ಮಠದ ಅಂಗಳದಲ್ಲಿ ಭಯಂಕರ [illegible]ದ್ದರು. ಆದರೆ ಇವತ್ತು ಇವರಿಬ್ಬರಿಗೂ [illegible] ಬೇಡವಾಗಿದೆಯಂತೆ! ಅಂದರೆ [illegible] ರಾತ್ರೋರಾತ್ರಿ ವೈರಾಗ್ಯ [illegible]ಇಲ್ಲ; ಬದಲಿಗೆ ಪಕ್ಕಾ ವ್ಯಾಪಾರಸ್ಥರಾಗಿ [illegible]. ಕಿರೆಮರೆಯಲ್ಲಿ ಮಠದ ಪೀಠವನ್ನೇ [illegible], ಈಗ ಅದು ಜನರಿಗೆ ಗೊತ್ತಾಗಿ [illegible]ಳಾಗಿದ್ದಾರೆ.




[illegible], ಇವರ ಸೀಕ್ರೆಟ್ ಹರಾಜಿನಲ್ಲಿ [illegible] ಬಾಳೆ ಹೊಸೂರಿನ ದಿಂಗಾಲೇಶ್ವರ [illegible] ಶಿರಹಟ್ಟಿಯ ಫಕೀರ ಸಿದ್ಧರಾಮಸ್ವಾಮಿ. ಮಠದ ಆಸ್ತಿ ವ್ಯವಹಾರಗಳ ಮೇಲೆ ಕಣ್ಣಿಟ್ಟಿರುವ ಶ್ರೀಮಂತ ಲಿಂಗಾಯತ ವ್ಯಾಪಾರಿಯೊಬ್ಬ, ದಿಂಗಾಲೇಶ್ವರನ ಆಸೆ [illegible]ಸಲು ಮೂರು ಸಾವಿರ ಮಠದ ಗುರುಸಿದ್ದೇಶ್ವರ ಮತ್ತು ರುದ್ರಮುನಿಗಳ ತಲೆಗಳಿಗೆ 6 ಕೋಟಿ ಫಿಕ್ಸ್ ಮಾಡಿದನಂತೆ. ಈ ಮೊತ್ತ [illegible] ಸಿಂಗ್ ಧೋನಿ [illegible] ಸಮ! ಈ ವ್ಯವಹಾರ [illegible] ಫೈನಲೈಸ್ ಆಗುವ ಮೊದಲೇ [illegible] ಹರಾಜು. ಈ [illegible] ಅವರು [illegible] ಫಕೀರ ಸಿದ್ಧರಾಮಸ್ವಾಮಿ.



ಗದಗ ಜಿಲ್ಲೆಯ ಶಿರಹಟ್ಟಿಯ ಸಂಸ್ಥಾನಮಠದ ಪೀಠಾಧೀಶರಾಗಿರುವ ಫಕೀರಸ್ವಾಮಿಗಳು ತಾವೂ ಒಂದು ಕೈನೋಡೇ ಬಿಡುವಾ ಅಂತಾ ಮುನ್ನುಗ್ಗಿದರು. ಇಲ್ಲಿ ನೇರ ಗುರುಸಿದ್ಧ ಸ್ವಾಮಿಗಳ ಜೊತೆ 'ವ್ಯವಹಾರ' ಮಾತಾಡಿದ ಫಕೀರಸ್ವಾಮಿಗಳು ರುದ್ರಮುನಿ ಯನ್ನು ಖಾಲಿ ಮಾಡಿಸಿ, ತಾವು ಉತ್ತರಾಧಿಕಾರಿ ಯಾಗಲು ನೋಡಿದರು. ಆದರೆ ರುದ್ರಮುನಿ ಶಿಷ್ಯರು ಬಿಡಬೇಕಲ್ಲ? ಕಾರ್ಪೋರೇಟರ್ ಶಿವಾನಂದ ಮುತ್ತಣ್ಣವರ್, ಅಜ್ಜಪ್ಪ ಬೆಂಡಿಗೇರಿ, ಅಕ್ಕಿಕೊಂಡ-ಭೂಸಪೇಟೆಯ ಕೆಲ ವ್ಯಾಪಾರಸ್ಥರು ಜಗದೀಶ್ ಶೆಟ್ಟರ್ ಬಳಿ ಈ ನ್ಯಾಯಪಂಚಾಯತಿ ಒಯ್ದಿದ್ದಾರೆ. ಮೂರುಸಾವಿರ ಮಠದಲ್ಲಿ ಜಗಳಗಳು ನಡೆದಾಗಲೆಲ್ಲ ಶರಣ ಶೆಟ್ಟರ್ ಮಧ್ಯಸ್ಥಿಕೆ ವಹಿಸುತ್ತಾರೆ.

ಆಗಸ್ಟ್ 5ರಂದು ಮಠದಲ್ಲೊಂದು ಸಭೆ ನಡೆದು ಶೆಟ್ಟರ್, ಸಿ.ಎಂ.ಉದಾಸಿ, ಬಸವರಾಜ ಹೊರಟ್ಟಿ, ಗದುಗಿನ ಸಿದ್ದಲಿಂಗಸ್ವಾಮಿ, ವೀರಣ್ಣ ಮತ್ತಿಕಟ್ಟಿ, ಚಂದ್ರಕಾಂತ ಬೆಲ್ಲದ ಮುಂತಾದವರ ಸಮ್ಮುಖ ದಲ್ಲಿ 'ಭಕ್ತರು' ಒಕ್ಕೊರಲಿನಿಂದ ಹೇಳಿದ್ದು "ಈಗ ಹ್ಯಾಗಿದೆಯೋ ಹಾಗೇ ಮುಂದುವರೆಯಲಿ. ಈ ಪೀಠ ಏನೂ ಮಾರಾಟದ ಮೆಟೀರಿಯಲ್ ಅಲ್ಲ... ಇಲ್ಲಿಗೆ ದಿಂಗಾಲೇಶ್ವರನೂ ಬ್ಯಾಡ, ಫಕೀರಸ್ವಾಮಿಯೂ ಬ್ಯಾಡ....."



ಸದ್ಯಕ್ಕೆ ಮೂರುಸಾವಿರ ಮಠದ ಪೀಠ ಹರಾಜು ಆರು ತಿಂಗಳು ಪೋಸ್ಟ್‌ಪೋನ್ ಆಗಿದೆ. ಸಮಾಜಸೇವೆಯಲ್ಲಿ ತೊಡಗಬೇಕಾದ ಮಠ [illegible] ವ್ಯವಹಾರ ಅಂತಾ [illegible] ಲೋಭಗಳಿಗೆ ಸಿಲುಕಿಕೊಂಡಿದ್ದರ ಫಲವಿದು. ದಿವಂಗತ ಮೂಜಗಂ ಅವರು ಒಂದಿಷ್ಟು [illegible] ಇವತ್ತು ಇಂತಹ ಅಧ್ವಾನವಾಗುತ್ತಿರಲಿಲ್ಲ.

● ಹುಬ್ಬಳ್ಳಿಯಾಂವ

# ಸ್ವಾಮಿಗಳ ಕಿತ್ತಾಟವೂ, ಹೆಗ್ಗಣಗಳ ಮುಕ್ಕಾಟವೂ....



ಮೂಜಗಂ ಸ್ವಾಮಿಗಳೇ ರುದ್ರಮುನಿಸ್ವಾಮಿಯನ್ನು ಬೆಳೆಸಿದ್ದರು. ಆದರೆ ಕೊನೆಕೊನೆಗೆ ರುದ್ರಮುನಿ ಅಪಾಯಕಾರಿ ಎನಿಸಿದಾಗ ಹಾನಗಲ್ ಕುಮಾರಸ್ವಾಮಿ ಶಾಖಾಮಠದಿಂದ ಗುರುಸಿದ್ಧರನ್ನು ತಂದು ಉತ್ತರಾಧಿಕಾರಿ ಮಾಡಿದ್ದರು. ಆಗಲೂ ರುದ್ರಮುನಿ ಸೀನ್ ಕ್ರಿಯೇಟ್ ಮಾಡಿದ್ದ. ಕೊನೆಗೆ ಶಾಂತಿಸಂಧಾನದ ನಂತರ ರುದ್ರಮುನಿಗೆ ತಿಪಟೂರಿನ ಶಾಖಾಮಠದ ಲೀಡರ್‌ಶಿಪ್ ಸಿಕ್ಕಿತ್ತು. ಮೂಜಗಂ ತೀರಿಕೊಂಡ ತಕ್ಷಣವೇ ತಿಪಟೂರಿನಿಂದ ರಭಸದಲ್ಲೇ ಬಂದ ರುದ್ರಮುನಿ ತಾನೇ ಹೊಸ ಪೀಠಾಧಿಪತಿ ಎಂದು ಮತ್ತೆ ರಂಪ ಮಾಡಿದ. ಗುರುಸಿದ್ಧ ಸ್ವಾಮಿಯೂ ಕುರ್ಚಿಯನ್ನು ಬಲವಾಗಿ ತಬ್ಬಿದ್ದರಿಂದ ವಿವಾದ ಸುಪ್ರೀಂಕೋರ್ಟ್‌ನವರೆಗೂ ಹೋಗಿತ್ತು.

ಇತ್ತೀಚೆಗಷ್ಟೇ ತೀರ್ಪು ಕೊಟ್ಟ ಸುಪ್ರೀಂಕೋರ್ಟ್, ಮೂಜಗಂ ಇದ್ದಾಗಿನ ವ್ಯವಸ್ಥೆಯನ್ನೇ ಮುಂದುವರೆಸಿಕೊಂಡು ಹೋಗಿ ಎಂದಿತು. ಆ ನಂತರದ ಘಟನೆಗಳೇ ಈ 'ಹರಾಜು' ಪ್ರಕ್ರಿಯೆಗಳು.

ಮೊದಲಿನಿಂದಲೂ ಮೂರು ಸಾವಿರ ಮಠವು [illegible] ಹಲವು ವ್ಯಾಪಾರಿ ಸುಂಗಬಾಕರಿಗೆ ಕಲ್ಪವೃಕ್ಷವೇ ಆಗಿದೆ. ಇಂಥವರು ಸ್ವಾಮಿಗಳನ್ನು ಮುಂದಿಟ್ಟುಕೊಂಡು ಲಾಭ ಗಳಿಸುತ್ತ ಇದ್ದಾರೆ.

ಹುಬ್ಬಳ್ಳಿ ಹತ್ತಿರವ [illegible] ಗುರುಸಿದ್ಧ[illegible] 70 [illegible] ಮುಗಿದಿರುವ[illegible] ಬೇಗ [illegible] ಶಂಕ್ರಣ್ಣ ಮುನವಳ್ಳಿ ಸ್ವಾಮಿಗೆ ಗಂಟು ಬಿದ್ದಿದ್ದಾರೆ. ಇದಲ್ಲ ಅಗಳ [illegible] ಯೋಚಿಸಿರಬಹುದೇನೋ? ■




# ಹಿಂಸಾ ಪುರಾಣ

"ಒಂದ್ ಪೀಸ್ ಹಾಕ್ಲಾ?"

"ಉಹೂಂ..."

"ಒಂದೇ ಒಂದು?"

"ಬೇಡ ಅಂದ್ನಲ್ಲಾ."

"ಒಂದ್ ಪೀಸ್ ತಿಂದ್ರೆ ಏನಾಗತ್ತೆ?"

"ಏನೂ ಆಗಲ್ಲ; ಆದ್ರೆ ನಂಗೆ ಇಷ್ಟ ಇಲ್ಲ, ಅದ್ಕೇ ಬೇಡ."

"ಇಷ್ಟ ಯಾಕಿಲ್ಲ? ಅದ್ಕೆ ಕಾರ್ಣ ಇರ್ಬೇಕಲ್ಲ?"

"ಕಾರಣ ಇದೆ, ಆದ್ರೆ ನೀವೀಗ ಉಣ್ಣುವ ಹೊತ್ನಲ್ಲಿ ಹೇಳಕ್ ಆಗಲ್ಲ, ಮತ್ತೆ ಮಾತಾಡುವ."

"ಈ ಮಾತು ಬಹಳಷ್ಟು ಸಲ ಕೇಳಿದ್ವಿ. ಊಟ ಆದ್‌ಮೇಲೆ ಯಾವತ್ತೂ ನೀನು ಕಾರ್ಣ ಹೇಳೇ ಇಲ್ಲ."

"ನನ್ಗೇ ತಿರ್‍ಗಿಸ್‌ಬ್ಯಾಡ. ನೀವು ಯಾವತ್ತಾದ್ರೂ ಬೇರೆ ಹೊತ್ನಲ್ಲಿ ಕಾರ್ಣ ಕೇಳಿದ್ದೀರಾ? ಅಷ್ಟಕ್ಕೂ ನಾನು ತಿನ್ಲೇಬೇಕು ಅನ್ನೋ ಹಟ ಯಾಕೆ ನಿಮ್ಗೆ? ಅಡುಗೆ ಮಾಡಿಕೊಟ್ಟಿದ್ದೀನಲ್ಲ; 'ನಾನೂ ತಿನ್ನಲ್ಲ, ನೀವೂ ತಿನ್ಬೇಡಿ' ಅಂದಿದ್ರೆ ಹೀಗೆ ಹಟ ಮಾಡ್ಬಹುದಿತ್ತೇನೋ...."

"ಮಾಡಿಕೊಡ್ತೀಯಾ.... ಇಲ್ಲ ಅಂದ್ವಾ.... ನಾವು ತಿನ್ನೋದು ನೀನ್ ಮಾತ್ರ ನೋಡೋದು.... ಏನ್ ಚೆಂದ.... ನೀನೇನೂ ಯಾವತ್ತೂ ತಿಂದೇ ಇಲ್ಲ ಅಂತೇನೂ ಇಲ್ಲ. ಒಂದ್ ಪೀಸ್ ಹಾಕ್ಕೊಂಡ್ರೆ ನಿನ್ ಗಂಟ್ ಏನ್ ಹೋಗತ್ತೆ? ನೀನ್ ಹಿಂಗ್ ಮಾಡೂದಾದ್ರೆ ಇನ್ಮೇಲಿಂದ ನಾನ್‌ವೆಜ್‌ನ ಮನೆಗೆ ತರೋದೇ ಬೇಡ."

"ಏನ್ ಬೆದರಿಕೆ ಹಾಕ್ತಾ ಇದ್ದೀರಾ?"

"ಬೆದರಿಕೆ ಅಲ್ಲ, ನಿಜ ಹೇಳ್ತಾ ಇದ್ದೀವಿ. ಇನ್ಮೇಲಿಂದ ಮನೆಗೆ ತರಲ್ಲ."

"ನೋಡು ವಿನೂ... ನೀನು ಎಷ್ಟೋ ವೆಜಿಟೇರಿಯನ್ ನಮ್ಗಿಗೆ ನಾನ್‌ವೆಜ್ ತಿನ್ನಿಸಿದ್ದೀಯಾ.... ಅವ್ರೂ ತಿಂದಿದ್ದಾರೆ. ಆದ್ರೆ ನಂಗೆ ಬಲವಂತ ಮಾಡಿದ್ರೆ ನಾನ್ ಸುಮ್ನೆ ಇರಲ್ಲ.... ನಿಮ್ಗೆ ಮಾಡಿ ಕೊಡೂದಿಲ್ಲ ಅಂದಿದ್ರೂ ಹಿಂಗ್ ಹೇಳಿದ್ರೆ ನಡೀತಿತ್ತು... ಎಲ್ಲಾ ಬಿಟ್ಟು, 'ಹಂಗಾದ್ರೆ ಇನ್ನ ಮನೀಗೆ ತರಲ್ಲ' ಅಂತ ಬೆದರ್‍ಕೆ ಹಾಕೋದು ಮಾತ್ರ ಸರಿಯಿಲ್ಲ...."

ಕೊನೆಯ ಮಾತುಗಳನ್ನು ಹೇಳುವಾಗ ನಿಶಾಳ ಕಣ್ಣು ತುಂಬಿಬಂದಿತ್ತು.

ಸೋಲು ಒಪ್ಪಿಕೊಂಡ ವಿನೋದ, "ಹೋಗ್ಲಿ ಇವತ್ತು ಮಾತ್ರ ನಿನ್ನ ಈ ನಿರ್ಧಾರಕ್ಕೆ ಕಾರ್‍ಣ ಹೇಳ್ಲೇಬೇಕು. ಹಂಗಂದ್ರೇ ರಾಜಿ ಆಗೋದು" ಎಂದು ಮಾತು ಮುಗಿಸಿದ. ನಿಶಾ ಕೂಡಾ ಆಗಲೆಂಬಂತೆ ತಲೆಯಾಡಿಸಿದಳು. ಅದುವರೆಗೆ ಬಿಗುವಾಗಿದ್ದ ಊಟದ ಕೋಣೆಯ ವಾತಾವರಣ ಸಗೊಂಡು ಒಂದಿಷ್ಟು ನಗು, ಹರಟೆಗಳಿಗೆ ಎಡೆಕೊಟ್ಟಿತ್ತು.

ಊಟ ಮುಗಿಸಿ ಹೊರಬಂದ ನಿಶಾಳಿಗೆ, ಈ ಬಾರಿ ವಿನೂ ಮಾಂಸಾಹಾರದ ಕುರಿತ ತನ್ನ ನಿರಾಸಕ್ತಿಗೆ ಕಾರಣಗಳನ್ನು ಕೇಳದೆ ತಣಿಯುವುದಿಲ್ಲ ಎಂಬುದು ಖಚಿತವಾಗಿತ್ತು. ಹಾಗೆ ನೋಡಿದರೆ ಮಾಂಸಾಹಾರವನ್ನು ವರ್ಜಿಸಬೇಕು ಎಂಬ ಯಾವ ನಿರ್ಧಾರವನ್ನೂ ಆಕೆ ಮಾಡಿದವಳೇ ಅಲ್ಲ, ಅದೊಂದು ಆಹಾರದ ಅನಿವಾರ್ಯವಾದ ಭಾಗ ಎಂದು ಆಕೆಗೆ ಯಾವತ್ತೂ ಅನಿಸಿರಲಿಲ್ಲ, ಯಾವತ್ತೋ ತಿನ್ನಬೇಕು ಎನಿಸಿದ ದಿನ ಹೋಟೆಲಿನಲ್ಲೋ, ಸಮಾರಂಭದ ಸಂದರ್ಭದಲ್ಲೋ ಅವಳು ಮಾಂಸಾಹಾರವನ್ನು ತಿಂದದ್ದೂ ಇದೆ. ಆದರೂ ಮಾಂಸಾಹಾರದ ಕುರಿತ ಒಲವು ಅದೇಕೋ ಅವಳಿಗೆ ಮೂಡಲೇ ಇಲ್ಲ. ಇವತ್ತು ಕಾರಣವನ್ನು ಹೇಳಲೇಬೇಕು ಎಂಬ ಸ್ಥಿತಿ ಬಂದಾಗ, ಅವಳಿಗೆ ಎಲ್ಲಿಂದ ಆರಂಭಿಸುವುದು ಮತ್ತು ಏನನ್ನು ಹೇಳಬೇಕು ಎಂಬುದೇ ಗೊಂದಲಕ್ಕೆ ಇಟ್ಟುಕೊಂಡಿತು. ತನ್ನ ಕಾರಣಗಳು ಕೇಳುವವರಿಗೆ ಮನವರಿಕೆ ಆಗುವಂತೆ ಇರಬೇಕೋ ಎಂಬ ಹೊಸ ಪ್ರಶ್ನೆಯೊಂದು ಅವಳಲ್ಲಿ ಮೂಡಿತು. ವಿನೂಗೆ ತನ್ನ ಕಾರಣಗಳು ಬಾಲಿಶ ಎನಿಸಿದರೆ, ಅತಾರ್ಕಿಕ ಎನಿಸಿದರೆ, ಆತನ ವಿಚಾರಗಳನ್ನು ತನ್ನ ಮೇಲೆ ಹೇರಬಹುದು ಎಂಬ ಭಯವೂ ನಿಶಾಳನ್ನು ಆವರಿಸತೊಡಗಿದಾಗ, ತನ್ನ ಮನಸ್ಸನ್ನು ವಿನೂವಿನ ಮುಂದೆ ತೆರೆದಿಡುವುದು ಅಷ್ಟು ಸುಲಭವಲ್ಲ ಎಂದು ಅನಿಸತೊಡಗಿತು. ತಾನು ಹೇಳುವುದನ್ನು ಕೇಳುವ ಸಹನೆ ಅವನಲ್ಲಿ ಉಳಿಯದಿದ್ದರೂ ಕಷ್ಟವೇ. ತನ್ನ ಸಂವೇದನೆಗಳಿಗೆ ಅಲ್ಲಿ ಸರಿಯಾದ ಸ್ಪಂದನೆ ಸಿಗದಿದ್ದರೆ ತನಗೆ ದುಃಖವಲ್ಲದೆ ಇನ್ನೇನೂ ದೊರೆಯಲಾರದು ಎಂಬ ಅನಿಸಿಕೆ ಅವಳನ್ನು ಇನ್ನಿಷ್ಟು ಅಧೀರಳನ್ನಾಗಿಸತೊಡಗಿತು.

"ಹೂಂ....ಈಗ್ ಹೇಳು. ಅದೇನ್ ಹೇಳ್ತೀಯೋ ಹೇಳು. ಆದ್ರೆ ಒಂದ್ ಮಾತು...."

"ವಿನೂ....ವಿನೂ ಕಂಡೀಶನ್ ಹಾಕ್‌ಬೇಡ. ಸುಮ್ನೆ ನನ್ನ್ ಭಾವಲೋಕಕ್ಕೆ ಬರ್ತೀಯಾದ್ರೆ ಬಾ. ನಿನಗೆ ಇಷ್ಟ ಆಗ್‌ದಿದ್ರೆ ಸುಮ್ನೆ ಇದ್ದ್ ಬಿಡು. ನಿನ್ನ ವಿಚಾರಾನ ನನ್ನ್ ಮೇಲೆ ಹೇರೋಕ್ ಮಾತ್ರ ಬರ್ಬೇಡ...."

ವಿನೂನ ಹುಬ್ಬುಗಳು ಸಣ್ಣ ಗಂಟುಹಾಕಲು ಹೊರಟರೂ "ಆಯ್ತು...ಹೇಳು" ಎಂದ.

"ನಾವ್ ಚಿಕ್ಕವರಿದ್ದಾಗಿನ್ ಮಾತು. ಮನೇಲಿ ಕೋಳಿ ಸಾಕ್ತಿದ್ರು...ಮರೀನೂ ಮಾಡ್ತಿದ್ರು.... ಕೋಳಿಮೊಟ್ಟೆ ಒಡೆದು ಮರಿ ಹೊರಬರುವುದನ್ನು ಬೆರಗಾಗಿ ನೋಡ್ತಿದ್ದ ಕಾಲ.... ಅವ್ಕೆ ಸಣ್ಣ ರವೇನ ಹಾಕಿ ಅವು ತಿನ್ನುವ ಸಂಭ್ರಮವನ್ನು ನೋಡ್ತಿದ್ದ ಕಾಲ...."

"ಗೊತ್ತ್ ಬಿಡು, ಅದನ್ನ್ ನೀನ್ ಹಿಂದೆ ಎಷ್ಟೋ ಸಲ ಹೇಳಿದ್ದೀಯ. ಹಾಗೆ ಮನೇಲಿ ಸಾಕಿದ್ ಕೋಳೀನ ಆಹಾರಕ್ಕಾಗಿ ಉಪಯೋಗಿಸುತ್ತಿದ್ದಾಗ ನಿಮಗೆ ಆಗ್ತಿದ್ದ ಸಂಕಟ, ನೀವ್ ಅಳ್ತಿದ್ದದ್ದು, ಮಾಂಸಾಹಾರ ಬಿಟ್ಟದ್ದು.... ಹಾಗ್ ನೋಡಿದ್ರೆ ಹೆಚ್ಚಿನ್ ಮನೆಗಳಲ್ಲಿ ಒಂದ್ ಹಂತದಲ್ಲಿ ಮಕ್ಕಳು ಹಾದ್‌ಬಂದ ಸಂಕ್ರಮಣ ಸ್ಥಿತಿ ಅದು. ಈಗ್ಲೂ ಅದೇ ಮಾತು ಹೇಳ್‌ಬೇಡ. ಯಾಕಂದ್ರೆ ಅನಂತರ ಎಷ್ಟೋ ಸಲ ನೀನು ಮಾಂಸಾಹಾರ ಉಂಡದ್ದು ನಂಗ್ ಗೊತ್ತಿದೆ" ವಿನೂ ನಿಶಾಳ ಮಾತನ್ನು ಕಸಿದುಕೊಂಡು ಮುಂದುವರಿಸಿದ.

"ಅವ್ನೆಲ್ಲಾ ಹಿಂಸೆ ಅಂದ್ರೆ ಹ್ಯಾಗೆ? ರೈತರ, ಬಡವರ, ಮಾಂಸಾಹಾರಿಗಳ ಜೀವನಕ್ರಮನೇ ಹಾಗೆ. ಹೊರಗಿಂದ ದುಡ್ಡ್ ಕೊಟ್ಟು ಮಾಂಸ ತರೋಕೆ ಆಗಲ್ಲ ಅಂತ ಮನೇಲೆ ಕೋಳಿ, ಆಡು, ಕುರಿ ಸಾಕ್ತಾರೆ.... ಅದೆಲ್ಲಾ ಹಿಂಸೆ ಅಲ್ಲ, ಹಾಂಗ್ ಮಾತಾಡೋಕೆ ಹೋದ್ರೆ ನಾವು ಏನೂ ತಿನ್ನೋಕಾಗಲ್ಲ...."

"ವಿನೂ....ಈ ತರ್ಕ ನನಗೂ ಗೊತ್ತು; ಎಲ್ಲಾರ್ರೂ ಗೊತ್ತು...."

> ಹಿಂಸೆ ಮತ್ತು ಅಹಿಂಸೆಯ ಪರಿಕಲ್ಪನೆಗಳೇ ಅತ್ಯಂತ ಸಂಕೀರ್ಣ ಅಂತ ಅನ್ನಲ್ವಾ? ಸಸ್ಯಾಹಾರಿಗಳಿಗೆ ಮಾಂಸಾಹಾರದ ಹಿಂಸೆ. ಮಾಂಸಾಹಾರಿಗಳಲ್ಲೇ ಕೆಲವರಿಗೆ ಎರಡು ಕಾಲಿನವು ಮಾತ್ರ ಸಹ್ಯ; ನಾಲ್ಕು ಕಾಲಿನವು ವರ್ಜ್ಯ. ಕೆಲವರಿಗೆ ಆಡು, ಕುರಿ, ಹಂದಿ ಪರವಾಗಿಲ್ಲ, ದನದ ಮಾಂಸ ವರ್ಜ್ಯ. ಮತ್ತೆ ಕೆಲವರಿಗೆ ಕೊಂದು ತಿನ್ನುವುದು ಒಪ್ಪಿತ -ಸತ್ತದ್ದು ವರ್ಜ್ಯ. ಆದರೆ ಸತ್ತವನ್ನು ತಿನ್ನುವವರೂ, ತಿಂದು ಬದುಕಿದವರೂ ಇದ್ದಾರಲ್ಲ.

"ಎಲ್ಲಾರ್ಗೂ ಗೊತ್ತಿಲ್ಲ, ಗೊತ್ತಿದ್ದಿದ್ರೆ ಈಗ ನಡೀತಿರೋ ಹಿಂಸೆ ನಡೀತಿರ್ಲಿಲ್ಲ. ದನಾ ತಿಂತಾರೆ ಅಂತ ಮುಸ್ಲಿಮರನ್ನ, ಹಂದಿ ತಿನ್ತಾರೆ ಅಂತ ಕ್ರಿಶ್ಚಿಯನ್ನರನ್ನ ದೂಷಿಸ್ತಾ, ಅನ್ಯರನ್ನಾಗಿ ಮಾಡ್ತಾ, ಅವರ ಆಹಾರದ ಕ್ರಮಗಳನ್ನು ರಾಜಕೀಯಕ್ಕೆ ಬಳಸುವುದನ್ನು ಮಾಡ್ತಿರಲಿಲ್ಲ. ದನ, ಹಂದಿ ಇವು ಮುಸ್ಲಿಂ ಮತ್ತು ಕ್ರಿಶ್ಚಿಯನ್ನರ ಆಹಾರ ಮಾತ್ರವಲ್ಲ, ಹಿಂದೂಗಳಲ್ಲೇ ಅನೇಕರು ಇವನ್ನು ಆಹಾರವಾಗಿ ಸ್ವೀಕರಿಸಿದ್ದಾರೆ.... ಬಿಡು, ಮಾತು ಎಲ್ಲೆಲ್ಲೋ ಹೋಗತ್ತೆ. ನೀನ್ ಹೇಳೂದ್ ಏನ್ ಅದನ್ನ್ ಸಂಕ್ಷಿಪ್ತವಾಗಿ ಹೇಳು."

"ಸಂಕ್ಷಿಪ್ತವಾಗಿ ಹೇಳು ಅಂತ ಕಡ್ಡಾಯ ಮಾಡ್‌ಬೇಡ. ಹ್ಯಾಗೂ ಮಾತಿಗೆ ಕೂತಿದ್ದೀವಿ. ನನ್ನ ಹಳವಂಡಗಳನ್ನೆಲ್ಲಾ ಕೇಳಿಸಿಕೊಳ್ಳೋ ಸಹನೆ ಇಟ್ಕೋ" ಎಂದ ನಿಶಾ ಒಂದುಕ್ಷಣ ಮೌನವಹಿಸಿ, ದೀರ್ಘ ಉಸಿರನ್ನು ತೆಗೆದುಕೊಂಡಳು. ಈಗ ಅವಳಿಗೆ ತಾನು ಏನು ಹೇಳಬೇಕು ಎಂಬುದು

## ವಿಶೇಷ ಲೇಖನ

● ಡಾ.ಸಬಿಹಾ ಭೂಮೀಗೌಡ

ಇಷ್ಟಿಷ್ಟೇ ನಿಚ್ಚಳವಾಗತೊಡಗಿತು. ತಾನು ಯಾರನ್ನೋ ಒಪ್ಪಿಸಲೂ ಹೇಳುವುದಲ್ಲ; ತನ್ನ ಭಾವನೆಗಳನ್ನು ತೆರೆದಿಡಲು ಹೇಳುತ್ತಿರುವುದು ಎಂದು ತನ್ನಷ್ಟಕ್ಕೆ ಅಂದುಕೊಂಡು ವಿನೂನತ್ತ ನೋಡಿದಳು. ಅವನ ಸಹನೆ ಮುಗಿಯುವ ಮುಂಚಿತವಾಗಿ ತನ್ನ ಮಾತುಗಳನ್ನು ಹೇಳಿ ಮುಗಿಸಬೇಕು ಎಂಬ ನಿರ್ಧಾರಕ್ಕೂ ಬಂದಳು.

"ಹಿಂಸೆ ಮತ್ತು ಅಹಿಂಸೆಯ ಪರಿಕಲ್ಪನೆಗಳೇ ಅತ್ಯಂತ ಸಂಕೀರ್ಣ ಅಂತ ನಿಂಗೆ ಅನ್ನಲ್ವಾ? ಸಸ್ಯಾಹಾರಿಗಳಿಗೆ ಮಾಂಸಾಹಾರದ ಹಿಂಸೆ. ಮಾಂಸಾಹಾರಿಗಳಲ್ಲೇ ಕೆಲವರಿಗೆ ಎರಡು ಕಾಲಿನವು ಮಾತ್ರ ಸಹ್ಯ; ನಾಲ್ಕು ಕಾಲಿನವು ವರ್ಜ್ಯ. ಕೆಲವರಿಗೆ ಆಡು, ಕುರಿ, ಹಂದಿ ಪರವಾಗಿಲ್ಲ, ದನದ ಮಾಂಸ ವರ್ಜ್ಯ. ಮತ್ತೆ ಕೆಲವರಿಗೆ ಕೊಂದು ತಿನ್ನುವುದು ಒಪ್ಪಿತ ಸತ್ತದ್ದು ವರ್ಜ್ಯ. ಆದರೆ ಸತ್ತವನ್ನು ತಿನ್ನುವವರೂ, ತಿಂದು ಬದುಕಿದವರೂ ಇದ್ದಾರಲ್ಲ. ನನ್ನನ್ನು ಕಾಡ್ತಾ ಇರೋದು ಈ ವಿಚಾರಗಳಲ್ಲ, ಅವಕ್ಕಿಂತ ಭಿನ್ನ.... ನಮ್ಮ್ ಮನೇ ಪಕ್ಕದಲ್ಲಿ ತುಂಬ ಹಿಂದೆ ಒಬ್ರು ಶೆಟ್ರು ಇದ್ರು. ಅವರ್ ಮನೇಗೆ ನೆಂಟ್ರು ಬಂದಾಗ ಕೋಳಿ ಊಟ ರೆಡಿ ಆಗ್ಬೇಕಿತ್ತು, ಒಂದ್ ಸಲ ಹೀಗೇ ಅಡುಗೆಗಾಗಿ ಹುಂಜದ ಕತ್ತು ನುಲಿದುಬಿಟ್ಟಿದ್ರು, ಅವತ್ತು ಅದೇನು ಎಡವಟ್ಟು ಆಗಿತ್ತೋ ಗೊತ್ತಿಲ್ಲ, ಆ ಹುಂಜ ಜೀವ ಉಳಿಸಿಕೊಳ್ಳೋ ಆಸೇಲಿ ನುಲಿದ ತನ್ನ ಕತ್ತನ್ನೇ ಹೊತ್ತುಕೊಂಡು ಅವ್ರ ಮತ್ತು ನಮ್ಮ್ ಮನೇ ಸುತ್ತೆಲ್ಲಾ ಓಡಿ, ಹಿಡಿಯಲು ಬಂದವರನ್ನು ಅಟ್ಟಾಡಿಸಿಬಿಡ್ತು, ಅದ್ರ ವೇದನೆ, ಚಡಪಡಿಕೆ ಇಂದಿಗೂ ಕಣ್ಣಿಗ್ ಕಟ್ಟಿದ್ ಹಾಗಿದೆ. ಆವಾಗ ಒಂದೇ ಸಲಕ್ಕೆ ಅದ್ರ ಕತೆ ಮುಗಿಸುವ ಕ್ರಮವೇ ಸರಿ ಅನ್ನಿಸ್ತು, ಎಲ್ಲಾ ಕೌಲನಿಕವಾಗಿ ನೋಡಿದಾಗ ಅ ಇದು. ಕತ್ತ್ ಕೊಯ್ಯೋದು ಸರೀ ಅಂತ ಅ ಅದೇ ಆಶ್ಚರ್ಯ. ಇನ್ನ್ ಕೋಳ್ಯೊ ಮುಂಚೆ ಬಾಯಿಗ್ ನೀರ್‌ಹಾಕಿ, ಬಿಸ್ಮಿಲ್ಲಾ ಅಂದು ಮುಸ್ಲಿಮ್‌ರಿಗೆ ಸ್ವೀಕಾರಾರ್ಹ ಅಂತೆ. ಇನ್ನ ಕೊಯ್ಯೋದನ್ನ ನೋಡಿಲ್ಲ, ಆದ್ರೂ ಕೇಳೀನಿ. ಅದ್ರ ಗುಳಿಒಳಗ ಹಾಕಿ ನಾಕ್ ಮಂದಿ ಅಲ್ಲಾಡದ ಹಿಡ್ದು ಚೂಪಾದ ಕತ್ತಿಯಿಂದ ಕೊಯ್ತಾರಂತ. ಅದ ಕರುಣಾಜನಕ ಆಕ್ರಂದನ ಕೇಳಿ ಅದು ಏನು ಅ ಹಂದಿಕೊಂದಿರ್ಬೇಕು ಅಂದಿದ್ದೆಯಲ್ಲ, ಇನ್ನ ಕೋ ಇವನ್ನೆಲ್ಲ...ಬಿಡು ಬಿಡು.... ನೆನಪಿಸಿಕೊಂಡ್ರೆ ಮೈಮೇ ಕೂದ್ಲು ನಿಮಿರಿ ನಿಂತ್ಕೋತಾವ. ಇವೆಲ್ಲ ಒಂದು ಮನಸ್ಸಿಗೆ ಬಂದ್ರೂ ಸಾಕು....ಮಾಂಸಾಹಾರ ಉ ಆಗಲ್ಲ.... ನಮ್ಮ್ ಮನ್ಸು ಅನ್ನೂದೂ ಬಾಳ ಇರ್‍ತೈತಿ ನೋಡು. ಕೆಲವೊಮ್ಮೆ ಎಷ್ಟು ಸೂಕ್ಷ್ಮ ಇರು ಇನ್ನು ಕೆಲವೊಮ್ಮೆ ಅಷ್ಟೇ ಒರಟು ಜಡ್ಡು ಹಿಡಿ ಆಗಿರ್ತ, ನೀನು ಅಂಗ್ಡಿಯಿಂದ ಮಾಂಸದ ಪೀಸ್ ತ ಕೊಂದು ತಂದು, ತೊಳ್ದು ನನ್ಗ ಅಡ್ಗಿ ಮಾಡಾಕ ನನಗ ಹಿಂಸೆ ಅಂತ ಅನ್ಸಲ್ಲಾ, ಅಂಗ್ಡಿಯಿಂದ ತ ತಂದು ಅಡಿಗಿ ಮಾಡಿದಷ್ಟು ಸಲೀಸಾಗಿ ಮಾಡಿಬ ಅದ್ರ ಬದ್ಲು ಕೋಳಿ ಅಂಗ್ಡೀಗೆ ಫೋನ್ ಮಾಡಿ, ಹೊಂಟ್ರೆ 'ಈಗೊಂದ್ ಕೊಲೆಗೆ ನಾವ್ ನಿಮಿತ್ತ ಅನ್ನೋ ಭಾವ ಆವರಿಸಿಬಿಡತ್ತೆ, ಗೂಡಿನಾಗೆ ಕೋಳಿ ತನ್ನ ಕತ್ತನ್ನು ನೀಡಬೇಕಾಗುತ್ತೋ ಅಂತ ಶುರುವಾಗುತ್ತೆ. ಅಷ್ಟೇ ಅಲ್ಲ, ಗೂಡಿನಲ್ಲಿ ಒಂದೊಂದೇ ಜೊತೆಯ ಜೀವಿ ಇನ್ನಿಲ್ಲವಾ ಹೋದಂತೆ ಉಳಿದವುಗಳಿಗೆ ಏನು ಅನ್ನಿಸಬಹು ಒಂದು ವೇಳೆ ತನ್ನ ಜೊತೆಗಾರರ ಹತ್ಯೆಯನ್ನು ನೋಡುವಂಥ ಪರಿಸ್ಥಿತಿ ಅವುಗಳದ್ದಾದರೆ, ಅವು ಎಷ್ಟು ಹಿಂಸೆ ಆಗಬಹುದು? ಅವಕ್ಕೇನಾದರೂ ಬರುವಂತಿದ್ದರೆ, ಅವು ನಮ್ಮನ್ನು ಹೇಗೆ ಎದುರಿಸುತ್ತಿದ್ದ ಇದೇ ಥರಾ ಯೋಚನೆಗಳು ಒಂದುಕ್ಷಣದಲ್ಲಿ ಹೋಗಿಬಿಡುತ್ತವೆ. ಅಪರೂಪಕ್ಕೆ ನಾಟಿಕೋಳಿ ಅಂತ ನೀನೇನಾದ್ರೂ ತರ್‍ಸಿ, ಮನೇಲೇ ಕ್ಲೀನ್ ಸುಟ್ಟು, ಹೋಳ್ ಮಾಡಿ ಕೊಟ್ರೆ, ಅವತ್ತಂತೂ ದಿನ ಜೀವ ತಳಮಳ ಅಂತಿರತ್ತ; ಅಡಿಗೆ ಮಾಡೋ ಹಿಂಸೆ; ಉಣ್ಣೋ ಮಾತಂತೂ ದೂರ....

"ಈಗೀಗ ತೀರ ಜಡ್ಡ್ ಬದ್ದೈತಿ ನನ್ ಇಲ್ಲಂದ್ರ ಹಿಂದೆ ಎಲ್ಲಾ ಕೋಳೀದ್ ಒಂದೊ ತುಂಡು ಉಣ್ಣೂ ತಾಟ್ನಾಗ ಇದ್ದಾಗ, ಇದು ದೇಹದ್‌ಯಾವ್ ಭಾಗ ಅಂತ ಯೋಚಿಸೋದು, ತಿನ್ತಾ ಹೋದ್ರೆ ಇನ್ನ್ಯಾರೋ ರಾಕ್ಷಸರು ಮುಂದೊ ದಿನ ನನ್ನ್ ದೇಹದ ಒಂದೊಂದು ಭಾಗನ್ನೂ ಕಿತ್ತ್ ತಿನ್ತಾ ಇರ್‍ತಾರೇನೋ ಅನ್ನೋ ಚಿತ್ರ ಮೂಡಿಬ ಇಂಥಾವ್ನೆಲ್ಲಾ ಯಾರ್ ಜೋಡೀನೂ ಹೇಳೋ ಇರ್‍ತಿಲ್ಲಾ ಮತ್ತ! ಯಾಕಂದ್ರ ಹಿರೇರು ಸುಮ್ಮನ ಇದ್ರ 'ಹುಚ್ಚಾಟ.... ಹೋಗ್ ಹೋಗ್.... ಕಲ್ಪಿಸ್ಕೋಬ್ಯಾಡ' ಅಂತಿದ್ರು; ದುಮ್ಮಾನದಾಗಿದ್ರ 'ತ ಕೆಟ್ಟೈತೇನ್... ಮಾಡು ಕೆಲ್ಸಬಿಸ್ಸಿ ನೋಡ್ಕೋ' ಅನ್ ಶಾಲ್ಯಾಗ ಸ್ನೇಹಿತ್ರಿಗೆ ಹೇಳೂಣ ಅಂದ್ರ ಮಂದಿ ಸಸ್ಯಾಹಾರಿಗಳು ಆಗಿದ್ರು. ತತ್ತಿ ತಿನ್ನೋ ವೈಕ್ ಅನ್ನೋರತ್ರ ಇದ್ನ ಹೇಳಾಕ ಆದೀತ??

"ಇನ್ನ್ ನಿಮ್ಮ್ ಹತ್ರ ಹೇಳೂಣ ಅಂದ್ರ, ಪ್ರೀತೀಲೆ ತಿನ್ತಾ ಇರ್‍ತೀರಿ. ಹಂಗಿರೂವಾಗ ಈ ಮಾತಾಡಿ ನಿಮ್ಮ್ ಸುಖಾ ಕಳಿಯಾದ್ಯಾಕ? ಇವತ್ತ ಗೊತ್ತೈತಿ.... ಮಾಂಸಾಹಾರ ಆಹಾರದ ಒಂದು ಅದ್ರಾಗ ಹಿಂಸೆ-ಅಹಿಂಸೆ ಅನ್ನೋ ಪ್ರಶ್ನೆ ಬಹುಸಂಖ್ಯಾತ ಮಂದಿಯ ಆಹಾರದ ಬಗ್ಗೆ ಪೂರ್ವಾ ಹೊಂದಿದ ಹಾಂಗ ಅಂತ ಗೊತ್ತೈತಿ. ಈಗ ಆಗ್‌ಬ ರೋದು ಏನು ಹೇಳು. ಊಟ ನಮ್ಮಿಷ್ಟ ಪರರಿಷ್ಟ ಅಂತ ಗಾದಿ ಮಾತ ಐತಲ್ಲ, ನನ್ನದನ್ನ ನಿಮ್ಮದನ್ನ ನಾನು ಗೌರವಿಸಿದರ ಸಾಕಲ್ಲ, ಅದಕ್ಕ ಜು ಮಾಡಿ ಏನರ ಯಾರ್ದರ ಸುಖಾ ಐತಿ ಅಂತೀಯೇನ ಕಡೇ ಮಾತು ಅಂತ ಹೇಳ್‌ಬೇಕಂದ್ರ, ನೀನು ಇವ ನನ್ ಮಾತ್ನ ಕೇಳ್ದ್ಯಲ್ಲಾ ಅದು ದೊಡ್ಡ್‌ದು. ಅನ್ನಿಸಿದ್ದನ್ನ ಹೇಳೂ ಕೇಳೂ ವಾತಾವರಣ ಕ ಸುಖ-ಶಾಂತಿ ಇನ್ನ್ ಎದ್ರಾಗ ಸಿಗತ್ತ ಹೇಳಲ್ಲ, ಕೇಳೂದು ಅಂದ್ರ ನನ್ ಜೋಡಿ ಅದೀನಿ ಅಂತ ನನ್ ಭಾವನೇನ ಅರ್ಥ ಮಾಡ್ಕೊತಿದ್ದೀ ಅಂದ್ರಾಂ

ಜಡಿಮಳೆ ಹೊಯ್ದದಂತೆ ನಿಶಾ ಹೇಳಿ ಮುಗಿ ಇಬ್ಬರ ನಡುವೆ ಮೌನ ಆಕ್ರಮಿಸಿಕೊಂಡಿತು. ಆ ಮ ಇಬ್ಬರ ನಡುವಿನ ಭಾವತಂತಿಗಳನ್ನು ಒಗ್ಗೂಡಿಸುವ ಹೊರಡಿಸುವ ಕಾರ್ಯದಲ್ಲಿ ತೊಡಗಿದಂತಿತ್ತು. ನಿಶಾ ಕಣ್ಣೆತ್ತಿ ವಿನೂನತ್ತ ನೋಡಿದಳು. ಕುಡಿ ತುದಿಯನ್ನು ಕಡಿಯುವಂತೆ ಜಗ್ಗುತ್ತಾ ಕಣ್ಣಲ್ಲಿ ಅದ ಬಗೆಯ ಹೊಳಪು ಏರಿಸಿಕೊಳ್ಳುತ್ತ "ಮನಸ್ಸೇ ಸು ಮೂಲ" ಎಂದ ವಿನೂ. ಒಂದು ಬಗೆಯ ಬಿಡು ಸುಖ ಅನುಭವಿಸಿದಂತೆ, ನಿಶಾ ದೀರ್ಘವಾಗಿ ಬಿಟ್ಟಳು.

## ...ಎಸ್‌ಸಿ ಆನ್‌ಲೈನ್‌ನಲ್ಲೇ ಆಫ್!

...ೀಗ ಕೆಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಅಬಕಾರಿ ರಕ್ಷಕರು ಹುದ್ದೆಗಳಿಗಾಗಿ ...ನ್‌ನಲ್ಲೇ ಕಾಲ್ ಮಾಡಿದ್ದಾರೆ. ಇದು ಬಹುತೇಕ ಅಭ್ಯರ್ಥಿಗಳಿಗೆ ಗೊತ್ತೇ ಇಲ್ಲ, ನಾವು ಪರೀಕ್ಷಿಸಿದಂತೆ, ...ಗೆ ಈ ನೋಟಿಫಿಕೇಷನ್ ಯಾವ ಪತ್ರಿಕೆಗಳಲ್ಲೂ ಬಂದಿಲ್ಲ! ಅಂದರೆ ಈ ಕೆಪಿಎಸ್‌ಸಿ ಎಂಬುದು ...ನ್‌ನಲ್ಲೇ ಆಫ್ ಆಗಿಬಿಟ್ಟದೆಯಾ?

...ಣ್ಣ ರಕ್ಷಕರ ಹುದ್ದೆಗೆ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ. ಬಹುತೇಕ ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಿರುವುದೇ ...ಲ್ಲ. ಗೊತ್ತಾದವರಿಗೆ ಅದನ್ನು 'ಆನ್‌ಲೈನ್‌ನಲ್ಲೇ ತುಂಬುವುದು' ಎಂಬ ಭಾಷೆಯೇ ಅಪರಿಚಿತ.

...ರತದಲ್ಲಿ ಇಂಟರ್‌ನೆಟ್ ಬಳಸುವವರ ಸಂಖ್ಯೆ 4 ಕೋಟಿ 50 ಲಕ್ಷ. ಇವರಲ್ಲೂ ಶೇ.80ರಷ್ಟು ಜನರಿಗೆ ...ವುದು ಈಮೇಲ್ ಮತ್ತು ಬ್ರೌಸಿಂಗ್ ಅಷ್ಟೇ. ಇಂತಹ ಪರಿಸ್ಥಿತಿ ಇರುವಾಗ ಆನ್‌ಲೈನ್‌ನಲ್ಲಿ ಅರ್ಜಿ ...ವುದನ್ನು ಕಡ್ಡಾಯ ಮಾಡುತ್ತಾರೆಂದರೆ ಅದು ಮೂರ್ಖತನವಲ್ಲದೇ ಇನ್ನೇನು?

## ಗ್ರಾ.ಪಂ.ನೇಮಕಾತಿ: ಇಂಗ್ಲಿಷ್ ಕಡ್ಡಾಯವೇಕೆ?

ಗ್ರಾ... [illegible] ...ಗಡಿಪಡಿಸಿದ ... [illegible] ... ಅದನ್ನು ಕಡ್ಡಾಯಗೊಳಿಸಿದೆ. ಗ್ರಾ... [illegible] ... ಗ್ರಾಮೀಣ ಪ್ರದೇಶದಲ್ಲಿ ಜನಸಾಮಾನ್ಯರೊಂದಿಗೆ ಬೆರತು ... [illegible] ... ಇರಬೇಕೆಂದೇನೂ ಇಲ್ಲ. ಆದರೆ ... [illegible] ... ಗ್ರಾಮೀಣ ಪ್ರದೇಶದ ... ಶಾಲೆಗಳ ... [illegible]


...ಕೆಪ್ಟ್ ...ನೇಮಕಾತಿಯಲ್ಲಿ ಅನ್ಯಾಯ ಎಂದು ಹಗಲು-ರಾತ್ರಿ ... [illegible]

# ...ಪಿ.ಎಸ್.ಸಿ. ಆನ್‌ಲೈನ್ ಅರ್ಜಿ ...ದು ಯಾರಪ್ಪನ ಮರ್ಜಿ?



...ಮಯ್ಯಪ್ಪ ಆದ್ರಾಗ ಏನ್ ಬರೆದೈತಿ ಒಂದೀಟು ...ಳಪಾ'- ಹೀಗೆ ಅನಕ್ಷರಸ್ಥ ಗ್ರಾಮೀಣ ಮಹಿಳೆ ...ಮನೆಗೆ ಅಂಚೆ ಬಂದಾಗ ಪೋಸ್ಟ್‌ಮ್ಯಾನ್‌ಗೆ ...ಳ್ಳುತ್ತಾರೆ. ವಿಧವಾವೇತನ, ವೃದ್ಧಾಪ್ಯ ಮಾಸಾಶನ ...ವವರು ಸ್ಕೂಲ್ ಮಕ್ಕಳ ಹತ್ರ ಅರ್ಜಿ ...ಳ್ಳುತ್ತಾರೆ. ಇದು ಗ್ರಾಮೀಣ ಭಾರತದಲ್ಲಿ ...ಮಾನ್ಯ.....

...ಹ ಪರಿಸ್ಥಿತಿಯೀಗ ಕರ್ನಾಟಕದಲ್ಲಿ ಸರ್ಕಾರಿ ... ಬಯಸುವವರಿಗೆ ಬಂದೊದಗಿದೆ. ಡಿಗ್ರಿ ಓದಿದ, ...ಮಾಡಿದ ಶೇ. 90ರಷ್ಟು ಅಭ್ಯರ್ಥಿಗಳು ಇಂಟರ್ ...ಸಿಂಗ್ ಸೆಂಟರ್‌ಗಳಲ್ಲಿ ...ಪರೇಟರ್ ನೆರವಿನಿಂದ ...ಅರ್ಜಿ ತುಂಬಬೇಕಾ ...ಸ ಆಪರೇಟರನೇ ಅವರ ...ಪತ್ರ ಓದಿ ಹೇಳುವ' ...ನ!



...ದ ಸುಶಿಕ್ಷಿತ ಯುವ ...ನ್ನು ಇಂತಹ ...ದೂಡಿದ ಶ್ರೇಯಸ್ಸು ಲೋಕಸೇವಾ ...ಕ್ಕೆ (ಕೆಪಿಎಸ್‌ಸಿ) ಇದಕ್ಕೆ ಹೈಟೆಕ್ ಹುಚ್ಚುತನವೆನ್ನುವುದೋ, ಮತ್ತು ದಲಿತ ಯುವಕರಿಗೆ ...ಮುತ್ತಿರುವ ದ್ರೋಹ ಎನ್ನುವುದೋ?

... ಆನ್‌ಲೈನ್ ಅರ್ಜಿ ಸಲ್ಲಿಕೆಯಿಂದ ವೇಗ, ... ಪಾರದರ್ಶಕತೆ ಹೆಚ್ಚುತ್ತದೆ ಎಂದೇ ಇಟ್ಟು ... ನಮ್ಮ ಹುಡುಗಹುಡುಗಿಯರು ದೂರದ ...ದ ಜಿಲ್ಲಾ ಕೇಂದ್ರಕ್ಕೆ ಹೋಗಿ ಅಲ್ಲಿ ಬ್ರೌಸಿಂಗ್ ಸೆಂಟರ್ ಹುಡುಕಿ, ಆಪರೇಟರ್‌ನ ಸಹಾಯದಿಂದ ಆನ್‌ಲೈನ್ ಅಪ್ಲೈ ಮಾಡಲೂ ಸಿದ್ಧ. ಆದರೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಹೈಟೆಕ್ ಆಗಿರುವ ಬ್ರೌಸಿಂಗ್ ಸೆಂಟರ್‌ಗಳು ಉಂಟೇ? ಕೆಪಿಸಿಸಿ ಬಯಸುವ ಅಗತ್ಯಗಳನ್ನು ಒದಗಿಸುವ ಕಂಪ್ಯೂಟರ್ ಸಲಕರಣೆಗಳು ಅಲ್ಲಿವೆಯೇ?

ಬಹುತೇಕ ಜಿಲ್ಲಾ ಕೇಂದ್ರಗಳಲ್ಲಿ ಬ್ರೌಸಿಂಗ್ ಸೆಂಟರ್‌ಗಳು ಸಾಕಷ್ಟು ಇವೆಯಾದರೂ, ಅವುಗಳಲ್ಲಿ ಅರ್ಧದಷ್ಟು ಸೆಂಟರ್‌ಗಳಲ್ಲಿ ಸ್ಕ್ಯಾನರ್ ಇಲ್ಲ. ಸ್ಕ್ಯಾನರ್ ಇದ್ದರೂ ಕೆಪಿಎಸ್‌ಸಿ ಬಯಸುವಂತೆ ಸ್ಕ್ಯಾನ್ ಮಾಡುವುದು ಕಷ್ಟಕರ......

ಇಲ್ಲಿಯವರೆಗೆ ಜಿಲ್ಲಾವಾರು ಅರ್ಜಿಗಳನ್ನು ವಿತರಿಸಿ, ಭರ್ತಿ ಮಾಡಿದ ಅರ್ಜಿ ಮತ್ತು ಪಾವತಿಸಿದ ಶುಲ್ಕದ ಡಿಡಿಯನ್ನು ಅಂಚೆ ಮೂಲಕ ಕಳಿಸುವ ಅತೀ ಸರಳವಾದ ಪದ್ಧತಿ ಜಾರಿಯಲ್ಲಿತ್ತು. ಆದರೆ ಈಗ ಒಮ್ಮಿಂದೊಮ್ಮೆಲೆ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡು ಅಂದರೆ ಹೇಗೆ? ಡಿಗ್ರಿಯಲ್ಲಿ ಅಥವಾ ಬಿ.ಎಡ್.ನಲ್ಲಿ ಕಂಪ್ಯೂಟರ್ ಶಿಕ್ಷಣ ಪಡೆಯದೇ ಇರುವ ಈ ಅಭ್ಯರ್ಥಿಗಳಿಗೆ ಇದು ಅನ್ಯಾಯವಲ್ಲವೇ?

ಕೆಪಿಎಸ್‌ಸಿಯಿಂದ ಈ ಮೂರ್‍ನಾಲ್ಕು ತಿಂಗಳಲ್ಲಿ ಹಲವಾರು ಎ,ಬಿ,ಸಿ ಗ್ರೇಡ್ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ ಎಲ್ಲವೂ ಆನ್‌ಲೈನ್ ಅರ್ಜಿ ಸಲ್ಲಿಸುವುದನ್ನೇ ಕಡ್ಡಾಯ ಮಾಡಿವೆ. ಹಾಗೂಹೀಗೂ ದುಡ್ಡು ಹೊಂದಿಸಿಕೊಂಡು ತಾಲ್ಲೂಕು ಕೇಂದ್ರ ಅಥವಾ ಜಿಲ್ಲಾ ಕೇಂದ್ರಕ್ಕೆ ಹೋಗಬೇಕು. ಬ್ರೌಸಿಂಗ್ ಸೆಂಟರ್‌ನ ಕಂಪ್ಯೂಟರ್ ಆಪರೇಟರ್‌ಗೆ "ಇದೊಂದ್ ಫಾರ್ಮ್ ಫಿಲ್ ಅಪ್ ಮಾಡಿಕೊಡ್ರಿ" ಅಂತಾ ರಿಕ್ವೆಸ್ಟ್ ಮಾಡಿಕೊಳ್ಳಬೇಕು.

ಅರ್ಜಿಯೇನು ಒಂದು ಪುಟದ್ದಲ್ಲ, ಎರಡು ಪುಟದ್ದಲ್ಲ, ನಾಲ್ಕು ಪುಟಗಳದ್ದು. ಕಂಪ್ಯೂಟರ್ ಬಲ್ಲ ಸಾಮಾನ್ಯ ಆಪರೇಟರ್ ಮೊದಲ ಪುಟದಲ್ಲಿನ ಹೆಸರು ವಿದ್ಯಾರ್ಹತೆ ಇತ್ಯಾದಿ ವಿವರಗಳನ್ನು ಸಲೀಸಾಗಿ ಎಂಟ್ರಿ ಮಾಡುತ್ತಾನೆ/ಳೆ. ಆದರೆ ಎರಡನೇ ಪುಟಕ್ಕೆ ಬಂದಾಗ ಅಭ್ಯರ್ಥಿ ಇರಲಿ ಕಂಪ್ಯೂಟರ್ ಆಪರೇಟರೂ ತಬ್ಬಿಬ್ಬಾಗುತ್ತಾನೆ/ಳೆ. ಅಲ್ಲಿ ಅಭ್ಯರ್ಥಿಯ ಭಾವಚಿತ್ರವನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡಬೇಕು. ಸುಮ್ಮನೆ ಸ್ಕ್ಯಾನ್ ಮಾಡಿ ಫೋಟೋ ಹಾಕಿದರಾಗುವುದಿಲ್ಲ, ಅದು 45 ಮಿ.ಮೀ. ಉದ್ದ ಹಾಗೂ 35 ಮಿ.ಮೀ. ಅಗಲಕ್ಕೆ ಇರುವಂತೆ 'ಸೆಟ್' ಮಾಡಬೇಕು. ಅದರ ಕೆಳಗೆ 20 ಮಿ.ಮೀ. ಉದ್ದ ಮತ್ತು 35 ಮಿ.ಮೀ. ಅಗಲ ಇರುವ ಚೌಕಟ್ಟಿನಲ್ಲಿ ಸಹಿ ಬರುವಂತೆ ಮಾಡಬೇಕು. ಎರಡನ್ನೂ ಒಟ್ಟಿಗೆ ಸ್ಕ್ಯಾನ್ ಮಾಡಬೇಕು. ಅಂದರೆ ಫೋಟೋ, ಸಹಿ ಎರಡೂ ಸೇರಿ 65 ಮಿ.ಮೀ. ಉದ್ದವಾಗಬೇಕು. 1 ಮಿ.ಮೀ. ಹೆಚ್ಚು ಕಡಿಮೆಯಾದರೂ ಕಷ್ಟ! ಇಷ್ಟಕ್ಕೆ ಮುಗಿಯುವುದಿಲ್ಲ ಈ ರಾಮಾಯಣ. ಸ್ಕ್ಯಾನ್ ಮಾಡುವಾಗ 100 ಕೆ.ಬಿ. ರೆಸಲ್ಯೂಷನ್ ಇರಲೇಬೇಕು, ಇಮೇಜ್ ಸ್ಕೇಲ್ ಶೇ.100 ಇರಬೇಕು. ಡಿಪಿಐ ಸೆಟ್ಟಿಂಗ್ 100ಡಿಪಿಐ ಇರುವುದು ಅಗತ್ಯ. ಈ ಎಲ್ಲ ಅಗತ್ಯಗಳನ್ನು ಪೂರೈಸುವ ಸ್ಕ್ಯಾನರ್ ಜಿಲ್ಲಾ ಕೇಂದ್ರಗಳಲ್ಲಿ ಅಲ್ಲೊಂದು ಇಲ್ಲೊಂದು. ಹಾಗೆಯೇ ಮೇಲೆ ಹೇಳಿದ ತಾಂತ್ರಿಕ ವಿವರಗಳು ಬಹುತೇಕ ಬ್ರೌಸಿಂಗ್ ಸೆಂಟರ್‌ನವರಿಗೂ ಪಕ್ಕಾ ಗೊತ್ತಿರುವುದಿಲ್ಲ, ಉದ್ದನಾಗಿ ಸಹಿ ಮಾಡುವವರದ್ದಂತೂ ದೊಡ್ಡ ಫಜೀತಿ, ಬಹಳಷ್ಟು ಸಲ ಅರ್ಧಂಬರ್ಧ ಸಹಿಯೇ ಅಪ್‌ಲೋಡ್ ಆಗಿಬಿಡುತ್ತದೆ. ಕೊನೆಗೂ ಹರಸಾಹಸ ಮಾಡಿ ಸಾವಿರಾರು ಅಭ್ಯರ್ಥಿಗಳು ತುಂಬಿದ್ದಾರೆ, ತುಂಬುತ್ತಿದ್ದಾರೆ. ಈ ಅರ್ಜಿ ತುಂಬಲು ಇಡೀ ಒಂದು ದಿನ ಹಾಳು ಮಾಡಬೇಕು. ಈ ಪ್ರಕ್ರಿಯೆ ಮುಗಿಸುವುದರಲ್ಲೇ ಅಭ್ಯರ್ಥಿ ಸುಸ್ತಾಗಿ ಹೋಗುತ್ತಾನೆ. ಮಾನಸಿಕ ಕಿರಿಕಿರಿ ಅನುಭವಿಸುತ್ತಾನೆ. ಜೊತೆಗೆ ಬ್ರೌಸಿಂಗ್ ಸೆಂಟರ್‌ನವರು ಹೇಳಿದಷ್ಟು ಹಣ ನೀಡಬೇಕು.



ಮೊದಲೇ ತಾಲ್ಲೂಕು ಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಅಷ್ಟಕಷ್ಟೇ. ಅರ್ಜಿ ತುಂಬುವಾಗ ಸರ್ವರ್ ಶಟ್‌ಡೌನ್ ಆದರೆ, ಮತ್ತೆ ಮೊದಲಿನಿಂದ ಅರ್ಜಿ ತುಂಬಬೇಕು. ಕೆಪಿಸಿಸಿ ಹೇಳಿದ ಬ್ಯಾಂಕಲ್ಲೇ ಡಿಡಿ ತೆಗೆ ಅದರ ಸಂಖ್ಯೆಯನ್ನು ಅರ್ಜಿಯಲ್ಲಿ ನಮೂದಿಸಬೇಕು....

ಇಷ್ಟೆಲ್ಲಾ ರಗಳೆ ಇರುವುದನ್ನು ಕೇಳಿದ ಕೆಲವರು ಈ ಕೆಲಸವೇ ಬೇಡ ಎನ್ನುವ ಸ್ಥಿತಿಗೆ ಬಂದಿರಲೂಬಹುದು. ಆನ್‌ಲೈನ್‌ನಲ್ಲಿ ಅರ್ಜಿ ತುಂಬಲು ಅವಕಾಶವಿರಲಿ. ಆದರೆ ಅದನ್ನು ಕಡ್ಡಾಯ ಮಾಡುವುದು ಬೇಡ. ಏಕೆಂದರೆ ಆನ್‌ಲೈನ್ ಕಡ್ಡಾಯ ಗ್ರಾಮೀಣ ಅಭ್ಯರ್ಥಿಗಳಿಗೆ ಬಗೆಯುವ ಪರಮ ದ್ರೋಹವೇ ಸರಿ.

ಅಭ್ಯರ್ಥಿಗೆ ಮೊದಲಿನಂತೆ ಅರ್ಜಿ ತುಂಬಿ ಅಂಚೆಯಲ್ಲಿ ಕಳಿಸುವ ಸವಲತ್ತನ್ನು ಇನ್ನು ಮುಂದಾದರೂ ಮತ್ತೆ ಆರಂಭಿಸಬೇಕು.

ಹಾಗೆಯೇ ಸದ್ಯ ಗ್ರಾಮೀಣ ಬ್ಯಾಂಕುಗಳಲ್ಲಿ ಡಿಡಿ ತೆಗೆಸಲು ಅವಕಾಶ ಇಲ್ಲ, ಈ ಸೌಲಭ್ಯವನ್ನೂ ಒದಗಿಸಬೇಕು. ಜುಲೈ 13ರ 'ಪ್ರಜಾವಾಣಿ'ಯ ವಾಚಕರವಾಣಿಯಲ್ಲಿ ಗ್ರಾಮೀಣ ಅಭ್ಯರ್ಥಿಯೊಬ್ಬರು ವಿವರಿಸಿದ ಪ್ರಕಾರ, ವಾರ್ಡನ್ ಹುದ್ದೆಗೆ ಅರ್ಜಿ ತುಂಬಲು ಒಂದು ಸಾವಿರ ರೂಪಾಯಿಗೂ ಅಧಿಕ ಖರ್ಚು ಬರುತ್ತಿದೆ. ಬಡ ವಿದ್ಯಾರ್ಥಿಗಳಿಗೆ, ಅದರಲ್ಲೂ ಇಡೀ ರಾಜ್ಯವೇ ಬರದಲ್ಲಿ ಮುಳುಗಿರುವಾಗ, ಒಂದು ಸಾವಿರ ರೂಪಾಯಿ ಏನೂ ಸುಲಭವಾಗಿ ಸಿಗುವುದಿಲ್ಲ.

ಕೆಪಿಎಸ್‌ಸಿಯ ಮುಖ್ಯಸ್ಥ ಭೀಮಪ್ಪ ಗೋನಾಳ ಸಾಹೇಬರು ಆನ್‌ಲೈನ್ ಲೋಕದಿಂದ ಹೊರ ಬಂದು ವಾಸ್ತವವನ್ನು ಅರಿತುಕೊಳ್ಳಲಿ.

ಪೇಪರ್‌ಲೆಸ್ ಆಫೀಸ್ ಮಾಡುವ ಹುಚ್ಚು ಧಾವಂತದಲ್ಲಿ 'ಪೀಪಲ್‌ಲೆಸ್' ವ್ಯವಸ್ಥೆಯನ್ನು ಅಂದರೆ ಜನರಿಗೆ ಕಿಮ್ಮತ್ತೇ ಇಲ್ಲದಂತಹ ಪರಿಸ್ಥಿತಿಯನ್ನು ಸೃಷ್ಟಿಸುತ್ತಿರುವ ಈ ಆನ್‌ಲೈನ್ ಅರ್ಜಿ ಎಂಬ ಗಗನಕುಸುಮ ಸದ್ಯಕ್ಕೆ ನಮಗೆ ಬೇಕೆ? ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆಯೇಕೆ...

● ಪಿ.ಕೆ.ಮಲ್ಲನಗೌಡರ್

## ಈ ಭಾಷೆ ಅರ್ಥವಾಗುತ್ತದೆಯೇ?

ಇದು ಕೆಪಿಎಸ್‌ಸಿ ವೆಬ್‌ಸೈಟ್‌ನಲ್ಲಿ ಅಭ್ಯರ್ಥಿಗಳಿಗೆ ನೀಡಿದ ಮಾಹಿತಿ. ಈ 'ಭಾಷೆ' ಎಷ್ಟು ಅಭ್ಯರ್ಥಿಗಳಿಗೆ ಅರ್ಥವಾಗುತ್ತದೆ? ಕೆಪಿಸಿಸಿ ಕಾರ್ಯದರ್ಶಿ ವಿ.ಬಿ. ಪಾಟೀಲರಿಗಾದರೂ ಅರ್ಥವಾಗುತ್ತಾ.... ನೀವೂ ಒಮ್ಮೆ ಓದಿ ನೋಡಿ ಈ ತಾಂತ್ರಿಕ ಪದಗುಚ್ಛಗಳ ಟಿಪ್ಪಣಿಗಳನ್ನು.....

ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ವಿಧಾನ: ಅಭ್ಯರ್ಥಿಯು ಆಯೋಗದ ಅಧಿಕೃತ ವೆಬ್‌ಸೈಟ್ "http://kpsc.kar.nic.in" ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಬಲಭಾಗದಲ್ಲಿ "On-line Application" ಎಂಬುದು "Blink" ಆಗುತ್ತಲಿದ್ದು, ಅದರ ಮೇಲೆ ಕ್ಲಿಕ್ ಮಾಡಿದ ಕೂಡಲೇ "Select Notification"ಎಂಬುದು ಮೂಡುತ್ತದೆ. ಅದರಲ್ಲಿ ಅಧಿಸೂಚನೆ ಮತ್ತು ಹುದ್ದೆಗಳ ವಿವರಗಳು ಲಭ್ಯವಾಗಲಿದ್ದು ನಂತರ, ಅಧಿಸೂಚನೆಯ ಮೇಲೆ ಕ್ಲಿಕ್ ಮಾಡಿದ ಕೂಡಲೇ "Apply on-lIne" ಪರದೆಯ ಮೇಲೆ ಮೂಡುತ್ತದೆ..... ಅಭ್ಯರ್ಥಿಯು ಇತ್ತೀಚಿಗಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್/ಮಾರ್ಕರ್ ಪೆನ್‌ನಲ್ಲಿ ಸಹಿಯನ್ನು ಮಾಡಿ ಇದನ್ನು ಸ್ಕ್ಯಾನ್ ಮಾಡಿ ಅರ್ಜಿಗೆ "Upload" ಮಾಡಬೇಕು..... ಈ ಕಂಪ್ಯೂಟರ್ ಭಾಷೆ ಎಷ್ಟು ಅಭ್ಯರ್ಥಿಗಳಿಗೆ ಅರ್ಥವಾದೀತು? ●

# ತಾರಿಣಿ ಶುಭದಾಯಿನಿ

**ತಾರಿಣಿ ಕಾವ್ಯಕ್ಕೆ ತನ್ನ ಮಿತಿಯ ಅರಿವಿದೆ. ವಿನಯವಿದೆ. ಆದರೆ ಈ ವಿನಯದ ಮಂದ್ರಸ್ತರದಲ್ಲಿ ಇದ್ದುಕೊಂಡೇ ಸುಪ್ತವಾದ ಆತ್ಮವಿಶ್ವಾಸವನ್ನೂ ಅಗಾಧವಾದ ಚೈತನ್ಯವನ್ನೂ ಬೆರಗುಗೊಳಿಸುವಂತೆ ಪ್ರಕಟಿಸುವ ಗುಣವೂ ಅವರ ಕಾವ್ಯಕ್ಕಿದೆ.**

ಕಳೆದ ಒಂದು ದಶಕದಿಂದ ಕಾವ್ಯ ಮತ್ತು ವಿಮರ್ಶೆಯ ಕ್ಷೇತ್ರದಲ್ಲಿ ತಾರಿಣಿ ಶುಭದಾಯಿನಿ ಅವರು ಕೆಲಸ ಮಾಡುತ್ತಿದ್ದಾರೆ. ಅವರು ಈತನಕ 'ತೋಡಿರಾಗ' ಹಾಗೂ 'ಚಿತ್ತಗ್ಲಾನಿಯ ಮಾತು' ಕವನ ಸಂಕಲನಗಳನ್ನೂ 'ಹೆಡೆಯಂತಾಡುವ ಸೊಡರು' ಎಂಬ ವಿಮರ್ಶಾ ಸಂಕಲನವನ್ನೂ ಪ್ರಕಟಿಸಿದ್ದಾರೆ. ಭಾವಪ್ರಧಾನವೂ ಸಂಶ್ಲೇಷಣ ಪ್ರಧಾನವೂ ಆದ ಕಾವ್ಯ ಹಾಗೂ ತಾರ್ಕಿಕವೂ ವೈಚಾರಿಕವೂ ವಿಶ್ಲೇಷಣ ಪ್ರಧಾನವೂ ಆದ ವಿಮರ್ಶೆ-ಹೀಗೆ ಎರಡರಲ್ಲೂ ಅವರು ತಮ್ಮನ್ನು ಏಕಕಾಲದಲ್ಲಿ ತೊಡಗಿಸಿಕೊಂಡಿದ್ದಾರೆ. ಕಾವ್ಯಕ್ಕೆ ಹೋಲಿಸಿದರೆ, ಅವರು ವಿಮರ್ಶಕಿಯಾಗಿಯೇ ತಮ್ಮ ಶಕ್ತಿಯನ್ನು ಹೆಚ್ಚು ಪ್ರಕಟಿಸುತ್ತಿದ್ದಾರೆ ಎಂದು ಅನಿಸುತ್ತದೆ. ಈ ಹೊತ್ತಿನ ವಿಮರ್ಶೆ ಪ್ರಕಾರ ಎದುರಿಸುತ್ತಿರುವ ಕ್ರೈಸಿಸ್ಸೂ ಹೀಗೆ ಅನಿಸಲು ಕಾರಣವಿದ್ದೀತು.

ತಾರಿಣಿ ಕಾವ್ಯದ ವಿಶೇಷತೆಯೆಂದರೆ, ಬಹಳ ಸೂಕ್ಷ್ಮವಾಗಿ ಮೆಲುದನಿಯಲ್ಲಿ ಮಾತನಾಡುವುದು. ಲೋಕದ ಅನಾಮಿಕ 'ಅಮುಖ್ಯ' ಎನಿಸಿರುವ ಚಿತ್ರಗಳ ಮೂಲಕ ಬಾಳಿನ ಪರಿಯನ್ನೂ ಮನುಷ್ಯರ ಸ್ವಭಾವವನ್ನೂ ಕಟ್ಟಿಕೊಡುವುದು. ಅಕ್ಕಸಾಲಿಗರ ಬೀದಿಯ ಧೂಳನ್ನು ಬಾಚಿಕೊಂಡು ಅದರಲ್ಲಿ ಚಿನ್ನದ ರೇಕನ್ನು ಹುಡುಕುವವರ ರೂಪಕದಲ್ಲಿ ತಮ್ಮ ಕಾವ್ಯದ ಕಸುಬನ್ನು ಅವರು ಚಿತ್ರಿಸಿಕೊಳ್ಳುವುದನ್ನು ಗಮನಿಸಬೇಕು. ತಾರಿಣಿ ಕಾವ್ಯಕ್ಕೆ ತನ್ನ ಮಿತಿಯ ಅರಿವಿದೆ. ವಿನಯವಿದೆ. ಆದರೆ ಈ ವಿನಯದ ಮಂದ್ರಸ್ತರದಲ್ಲಿ ಇದ್ದುಕೊಂಡೇ ಸುಪ್ತವಾದ ಆತ್ಮವಿಶ್ವಾಸವನ್ನೂ ಅಗಾಧವಾದ ಚೈತನ್ಯವನ್ನೂ ಬೆರಗುಗೊಳಿಸುವಂತೆ ಪ್ರಕಟಿಸುವ ಗುಣವೂ ಅವರ ಕಾವ್ಯಕ್ಕಿದೆ. ಹಾಗೆ ಕಂಡರೆ, ಅವರ ಕಾವ್ಯದಲ್ಲಿ ಕಟಕಿ ವ್ಯಂಗ್ಯ ಕಡಿಮೆ. ತಾನು ಎಲ್ಲವನ್ನೂ ಬಲ್ಲೆ ಎಂಬ ಖಚಿತ ಭಾವವಿರುವ ಕಡೆ, ಕೊಂಚ ವಿಡಂಬನೆ ಮಾಡುವ ಕಡೆ, ಅವರ ಒಳ್ಳೆಯ ಕಾವ್ಯ ಬಂದಿಲ್ಲ. ಬದಲಿಗೆ ನೋಯುವ ತಳಮಳಗೊಳ್ಳುವ ದಿಕ್ಕುತೋಚದ ಅವಸ್ಥೆಯಲ್ಲಿ ಕಂಗಾಲಾದಂತೆ ಬರೆಯುವಾಗ ಅವರ ಅತ್ಯುತ್ತಮ ಕಾವ್ಯ ಸೃಷ್ಟಿಯಾಗಿದೆ. ಅವರ ಸಂಕಲನದ ಹೆಸರುಗಳೂ ಈ ದೃಷ್ಟಿಯಿಂದ ಮಾರ್ಮಿಕ. ಹೆಣ್ಣನ್ನು ಆವರಿಸಿರುವ ಅಮೂರ್ತವಾದ ಬಂಧನ ಹಾಗೂ ಆ ಸನ್ನಿವೇಶದೊಳಗಿದ್ದೇ ತನ್ನ ಇರುವಿಕೆಯನ್ನು ಸಾಬೀತುಪಡಿಸಲು ಆಕೆ ಮಾಡುವ ಸೆಣಸಾಟ-ಇವನ್ನು ಅಭಿವ್ಯಕ್ತಿಸಲು ಅವರ ಕಾವ್ಯವು ಹೊಸ ಭಾಷೆಯನ್ನು ಹುಡುಕುತ್ತಿರುವಂತೆ ತೋರುತ್ತದೆ. ಆದರೆ ದೊಡ್ಡ ಕ್ಯಾನವಾಸಿಟ್ಟುಕೊಂಡು ಹುಟ್ಟುವ ಅವರ ಉದ್ದನೆಯ ಕವನಗಳು ಅಳ್ಳಕವಾಗುತ್ತವೆ. ಪುಟ್ಟಕಕ್ಷೆಯಲ್ಲಿ ಹಿಡಿಯುವ ಕವನಗಳು ಹೆಚ್ಚು ಶಕ್ತಿ ಪಡೆದಿವೆ.



ಕಾವ್ಯದ ಅಂತರ್ಮುಖತನಕ್ಕೆ ಹೋಲಿಸಿದರೆ ವಿಮರ್ಶೆಯಲ್ಲಿ ತಾರಿಣಿ ಹೆಚ್ಚು ಓಟ್‌ಸ್ಪೋಕನ್ ಆಗುತ್ತಾರೆ. ಇದು ವಿಮರ್ಶೆಯ ಪ್ರಕಾರದಲ್ಲೇ ಇರುವ ಒತ್ತಾಸೆ ಕೂಡ. ಇದರಿಂದ ಅವರಿಗೆ ಲೇಖಕರ ಲೋಕದೃಷ್ಟಿಯ ಮೇಲೆ, ಮೌಲ್ಯದ ನೆಲೆಯಿಂದ ಪ್ರಶ್ನೆಯನ್ನು ದಿಟ್ಟತನದಲ್ಲಿ ಎತ್ತುವುದೂ ಸಾಧ್ಯವಾಗಿದೆ. ಸಾಹಿತ್ಯದ ಬಗ್ಗೆ ಸೂಕ್ಷ್ಮವಾದ ಓದನ್ನುಳ್ಳ ತಾರಿಣಿಯವರದು ವಿವರಣಶೀಲ ಹಾದಿಗಿಂತ, ಪ್ರಶ್ನೆಗಳನ್ನು ಎತ್ತಿ ಕೃತಿಯನ್ನು ಮುಖಾಮುಖಿಯಾಗುವ ಹಾದಿ ಎನ್ನಬಹುದು. ಕನ್ನಡದ ಕೆಲವು ಕವಿಗಳಲ್ಲಿ ಕಾಣುತ್ತಿರುವ ರಮ್ಯತೆಯ ಸಮಸ್ಯೆಯೇನು? ಎಸ್.ಜಿ.ಸಿದ್ಧರಾಮಯ್ಯ ಅವರಂತಹ ಕವಿಗಳು ಮಂಡಿಸುತ್ತಿರುವ ದೇಶಿ ಪರಿಕಲ್ಪನೆ ಒಂದು ಸ್ವಯಂಪೂರ್ಣವಾಗಲು ಸಾಧ್ಯವೇ? ಮಹೇಂದ್ರ ಅವರ ಬರೆಹದಲ್ಲಿ ಯಾಕೆ ನಮ್ಮ ಸಮಾಜದ ವಿಷಮತೆ ವೈರುಧ್ಯಗಳ ಚಿತ್ರ ಕಡಿಮೆ? ಭೈರಪ್ಪನವರಿಗೆ ಯಾಕೆ ಹಿಂದುತ್ವದ ಸಿದ್ಧಾಂತವನ್ನು ಮಂಡಿಸಬೇಕೆನಿಸುತ್ತಿದೆ-ಇತ್ಯಾದಿ ಅನೇಕ ಪ್ರಶ್ನೆಗಳನ್ನು ಅವರು ಎತ್ತುತ್ತಾರೆ. ಜಿಎಸ್‌ಎಸ್, ಪ್ರತಿಭಾ ನಂದಕುಮಾರ್, ಪೂರ್ಣಚಂದ್ರ ತೇಜಸ್ವಿಯವರ ಬರೆಹದ ಬಗ್ಗೆ ಕೂಡ ಬೇಕಾದಷ್ಟು ಕ್ರಿಟಿಕಲ್ ಆದ ಸಾಲುಗಳಿವೆ. ಕನ್ನಡ ವಿಮರ್ಶೆಯಲ್ಲಿ ವಿಮರ್ಶಾತ್ಮಕ ನಿಷ್ಠುರತೆಯ ಮೊನಚು ಕಳೆದುಹೋಗುತ್ತಾ, ಒಂದು ಬಗೆಯಲ್ಲಿ ಎಲ್ಲವನ್ನೂ ಪ್ರಶಂಸೆ ಮಾಡುವ ಉದಾರವಾದಿಯ ಹೊಂದಾಣಿಕೆಯ ಸ್ವಭಾವದ ಮಾದರಿಗಳಿವೆ. ಇನ್ನೊಂದು, ಕಾಣುವ ವಿಮರ್ಶಾತ್ಮಕ ಮೊನಚು ತಾನೇ ಸರಿತನದ ಸರ್ವಾಧಿಕಾರಿ ದನಿಯಾಗುವ ಮಾದರಿಗಳೂ ಇವೆ. ಇಂತಹ ಹೊತ್ತಲ್ಲಿ ತಾರಿಣಿ ಅವರ ವಿಮರ್ಶೆಯಲ್ಲಿರುವ ಸಮತೋಲನ ಮತ್ತು ವಿವೇಕಗಳು ಮಹತ್ವದ ಸಂಗತಿಗಳಾಗಿವೆ. ಅವರು ಗಾಂಭೀರ್ಯದ ಭಾರವಿಲ್ಲದೆ ಸರಳವಾಗಿ ಸಹಜವಾಗಿ ಒಳನೋಟಗಳನ್ನು ಚೆಲ್ಲುವ ಪರಿ ಹಿಡಿಸುವಂತಿದೆ.


ತಾರಿಣಿ ಪತ್ರಿಕೆಗಳಲ್ಲಿ ಕೆಲವು ಕಾಲ ಪುಸ್ತಕ ವಿಮರ್ಶೆ ಬರೆಯುತ್ತಿದ್ದರು. ಪರಿಚಯಾತ್ಮಕತೆ ಮುಖ್ಯವಾಗಿರುವ ಈ ಬರೆಹದಲ್ಲೂ ಅವರು ಪ್ರಶ್ನೆಗಳನ್ನು ಎತ್ತುತ್ತಿದ್ದರು. ಆಳಕ್ಕೆ ಹೋಗಲು, ತಾತ್ವೀಕರಣ ಹಂತಕ್ಕೆ ಚಲಿಸಲು ಹೆಚ್ಚು ಅವಕಾಶವಿಲ್ಲದ ಜಾಗವಿದು. ಆದರೆ ಪುಸ್ತಕ ವಿಮರ್ಶೆಯಲ್ಲಿ ಆಗದ ಕೆಲಸವನ್ನು ತಮ್ಮ ವಿಮರ್ಶನ ಬರೆಹಗಳಲ್ಲಿ ಅವರು ಚೆನ್ನಾಗಿ ಮಾಡಿದ್ದಾರೆ. ಆದರೂ ಹೊಸಕಾಲದ ವಿಮರ್ಶಕರ ನಿಜವಾದ ಸತ್ವಪರೀಕ್ಷೆ ಕಾರಂತ ಮಾಸ್ತಿ ಕುವೆಂಪು ಬೇಂದ್ರೆ ಮುಂತಾದ ಗ್ರೇಟ್‌ಮಾಸ್ಟರ್ಸ್‌ಗಳನ್ನು ಮುಖಾಮುಖಿಯಾದಾಗಲೇ ಆಗುವುದು. ಸದ್ಯಕ್ಕೆ ತಾರಿಣಿ ವಿಮರ್ಶೆಯಲ್ಲಿ ಈ ಮುಖಾಮುಖಿ ಸಾಧ್ಯವಾಗಿಲ್ಲ, ಆದರೆ ಅದಕ್ಕೆ ಬೇಕಾದ ಸಿದ್ಧತೆ ಮಾತ್ರ ಅವರಲ್ಲಿ ಪ್ರಕಟವಾಗಿದೆ.


ಚಿತ್ರದುರ್ಗದ ಸರ್ಕಾರಿ ಪದವಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿರುವ ತಾರಿಣಿ, ಅಪಾರವಾದ ಓದನ್ನು ಮಾಡಿದ್ದಾರೆ. ನಮ್ಮ ವಿವಿಗಳಲ್ಲಿ ಈಚೆಗೆ ಬಂದೆರಗಿದಂತಿರುವ ವಿದ್ವತ್‌ಹೀನ ವಾತಾವರಣಕ್ಕೆ ಹೋಲಿಸಿದರೆ, ತಾರಿಣಿಯವರಂತಹ ವಿದ್ವತ್ ಪರಂಪರೆಯ ಅಧ್ಯಾಪಕರು, ಪದವಿ ಕಾಲೇಜುಗಳಲ್ಲಿ ಇರುವುದು ವಿದ್ಯಾರ್ಥಿಗಳ ಭಾಗ್ಯ. ವೃತ್ತಿಯ ಹಿನ್ನೆಲೆಯ ಕಾರಣದಿಂದ ತಾರಿಣಿ ವಿಮರ್ಶೆಯಲ್ಲಿ ಪಶ್ಚಿಮದ ಲೇಖಕರ ಹೆಚ್ಚು ಉಲ್ಲೇಖಗಳಿವೆ. ಇವಕ್ಕೆ ಹೋಲಿಸಿದರೆ, ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಉಲ್ಲೇಖ ಕಡಿಮೆ. ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಹಂಗಿಲ್ಲದೆ ಸಾಹಿತ್ಯ ವಿಮರ್ಶೆ ಬರೆಯಬಹುದು. ಆದರೂ ಅಲ್ಲಿ ಎಂತಹುದೋ ಒಂದು ಕೊರತೆ ಉಳಿದುಬಿಡುತ್ತದೆ. ಆಧುನಿಕ ಸಾಹಿತ್ಯಕ್ಕೆ ಸೀಮಿತಗೊಳಿಸಿಕೊಂಡಂತಿರುವ ಕೆಲವು ವಿಮರ್ಶಕರಲ್ಲಿ ಇದನ್ನು ಕಾಣಬಹುದು. ಆದರೆ ಸಮಕಾಲೀನವಾದ ಒಂದು ಕೃತಿಯ ಬಗ್ಗೆ ಮಾತಾಡುವಾಗಲೂ ಪರೋಕ್ಷವಾಗಿ ಒಟ್ಟು ಕನ್ನಡ ಸಾಹಿತ್ಯ ಪರಂಪರೆ ಕುರಿತ ನೋಟಗಳನ್ನು ಕೊಡಬಲ್ಲ ಆಮೂರ ಕುರ್ತಕೋಟಿ ಚೆನ್ನಿ ಸಿಎನ್‌ಆರ್ ಅವರಲ್ಲಿ ಇದು ಕಾಣುವುದಿಲ್ಲ.

ಶತಮಾನದ ಸಾಹಿತ್ಯ ವಿಮರ್ಶೆ ಸಂಕಲನ ಮಾಡುವಾಗ, ಕನ್ನಡದಲ್ಲಿ ಹೊಸ ತಲೆಮಾರಿನಲ್ಲಿ ವಿಮರ್ಶಕರೇ ಕಾಣುತ್ತಿಲ್ಲವೆಂದು, ಸಂಪಾದಕರಾದ ಎಚ್.ಎಸ್.ರಾಘವೇಂದ್ರರಾವ್ ಆತಂಕ ವ್ಯಕ್ತ ಮಾಡಿದ್ದರು. ಆದರೆ ಸಿರಾಜ್ ಅಹಮದ್, ವಿಕ್ರಂ ವಿಸಾಜಿ, ವಿನಯಾ, ತಾರಿಣಿ- ಮುಂತಾದವರು ಈ ಆತಂಕಕ್ಕೆ ಉತ್ತರ ಕೊಡುವಂತೆ ಬರೆಯುತ್ತಿರುವರು. ಆದರೂ ಕನ್ನಡ ವಿಮರ್ಶೆ ಅಳಿವಿನಂಚಿನಲ್ಲಿರುವ ಪ್ರಕಾರದಂತೆಯೇ ಕಾಣುತ್ತಿದೆ.

ಕನ್ನಡದ ಕಾವ್ಯ ಮತ್ತು ಕಾದಂಬರಿ ಪ್ರಕಾರದಲ್ಲಿ ಮಹಿಳೆಯರು ಹೆಚ್ಚು ತೊಡಗಿಕೊಂಡಿದ್ದಾರೆ. ಸಣ್ಣಕತೆ ಹಾಗೂ ವಿಮರ್ಶೆಯಲ್ಲಿ ಅವರ ಸಂಖ್ಯೆ ಕಡಿಮೆ. ಇದೇಕೆಂದು ಅರ್ಥೈಸಬೇಕಿದೆ. ಈ ಹಿನ್ನೆಲೆಯಲ್ಲಿ ಲೇಖಕಿಯರು ಸಾಹಿತ್ಯದ ಮೌಲ್ಯಮಾಪನ ಮಾಡುವ ಕೆಲಸಕ್ಕೆ ಒಂದು ಸಾಂಸ್ಕೃತಿಕ ಮಹತ್ವವಿದೆ. ಒಬ್ಬ ಸಂವೇದನಾಶೀಲ ಮಹಿಳೆ, ನಮ್ಮ ಮಹತ್ವದ ಲೇಖಕರ ಬಗ್ಗೆ ಕಲಾಶಕ್ತಿಗಿಂತ, ಹೆಣ್ಣಿನ ಬಗ್ಗೆ ಅವರು ತಾಳಿರುವ ಧೋರಣೆಯ ಬಗ್ಗೆ ಯಾಕೆ ಸೆನ್ಸಿಟಿವ್ ಆಗುತ್ತಾರೆ? ಒಬ್ಬ ದೊಡ್ಡ ಲೇಖಕ ಬರೆದ ಆತ್ಮಕತೆಯ ಚಾರಿತ್ರಿಕ ಮಹತ್ವಕ್ಕಿಂತ, ಆತ ನಿಡುಗಾಲ ತನ್ನ ಜೀವನಸಂಗಾತಿಯಾಗಿದ್ದ ಮಡದಿಯ ಬಗ್ಗೆ ಮೌನವಹಿಸುವುದು ಆಕೆಗೆ ಯಾಕೆ ಕಾಡುತ್ತದೆ? ಈ ಪ್ರಶ್ನೆಗಳನ್ನು ನಾವು ಗಂಭೀರವಾಗಿ ಪರಿಶೀಲಿಸಬೇಕು. ಇಲ್ಲದಿದ್ದರೆ ದಲಿತತ್ವವನ್ನು ಒಳಗೊಂಡಂತೆ ಎಲ್ಲ ಬಗೆಯ ಸಂವೇದನಾ ಪ್ರಧಾನ ಓದನ್ನು ನಿರಾಕರಿಸುವ ಅಸೂಕ್ಷ್ಮತೆ ಉಂಟಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗುತ್ತಿರುವ ಭಾಷೆಯೇ ಪ್ರಧಾನವಾಗಿ ಪುರುಷವಾಚಿ. ಹೀಗಾಗಿಯೇ ಆಶಾದೇವಿ, ವಿನಯಾ ಬರೆಯುವಾಗ, ಕನ್ನಡದ ಮುಖ್ಯಧಾರೆಯ ವಿಮರ್ಶೆ ಕಾಣಿಸದ ಕೆಲವು ನೋಟಗಳನ್ನು ಅವರು ಕಾಣಿಸುತ್ತಿದ್ದಾರೆ ಅನಿಸುತ್ತದೆ.

ಹಾಗೆ ತಾರಿಣಿಯವರದು ಸ್ತ್ರೀವಾದಿ ಎನ್ನಬಹುದಾದ ವಿಮರ್ಶೆಯಲ್ಲ, ಅವರಲ್ಲಿ ಜೆಂಡರ್ ಸೆನ್ಸಿಟಿವಿಟಿಯಿದೆ. ಆದರೆ ಮಹಿಳಾವಾದದ ಹ್ಯಾಂಗ್ ಓವರ್ ಇಲ್ಲದೆ ಈ ಕುರಿತ ಪ್ರಶ್ನೆಗಳನ್ನು ಎತ್ತಬಲ್ಲರು. ಆದರೂ ಕವಿಯಾಗಿ ತನ್ನದೇ ಭಾಷೆ ಪಡೆದಿರುವ ತಾರಿಣಿ, ವಿಮರ್ಶೆಯ ಭಾಷೆಯಲ್ಲಿ ತನ್ನದೇ ಆದ ಈಡಿಯಂ ಒಂದನ್ನು ಪಡೆದಿಲ್ಲವೇನೋ ಅನಿಸುತ್ತದೆ. ತಾರಿಣಿ ಅವರ ಸದ್ಯದ ವಿಮರ್ಶೆಯ ಒಲವನ್ನು ಕಂಡರೆ, ಅದೀಗ ಕನ್ನಡದಲ್ಲಿ ಹೆಚ್ಚು ಚಾಲ್ತಿಯಲ್ಲಿರುವ ಜನಪ್ರಿಯವೂ ಆಗಿರುವ ಸಾಂಸ್ಕೃತಿಕ ವಿಮರ್ಶೆಯತ್ತ ಇದ್ದಂತಿದೆ. ಕಲಾತ್ಮಕ ಗೀಳಿನಿಂದ ಸಾಹಿತ್ಯ ಓದುವುದು ಒಂದು ಅತಿಯಾದರೆ, ಆಶಯಕ್ಕಾಗಿ ಓದುವುದು ಇನ್ನೊಂದು ಅತಿ. ಮೊದಲನೆಯದು ಒಂದು ರೂಪವನ್ನು ಅಂತಿಮವೆಂದು ಭಾವಿಸಿದರೆ, ಇನ್ನೊಂದು ತನಗೆ ಇಷ್ಟವಾದ ರಾಜಕೀಯ ಸಾಮಾಜಿಕ ಧೋರಣೆ ಮತ್ತು ವಸ್ತುವನ್ನು ಅಂತಿಮವೆಂದು ಭಾವಿಸುತ್ತದೆ. ಇವುಗಳ ಅಪಾಯವನ್ನು ಈಗ ವಿಮರ್ಶೆಯಲ್ಲಿ ಕೆಲಸ ಮಾಡುತ್ತಿರುವ ನಾವೆಲ್ಲರೂ ಧ್ಯಾನಿಸಬೇಕಿದೆ.



ಹಾಲುಗಲ್ಲದ ಹುಡುಗಿ ಎದೆಯುಬ್ಬಿ ಹಾಡು
ಅವಳ ಗಂಟಲಿಗೊಬ್ಬ ಶಾಪಗ್ರಸ್ತ ಗಂಧರ್ವ
ಕನ್ನೆಯ ಗಲ್ಲ ಕೆನ್ನೆ ಸವರಿದವನ ಹಿಡಿಮು
ಬರಸೆಳೆದು ಬಿಗಿದಪ್ಪಿ ಹಸಮಣೆಗ
ಜನುಮದ ಜೋಡಿ ಬೆಸಕೊಂಡ
ಹಣ್ಣು ಜೀವದಲಿ ಝೇಂಕರಿ

ಆ ರಾಗ ಸಂಪದಕ ಸಾಗರ ಸುನಾಮಿ

ಮುಪ್ಪಿನ ಮುದುಕ ಬಳಗಾನ ಬಳಿ
ಸಂಗೀತದ ತೊಟ್ಟಿಲು ತೂಗಿದಳ

● ಪ್ರೊ. ಶಿವರಾಮ


# ...ಮುಳ್ಳ್ರುಗೂ, ಸರುವಜ್ಞನಿಗೂ ಏನ್ಲ ಸಮಂದ!

...ಜವಾಗಿ ಬರಬೇಕಾಗಿದ್ದ ಮಳೆ ಅದ್ದುಮಳೆಯಂತೆ ...ಸರಿಯಾಗಿ ಚೆಚ್ಚಿ ಹೋಯ್ತು. ಜನ ಬತ್ತನೆ ...ವಲ್ಲಿ ಓಡಾಡುತ್ತಿರಬೇಕಾದರೆ ಕಾಳಮಾವ,

...ನೈದಿನ ಮದ್ದೆ ಹುಯ್ಯಕ್ಕೆ ಏನಾಗಿತ್ತಪ್ಪ ಈಟೊತ್ತಿಗೆ ...ಕ್ಯರಿತಿದ್ರೂ" ಎಂದ.

...ಹುಯ್ತಲ್ಲ ಅದೇಳು ಮಾವ" ಎಂದ ಉಗ್ರಿ.

...ಕಾಲ ಅಂತ ಇರದ್ಯಾಕ್ಲ? ಕಾಲಕ್ಕೆ ಸರಿಯಾಗಿ ...ಬಿದ್ರೆ ಯಲ್ಲ ಸರಾಗಾಗಿರತದೆ. ಮಾರ್ನಮಿವೊತ್ತಿಗೆ ...ದ್ದ ಪೈರು ಬಂದ್ರೆ ದೀವ್ಳಿಗೆ ಟೈಮಿಗೆ ವಡಿಗೆ ...ಬುಡದು. ಈಗ ಅಂಗಾಗದಿಲ್ಲ, ನೋಡು."




...ಮ ಅಯ್ಯನರಾಗಿ ಕಾಲಲ್ಲ ತಗೊ. ಮೂರೇ ... ಕುಯ್ಲಿಗೆ ಬರೋ ರಾಗಿನೂ ಬಂದವೆ."

...ನ್ನ ಯಲ್ಲಾನು ಅವುನ ಕಾಲಕೆ ಒಗ್ಗಿಸಿಗತ್ತಾ ...ರಣಬೇಸಗೆಲಿ ಕಲ್ಲಂಗ್ಡಿ ಹಣ್ಣು ಬರವು ಈಗ್ಲೆ ...ವೆ, ಇದಕೇನೇಳ್ತಿ?" ಎಂದ ಸೀರ.

...ವುರಿಂಗೆ ವೊಾಡೋವತ್ತಿಗೆ ಅಲವೇನ್ನ ...ಬೇಗಿರದು. ದೇವರು ಇವುರ ಪುಲ್ಲುಲ್ಲಿ ಆಟ ...ಡು ಸುಮ್ಮನೆ ಕುಂತವುನೆ ಅನ್ನಕಂಡ್ಯಾ ನೋಡಾಗ್ಲೆ ...ಗೂ ಹಂದಿ ರೋಗ ತಂದು ಮಡಿಗ್ಯವುನೆ" ...ಳಮಾವ ಜನಕ್ಕೆ ತಕ್ಕ ಶಾಸ್ತಿಯಾದಂತೆ ಕಣ್ಣುಬಿಟ್ಟ.

...ಹಾಳು ಹಂದಿರೋಗ ಬಂದು ಜನ ಸಾಯ್ತಾ ... ಅದಿಲ್ಲಿಗಂಟ ಎಲ್ಲಿತ್ತೂ?" ಎಂದಳು ಜುಮ್ಮಿ.

...ದಿ ರೋಗ, ಹಂದಿರೋಗ ಅಂತ ಯಲ್ಲ ಇಡೀ ...ಹೆದರುಸ್ತ ಕುಂತವುರೆ. ಅದಕಿಂತ ಡ್ಯೆಂಜರು ...ಡಸಪ್ಪ, ನಮ್ಮೂರಲ್ಲೆ ಮೂರು ಜನೋದ್ರು ... ಇಡೀ ದೇಸದ ತುಂಬ ಏಟು ಜನೋಗಿರಬೇಕು? ...ಬುಟ್ರು, ಯಲ್ಲ ಹಂದಿಜ್ವರ ಅಂತ ಬಾಯಿಗೆ ...ಕೊಂಡು ತಿರುಗ್ತ ಅವುರೆ."

...ಮ್ಮೂರಿಗೆ ಬರದಂಗೆ ನೋಡಿಕಬೇಕು ಕಂಡ್ಯ."

...ೋಡಿಕಬೇಕು ಅಂದ್ರೆ ನಮ್ಮೂರೋರ್ಯಾಗೂ ...ಗಬಾರ್ದು. ವರಿಗಿನೋರು ವಳಿಕೆ ಬರಬಾರ್ದು. ... ಹಂದಿಜರ ಬರದಿಲ್ಲ ಕಣೆ."

...ಗೆ ಊರಲ್ಲಿರೊ ಹಂದಿಗಳಿಂದ ಬರದಿಲ್ಲ ಅನ್ನು."

"ನಮ್ಮೂರಲ್ಲಿ ಯಾವಂದಿ ಇದ್ದವೇ? ಇರೋ ನಾಕಂದಿಯ ಆಗ್ಲೆ ಕುಯ್ಕಂಡು ತಿಂದ್ರು."

"ಹಳ್ಳಿಕದಿಗಿಂತ ಸಿಟಕದೆಲೆ ಹಂದಿ ಜಾಸ್ತಿಯವಲ್ಲಾ" ಎಂದ ಸೀರ.

"ಸಿಟಲಿರೊ ಹಂದಿಗಳು ಒಂಥರಾ ಭೂಗತಲೋಕದ ಜನಗಳಿದ್ದಂಗೆ ಚಿಗಪ್ಪ" ಎನ್ನುತ್ತಾ ವಾಟಿಸ್ಸೆ ಬಂದ.

"ಭೂಗತಲೋಕದ ಜನವ ಹಂದಿಗೋಲುಸ್ತಿಯಲ್ಲ ಯಾಕೊ?"

"ಯಾಕೆ ಅಂದ್ರೆ, ಅವುಕ್ಯಲ್ಲ ಕಾರಣ ಇರತದೆ ಕಣೊ ಉಗ್ರಿ. ಸಿಟಲಿರೊ ಹಂದಿಗಳನ್ನ ಯಾರೂ ಐಡೆಂಟಿಟಿ ಮಾಡಕ್ಕೆ ಆಗದಿಲ್ಲ, ಅವುರ ಬಾಸ್ ಎಲ್ಲೊ ಇರತನೆ. ಅವುನ ಆದಾಯಕ್ಯಾಗಿ ಇವು ಇಡೀ ಕೇರಿ ತುಂಬ ತಿರುಗಾಡಿ ದಾನ್ಲಿ ಮಾಡ್ತವೆ. ಅವುರ ಜೀವನ ಯಂಗ ನ್ಯಡಿತಾ ಅದೆ ಅಂತ ನಾನು ಗ್ಲಾನ್ಸ್ ವರಾಡಿದಾಗ, ಸಿಟಿ ಹಂದಿಗಳು ಭೂಗತಲೋಕದ ಹುಡುಗ್ರು ಲೈಫು ಒಂದೇ ತರಕಾಣ್ತು. ಅದ್ಕೆ ಅಂಗಂದೆ" ಎಂದ ವಾಟಿಸ್ಸೆ.

"ಅವುನ್ಯಾರೊ ಕಟ್ಟಾ ಸುಬ್ರಮಣಿ ಅನ್ನೊನಿಗೆ ಚಟ್ಟಾ ಕಟ್ಟಂಗೆ ವಡದರಂತಲ್ಲಾ, ನಿಜವೇನ್ನ?" ಎಂದ ಸೀರ.

"ಸುಳ್ಳು ಚಿಗಪ್ಪ, ಅವುನಿಗೇನಾರ ಒಂದೇ ಒಂದೇಟು ಬಿದಿದ್ರು, ಸಾಕು ಬ್ಯಾಂಡೇಜ್ ಕಟಿಗೊಂಡು ಆಸುಪತ್ರೆಲಿ ಮನಿಕತಿದ್ದ. ಯಲ್ಲ ವಡದಾಡಿ ಸತ್ತರೆ ನನ್ನ ಗಂಡ ನೂಕ್ಯಾಟದಲ್ಲೇ ಸತ್ತ ಅನ್ನಂಗೆ ಯಾರೊ ನೂಕಿದ್ಕೆ ಹೋಗಿ ದೂರು ಕೊಟ್ಟವುನೆ."

"ನೀನೇನೆ ಅನ್ನು ಈ ಬಜೆಪಿಗಳ ಹಾವುಳಿ ತಡಿಯೋ ಸಗತಿದಳದೋರಿಗೆ ಇರದು. ಕಾಂಗ್ರೆಸ್ಸಿನೋರು ನರಸತ್ತಂಗಾಗ್ಯವುರೆ" ಎಂದ ಉಗ್ರಿ.

"ಒಂದು ಕಾಲ್ದಲ್ಲಿ ಅವುರೂ ತೋಳು ತಿಮಿರಿನೋರೆಯ ಕಣೊ ಉಗ್ರಿ. ಯಲ್ಲ ಸೊಂಪಾದ್ರು ಮನೆಲವುರೆ. ಅದೂ ಅಲ್ದೆ ಅವುರ ಪಾರ್ಟಿಲಿರೋರ್ಯಲ್ಲ ಏಜಡ್ ಪರಸನ್ಸು. ಅಂಗಾಗಿ ಅಲ್ಲಿ ಚೂಲುಬುಡೋರ್ಯಾರೂ ಇಲ್ಲ. ಅದೇ ದಳದಲ್ಲಾದ್ರೆ ಕುಮಾರಣ್ಣ ಚ್ಛೂ, ಚ್ಛೂ ಅಂದ್ರು ಸಾಕು, ಹಂದಿ ಓಡಿಸಿಗಂಡೋದ ನಾಯಿ ಹೋದಂಗೆ ಹೋಗಿ ಬಾಯಾಕೇ ಬುಡ್ತವೆ."

"ಅದ್ಕೆ ಏನೊ ಕಣೊ ಸದಾನಂದಗೌಡ ದ್ಯಾವೇಗೌಡ್ರ ಬೋದಿರದು" ಎಂದ ಉಗ್ರಿ.

"ಏನಂತ ಬೋದವುನ್ಲ?" ಎಂದ ಕಾಳಮಾವ.


"ದ್ಯಾವೇಗೌಡ್ರುದು ಪಾರ್ಟಿ ಅಲವಂತೆ, ಗೂಂಡಾ ಪಡಿಯಂತೆ. ಅಂಗಂದವುನೆ ಸದಾನಂದಗೌಡ."

"ಅಂಗಂದುದ್ಕು ವಳ್ಗಿದೆ ಆಯ್ತು ಬುಡು" ಎಂದು ಸೀರ ನಕ್ಕ.

"ಅದ್ಯಾಕೊ ಅಂಗಂತಿ?"

"ಅವುನಂದ ಮಾತಿಗೆ ಒಂದಿನ ಉತ್ತರ ಕೊಟ್ಟೆಕೊಡ್ತನೆ ಕಂಡ್ಯ ದ್ಯಾವೇಗೌಡ."

"ನಿಜ ಕಣಮಾವ. ಅಂತ ಹ್ಯಗಡೆ, ಪಟೇಲ್ರು ಅಂಥೋರಿಗೇ ಗೂಸ ಬುಡಿಸಿರೊ ದ್ಯಾವೇಗೌಡ ಈ




ಸದಾನಂದಗೌಡನ್ನ ಬುಡ್ತನಾ? ಸರಿಯಾಗಿ ನೆಯ್ಸಿಸ್ತನೆ" ಎಂದ ಉಗ್ರಿ.

''ಆ ತವುಳನಾಡಿಗೆ ಸರ್ವಗ್ನವೂರ್ತಿ ತಗಂಡೋಗಿದ್ರಲ್ಲ ನೆಟ್ರು ಬಂದ್ಯ?" ಎಂದ ಕಾಳಮಾವ.

"ಸರ್ವಜ್ಞ ತಮುಳನಾಡಿಗೆ ಹಳಬಾದ ದ್ವಡಪ್ಪ" ಎಂದ ವಾಟಿಸ್ಸೆ.

"ಅದೊಂದು ವಳ್ಳೆ ಕ್ಯಲಸ ಬುಡು."

"ನನಿಗೋನೊ ಅಂತ ಕ್ಯಲಸ ಯಾವೂ ಸರಿಯಾಗಿ ಕಾಣದೇಯಿಲ್ಲ ದ್ವಡಪ್ಪ, ಸರ್ವಜ್ಞನ ವಚನವ ತಮಿಳಿಗೆ ತರಜುಮೆ ಮಾಡಿ ಹಂಚಿದ್ರೆ ಚನ್ನಾಗಿತ್ತು. ಅದೇ ತಮುಳ್ರು ನೋಡು ತಿರುವಳ್ಳವರು ಪ್ರತಿಮೆ ಅನಾವರಣ ಮಾಡಕ್ಕೂ ಮೊದ್ಲೆ, ಅಂದ್ರೆ ಏಳೆಂಟೊರ್ಸಕ್ಕಂತ ಮೊದ್ಲೆ, ಅವುನ ಬರದದ್ದ ಕನ್ನಡದಲ್ಲಿ ತಂದು ಹಂಚಿದ್ರು. ರಿಕ್ಷಾ ಡ್ರೈವರ್‌ಗಳತ್ರ ಇದ್ದಿದ್ದ ನಾನೇ ನೋಡಿದ್ದಿನಿ. ಅಂತ ಕ್ಯಲಸ ಬುಟ್ಟು ಪ್ರತಿಮೆ ನಿಲ್ಸಿದ್ರೆ ಆದ ತಮುಳ್ರು ನೋಡ್ತರೆ?" ಎಂದ ವಾಟಿಸ್ಸೆ.

"ತಮುಳ್ರು ನೋಡದಿಲ್ಲ ಬುಡು. ಅವುರೇನಿದ್ರು ತಮುಳು ಮಾತಾಡೋರ ಮಾತ್ರ ನೋಡದು."

"ತಮುಳನಾಡಿಗಂಟ ಯಾಕೋದಿಯೋ? ಬೆಂಗಳೂರಲ್ಲಿ ಕಬ್ಬನ್ ಪಾರ್ಕಿದ್ರಿಗೆ ಒಂದು ವಿಗ್ರಹ ನಿಲ್ಸಿಸ್ಯವುರೆ. ಅವುನ್ಯಾರು ಅಂತ ಯಾರಿಗೂ ಗೊತ್ತಿಲ್ಲ, ಅದು ಯಾರದು ಗೊತ್ತೇನೊ? ಶೇಷಾದ್ರಿ ಅಯ್ಯರ್ ಅಂತ ಇದ್ರಂತೆ, ಮೈಸೂರು ದಿವಾನರಂತೆ. ಅವುನಿಗಿಂತ ಬೇಕಾದೋಟು ವಳ್ಳೆ ಕ್ಯಲಸ ಮಾಡಿರೊ ಮಿರ್ಜಾ ಇಸ್ಮಾಯಿಲ್ ಸ್ನನಪಲ್ಲಿ ಏನೂ ಇಲ್ಲ, ಅದೇ ಶೇಷಾದ್ರಿ ಹೆಸರಲ್ಲಿ ವಿಗ್ರಹ, ಪಾರ್ಕು ಯಲ್ಲಾನು ಮಾಡ್ಯವುರೆ. ಇದಕೇನೇಳ್ತೀ?" ಎಂದ ವಾಟಿಸ್ಸೆ.

"ಸರುವಗ್ನ ಮೂರ್ತೀ ದೇವಮಾನ್ಯ ಕಂಡ್ಯ. ಅವುನೇನು ಸದರವಾನಿ ಮನಸಲ್ಲಾ" ಎಂದ ಕಾಳಮಾವ.

"ಸರ್ವಜ್ಞನ ಮ್ಯಾಟ್ರು ನನಿಗಷ್ಟು ಗೊತ್ತಿಲ್ಲ, ಹೇಳು ದ್ವಡಪ್ಪ."

"ಅವುನು ಹೇಳಿರೊ ಮಾತು ಇವತ್ತಿಗೂ ಅವೆ, ಮುಂದುಕೂ ಇರತವೆ ಕಂಡ್ಯ. ಅವುನಿಗೆ ಯಾರು ಏನ್ನು ಮರಮಾಚಕ್ಯಾಯ್ತಿರಲಿಲವಂತೆ ಗೊತ್ತೆ? ಒಂದು ಸತಿಯಾ ಸರುವಗ್ನ ಹಿಂಗೇ ಹೋಯ್ತಾಯಿರುವಾಗ ಈಸ್ಪುರ, ವಿಷ್ನು, ಬ್ರಮ್ಮ ಬತ್ತಾಯಿದ್ರಂತೆ. ಆಗ ಅವುರ್ಯಲ್ಲ 'ಲೇ ಲೇ ಸರುವನ್ನ ಬತ್ತಾ ಅವುನೆ ಯಾಸಮರಿಸಿಗಳನ' ಅಂತ ಆಡು, ಕೋತಿ, ನರಿಯಾಗಿ ಬುಟ್ರಂತೆ. ಸರುವಗ್ನ ಬಂದು ನೋಡಿದ. ನಗಾಡಿದ. ಅಮ್ಯಾಲೇಳಿದನಂತೆ 'ಹರಿಯು ಆಡಾದ ಹರನು ಕೋಡಿಗನಾದ, ನೋಡಲು ಬಂದ ಬ್ರಹ್ಮ ವುುದಿನರಿಯಾದ' ಅಂತ ಹೇಳಿದ್ನಂತೆ. ಅಂಗಂದೇಟಗೆ ಎಲಾ ಇವುನ ಅಂತ ನಿಜರೂಪ ತಕ್ಕಂಡು ಸರುವಜ್ಞನಿಗೆ 'ಕನ್ನಡ ಇರಗಂಟ ಇರಯ್ಯ ನೀನು' ಅಂತ ಆಸಿರುವಾದ ಮಾಡಿ ಹೋದರಂತೆ. ಆಗೊ ಅಂಗೆ ಸರಗ್ನಮೂರ್ತಿಯ ನಾವು ಉಳಿಸಿಗಬೇಕು ಕಂಡ್ಯ" ಎಂದ ಕಾಳಮಾವ ಒಂದು ಪುರಾಣವನ್ನೆ ಹೇಳಿ ಉಗ್ರಿ ವಾಟಿಸ್ಸೆಯರನ್ನೆಲ್ಲಾ ತಬ್ಬಿಬ್ಬುಗೊಳಿಸಿದ. ಆಗ ವಾಟಿಸ್ಸೆ,

"ದ್ವಡಪ್ಪ ನೀನು ಯಾರೋ ಐತಿಹಾಸಿಕ ವ್ಯಕ್ತಿ ವಿಷಯ ಹೇಳಿದ್ರು ಅವುರ ತಗಂಡೋಗಿ ಈಶ್ವರನಿಗೆ ಪೆಂಡಾಗಿದ್ದ ಅಂತಿಯಲ್ಲ ಯಂಗೇ?" ಎಂದ.


"ಇಸಿಸಿ, ನ್ಯಡದದ್ದೇಳಿದೆ ಕಂಡ್ಯ."

"ಸರ್ವಜ್ಞನದೊಂದು ವಚನ ನನಿಗೆ ಭಾಳ ಇಷ್ಟ ದ್ವಡಪ್ಪ, ಅದ್ಯಾವುದಪ್ಪ ಅಂದ್ರೆ 'ಬಾಡ ತಿಂಬಾತಂಗೆ, ಆವೇನು ಆಡೇನು, ಕಾಡಬಡನರಿಯೇನು ಮನೆಯ ನಾಯೇನು ಸರ್ವಜ್ಞ' ಅಂತ. ಅದು ನನಿಗೆ ಭಾಳ ಇಷ್ಟ" ಎಂದ ವಾಟಿಸೆ.

"ಅದ್ಯಾಕ್ ನಿನಿಗಿಷ್ಟ ಗೊತ್ತೇನೊ? ಕುಡಿಯಲೊರಟ ವಂಗೆ ರಮ್ಮಾದರೇನು, ಬ್ರಾಂದಿಯಾದರೇನು, ಹೆಂಡವಾದರೇನು, ಕಡೆಗೆ ಕೊಚ್ಚೆ ಗುಂಡಿ ನೀರಾದರೇನು ಅನ್ನೋ ಲ್ಯಕ್ಕದೋನಾದ್ರಿಂದ ನಿನಿಗಿಷ್ಟ" ಎಂದು ಉಗ್ರಿ ಹೇಳಿದಾಗ ಎಲ್ಲಾ ನಕ್ಕರು... ■

## ...ರ್ಗತಿಯತ್ತ

...ಮ ದುರ್ಗತಿಯತ್ತ ಸಾಗುತ್ತಲೇ ಇರುವ ದೇಶ ಎನ್ನುವುದು ನೀವು ಕ್ಷಣ ಕಣ್ಣುಬಿಟ್ಟು ನೋಡಿದರೆ ...ತ್ತದೆ. ಮೊನ್ನೆ ಒಬ್ಬ ಹೇಳಿದ, "ನೀವು ಚಳ್ಳಕೆರೆಯ ಎಣ್ಣೆಯ ತಿಮಿಂಗಲಗಳ ಬಗ್ಗೆ ಬರೆದಿದ್ದರ ... ಗೊತ್ತ? ನೀವಿದನ್ನು ನಿರೀಕ್ಷಿಸಿರಲಿಕ್ಕಿಲ್ಲ, ಅದಕ್ಕೇ ಹೇಳುತ್ತಿದ್ದೇನೆ. ನೀವು ಬರೆದೊಡನೆ ಪೊಲೀಸರು, ... ಕೆರಿಗೆ ಇನ್ಸ್‌ಪೆಕ್ಟರ್ ಸಂತೋಷಗೊಂಡರು. ಅವರೆಲ್ಲ ತೈಲದ ಕಳ್ಳರ ಮೇಲೆ ಮುಗಿಬಿದ್ದರು. ...ಲ್ಲಿ ಹೀಗೆ ಬಂದಿದೆ. ಮೇಲಧಿಕಾರಿಗಳು ಮತ್ತು ಮಂತ್ರಿಗಳು ಕೂಡಲೆ ವಿಚಾರಿಸಿ ಅಂತ ..., ನಾವು ತಪಾಸಣೆ ಮಾಡಿ ಕ್ರಮ ಕೈಗೊಳ್ಳಲೇಬೇಕು-ಎಂದು ಹೇಳಿದರು. ತಪಾಸಣೆ ಶುರುವಾಯಿತು. ...ಂಡರು-ಯಾರ ಮೇಲೂ ಉಗ್ರ ಕ್ರಮ ತೆಗೆದುಕೊಳ್ಳಲಿಲ್ಲ, ಲಂಚದ ರೇಟ್ ಮಾತ್ರ ಜಾಸ್ತಿಯಾಯಿತು!"



''ಹಾಗಾದ್ರೆ, ನಾವು ಬರೀದಿದ್ರೆ ಒಳ್ಳೆಯದಿತ್ತೆ?"

"ಹಾಗಲ್ಲ. ಬೆರಳಿಂದ ನೆತ್ತಿಯವರಿಗೆ ಕೆಟ್ಟುಹೋಗಿರುವ ಈ ವ್ಯವಸ್ಥೆಯಲ್ಲಿ ಏನು ಮಾಡಿದರೂ ಅದರ ವಿರುದ್ಧದ ಪರಿಣಾಮ ಆಗುತ್ತೆ ಚಳ್ಳಕೆರೆಯ ಎಣ್ಣೆ ವ್ಯಾಪಾರಿಗಳು ಕಳ್ಳರು ಅಂತ, ...ಗೆ ಮಂಚಿಸುತ್ತಾರೆ ಅಂತ ಪೊಲೀಸರಿಗೂ ಗೊತ್ತು, ಇನ್ಸ್‌ಪೆಕ್ಟರಿಗೂ ಗೊತ್ತು, ನೀವು ಬರೆದದ್ದು ಎಲ್ಲರಲ್ಲಿ ಹೊಸ ... ಹುಟ್ಟಿಸಿ ವ್ಯವಹಾರ ಜಾಸ್ತಿ ಆಯಿತು ಅಷ್ಟೆ. ಈ ಕಾಮಗಾರಿ ಇಲಾಖೆಯನ್ನೇ ತಗೊಳ್ಳಿ. ಅಲ್ಲಿಯ ಮಂತ್ರಿ, ...ಇಂಜಿನಿಯರು, ಸಬ್ ಓವರ್‌ಸೀಯರ್, ಕಾಂಟ್ರಾಕ್ಟರ್-ಎಲ್ಲರಿಗೂ ಏನೇನಾಗ್ತಿದೆ, ಎಷ್ಟೆಷ್ಟು ಯಾರ್ಯಾರು ... ಅಂತ ಗೊತ್ತು, ಒಬ್ಬ ಹೊಸ ಕಾಂಟ್ರಾಕ್ಟರ್‌ಗೆ ಶಾಕ್ ಆದದ್ದನ್ನೇ ಹೇಳ್ತೀನಿ. ಆತ ಆಶೆಯಿಂದ ಎರಡು ಲಕ್ಷದ ...ಹಿಡಿದುಕೊಂಡ. ಚಿಕ್ಕ ಬಿಲ್ಡಿಂಗ್ ಕಟ್ಟಬೇಕಿತ್ತು, ಮೊದಲ ಬಿಲ್‌ನಿಂದಲೇ ಇಂಜಿನಿಯರ್ ಹಣ ಕಿತ್ತುಕೊಳ್ಳತೊಡಗಿದ. ...ನಿಗೆ ಕೊಟ್ಟರೆ ಬಿಲ್ಡಿಂಗ್ ಕಟ್ಟಲು ಹಣವೇ ಸಾಲುವುದಿಲ್ಲ ಎಂದು ನಿರ್ವಾಹವಿಲ್ಲದೆ ವಿಷಯವನ್ನು ಅವನ ...ಎಕ್ಸಿಕ್ಯೂಟಿವ್ ಇಂಜಿನಿಯರ್‌ಗೆ ಹೇಳಿದ. ತನ್ನ ಅಸಹಾಯಕತೆಯನ್ನು ತೋಡಿಕೊಂಡ. ವಿಷಯವನ್ನೆಲ್ಲ ಕೇಳಿದ ...ವ್ ಇಂಜಿನಿಯರ್, 'ಇಷರಿ, ನೀವು ಹೊಸಬರು, ಸ್ವಲ್ಪ ಹೊಂದಾಣಿಕೆ ಮಾಡಿಕೊಂಡು ಹೋಗಿ. ಸ್ವಲ್ಪ ...ಬಿಲ್ಡಿಂಗಲ್ಲಿ ಉಳಿಸಿಕೊಳ್ಳಿ' ಅಂದ... ಇದರಿಂದೆಲ್ಲ ಬೇಸರಗೊಂಡ ಕಾಂಟ್ರಾಕ್ಟರ್ ಕಷ್ಟಪಟ್ಟು ಬಿಲ್ಡಿಂಗ್ ... ತನ್ನ ಸುಳ್ಳು ಪ್ರಾಮಾಣಿಕತೆಯಿಂದ ನಾಚಿಕೊಂಡು ನಿಲಕ್ಕಿಳಿದುಹೋದ. ಆವತ್ತಿನಿಂದ ಮತ್ತೆ ಸರ್ಕಾರಿ ...ಕೆಲಸಕ್ಕೆ ಹೋಗಲಿಲ್ಲ!"




## ಯಾರನ್ನು ಶಿಕ್ಷಿಸಬೇಕು?

ಇದು ಬರೀ ಲಂಚ, ಹೊಂದಾಣಿಕೆಯ ಪ್ರಶ್ನೆಯಾಗಿದ್ದರೆ ಪರಿಸ್ಥಿತಿಯನ್ನು ಹೇಗೋ ಎದುರಿಸಬಹುದಿತ್ತು. ಇದಕ್ಕೆ ಇನ್ನೂ ಆಳದ, ಸೂಕ್ಷ್ಮ ಬೇರುಗಳಿವೆ. ಪ್ರತಿಯೊಬ್ಬ ಲಂಚಕೋರನೂ ಸಮಾಜದ್ರೋಹಿಯೂ ಇವತ್ತು ದೇವರು ಮತ್ತು ಬಾಬಾಗಳ ಮೊರೆಹೋಗುತ್ತಾನೆ. ಇತ್ತೀಚಿನ ಒಂದು ಸುದ್ದಿ ನಿಮ್ಮಲ್ಲಿ ಕುತೂಹಲ ಹುಟ್ಟಿಸಿರಬಹುದು. ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದ ಸೆಲ್ವಿದಾಸ್ ಹೇಗೆ ಆ ವಿಶ್ವವಿದ್ಯಾನಿಲಯವನ್ನು ಹೊಲಸೆಬ್ಬಿಸಿದಳು ಎಂಬುದು ಗುಟ್ಟೇನಲ್ಲ, ನಾವೇ ವರದಿ ಮಾಡಿದ್ದೇವೆ. ಆಕೆ ಹೋದಲ್ಲೆಲ್ಲ ಇಲಾಖೆ ಗಬ್ಬೆದ್ದುಹೋಗಿವೆ. ಆಕೆಯ ಶೈಲಿ ಎಲ್ಲರಲ್ಲಿ ಅಸಹ್ಯ ಹುಟ್ಟಿಸಿದೆ. ಲೆಕ್ಕಕ್ಕಿರುವ ಪ್ರತಿಯೊಬ್ಬ ರಾಜಕಾರಣಿ, ಪುಢಾರಿಯ ಎದುರು ಉದ್ದಂಡ ನಮಸ್ಕಾರ ಹಾಕುವ ಈಕೆಯ ಕೈಯಲ್ಲಿ ಅತ್ಯಂತ ದೊಡ್ಡ ದಾಳ ಇರುತ್ತದೆ. ಅದು ಸಾಯಿಬಾಬಾ... ರಾಷ್ಟ್ರಪತಿ ವೆಂಕಟರಾಮನ್ ಮತ್ತು ಪ್ರಧಾನಿ ಪಿ.ವಿ. ನರಸಿಂಹರಾವ್ ಇಬ್ಬರೂ ಸಾಯಿಬಾಬಾನ ಕಟ್ಟಾ ಭಕ್ತರಾಗಿರುವುದು, ಸೆಲ್ವಿದಾಸ್ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಣ್ಣುಮುಕ್ಕಿಸಿದ್ದರೂ ಕೇಂದ್ರದ ಲೋಕಸೇವಾ ಆಯೋಗದ ಸದಸ್ಯೆಯಾಗಿ ನೇಮಕವಾಗಿರುವುದು ಕಾಕತಾಳೀಯವಲ್ಲ. ಇಲ್ಲಿಯ ನ್ಯಾಯಾಧೀಶರು, ರಾಷ್ಟ್ರಪತಿ, ಪ್ರಧಾನಿಯಿಂದ ಹಿಡಿದು ವೈಸ್‌ಛಾನ್ಸಲರ್‌ವರೆಗೆ ಎಲ್ಲರೂ ಮೂಢನಂಬಿಕೆ, ಹುಸಿ ಭಕ್ತಿಯಲ್ಲಿ ಮುಳುಗಿದ್ದಾಗ ಇಲ್ಲಿ ಹೇಳುವವರು, ಕೇಳುವವರು ಯಾರು?

ಇತ್ತೀಚೆಗೆ ನಮ್ಮ ವರದಿಯಲ್ಲಿ ನೀವು ಗಮನಿಸಿರಬಹುದು-ಬೆಂಗಳೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಹನುಮಂತಪ್ಪ ತಮ್ಮ ನೇಮಕದ ಪತ್ರವನ್ನು ಸ್ವೀಕರಿಸಿದ್ದೇ ಸಾಯಿಬಾಬಾನ ಕಾಲುಗಳ ಮೇಲೆ ಇಟ್ಟು. ಈತನ ತಂಟೆಗೆ ಹೋದ ಸಣ್ಣ ಕುಳಗಳು ಉಳಿಯುವುದು ಹೇಗೆ?

ಈಚೆಗೆ ಅಮೆರಿಕದಲ್ಲಿ ಟೆಲಿವಿಷನ್ ಮೂಲಕ ಅಪಾರ ಸಂಪತ್ತು ಗಳಿಸಿ ದುಷ್ಟ ವ್ಯವಹಾರಗಳಲ್ಲಿ ಮುಳುಗಿದ್ದ ಇಬ್ಬರು ಪಾದ್ರಿಗಳನ್ನು ಅರೆಸ್ಟ್ ಮಾಡಿ ಜೈಲಿಗೆ ತಳ್ಳಿದ್ದಾರೆ. ಇಲ್ಲಿ ಯಾರ್ಯಾರು ದಸ್ತಗಿರಿಯಾಗಬೇಕಾಗಿದೆ-ಯೋಚಿಸಿ.

-ಅಕ್ಟೋಬರ್ 13, 1991



# 'ಜಿ' ಅಂದರೆ 'ಗಾಲಿ'ನೋ 'ಗಾಳಿ'ನೋ

ಮೈ ಸ್ವಲ್ಪ ಬಿಸಿಯಾಗಿತ್ತು. ತೂರಲು ಮಳೇಲಿ ಓಡಾಡಿದ್ದಕ್ಕೆ ಸೊರಸೊರ ಅನ್ನುವ ಹಾಗೆ ಆಗ್ತಿತ್ತು. ಕೆಮ್ಮು ಬೇರೆ. ಅದು ಯಾವಾಗಲೂ ಇದ್ದದ್ದೆ. Smoker's cough ಅಂತಾರಲ್ಲ ಅದು. ಸಿಗರೇಟು ಸೇದುವುದನ್ನು ಬಿಟ್ಟರೆ ಅದು ಮಾಯ ಆಗುತ್ತೆ ಅಂದಿದ್ರು ಡಾಕ್ಟರು. ಇದು ಒಂದು ತರಹ ತಾಳಿ ಬಿಗಿಸಿಕೊಂಡ ಹೆಂಡತಿ ತರಹ. ಜೊತೇಲಿದ್ರೆ ಸದ್ಯ ತೊಲಗಿದರೆ ಸಾಕು ಅನ್ನಿಸುತ್ತೆ. ಅವಳಿಲ್ಲದೆ ಇದ್ದಾಗ ಒಂದು ರೀತಿ ಚಡಪಡಿಕೆ ಶುರು ಆಗುತ್ತಲ್ಲಾ ಹಾಗೆ. ಸಿಗರೇಟು ದಂಡಿಯಾಗಿದ್ದಾಗ ಇದರ ಸಾವಾಸಾನೆ ಬ್ಯಾಡಾಂತ ಪ್ಯಾಕನ್ನೇ ತೆಗೆದು ಬಿಸಾಕೋಣ ಅನ್ನಿಸುತ್ತೆ. ಬಿಸಾಕಿದೆವು ಅನ್ನಿ, ಬಾಯಿ ತುರಿಕೆ ಪ್ರಾರಂಭ ಆಗುತ್ತೆ. ಹಿಂಗಾಗಿ ಹೆಂಡತಿ, ಸಿಗರೇಟು ಇವೆರಡೂ ಸಾಕು-ಬೇಕಾಗಿ ನನ್ನ ಸಂಗಾತಿಗಳಾಗೇ ಇವೆ.

## ಅಣಕ

▸ ಎಚ್.ಎಲ್. ಕೇಶವಮೂರ್ತಿ

'ಇದೇನ್ರಿ ಸೊರಸೊರ ಅಂತಿದ್ದೀರಿ' ಕೇಳಿದಳು ನನ್ನಾಕೆ.

'ಸ್ವಲ್ಪ ನೆಗಡಿ ಆಗಿರೋ ಹಾಗಿದೆ. ನೀಲಗಿರಿ ತೈಲಕೊಡು' ಅಂದೆ.

'ಮೈಬಿಸಿ ಬೇರೆ ಇದೆ. ಹಂದಿ ಜ್ವರಾನೋ ಏನೋ'

ದಿನಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಇದೇ ಸುದ್ದಿ ಹಾಕಿ ಹಾಕಿ ಈ ದೇಶದ ಜನರಿಗೆಲ್ಲ ಹಂದಿ ಜ್ವರ ಬಂದಿರುತ್ತೆ ಇಲ್ಲ ಬರುತ್ತೆ ಅನ್ನೊ ಭಯ ಮೂಡಿಸಿದ್ದರು. ಅವಳ ಬಾಯಿಂದ ಈ ಮಾತು ಬರುತ್ತಿರುವಾಗ ಯಾಕೋ ಗಂಟಲಲ್ಲಿ ನೋವು ಕಾಣಿಸಿಕೊಂಡ ಹಾಗೆ ಆಯಿತು.

'ಹೋಗಿ ಡಾಕ್ಟರಿಗಾದರೂ ತೋರಿಸಿಕೊಂಡು ಬನ್ನಿ' ಅಂದಳು.

'ಏನು ಇಲ್ಲ ಕಣೆ ಬರೀ ಶೀತ ಅಷ್ಟೆ' ಎಂದು ಬಾಯಲ್ಲಿ ಹೇಳಿದೆನಾದರೂ ಹಂದಿ ಜ್ವರ ಅನ್ನುವ ಮಹಾಮಾರಿ ನನಗೂ ಬಡಿದಿರಬಹುದಾ ಅನ್ನುವ ಸಂಶಯ ಕಾಡಿತು. ಹಾಳಾದ್ದು ಮಕ್ಕಳು, ಮುದುಕರ ಮೇಲೆ ಅಮರಿಕೊಳ್ಳುವುದು ಹೆಚ್ಚು ಅಂತ ತಿಳಿದ ಮೇಲೆ ಒಂದು ರೀತಿಯ ದಿಗಿಲೇ ಆಯಿತು. ಟೆಸ್ಟ್ ಮಾಡಿಸೋಣ ಅಂದರೆ ಎಲ್ಲ ಕಡೆಯೂ ಈ ಅನುಕೂಲ ಇರಲಿಲ್ಲ. ಸರ್ಕಾರಿ ದೊಡ್ಡ ಆಸ್ಪತ್ರೆಗೆ ಹೋಗಬೇಕು. ಖಾಸಗಿ ಆಸ್ಪತ್ರೆಯಾದರೆ ಗಿರಾಕಿ ಮತ್ತೆ ಬರುತ್ತಿರಲಿ ಅಂತ ಬೆಣ್ಣೇಲಿ ಕೂದಲು ತೆಗೆದ ಹಾಗೆ ಮಾತನಾಡಿಸ್ತಾರೆ. ಹಣ ಬೋಳಿಸಿದರೂ ನೊಬ್ಬಗೇ ಇರುತ್ತೆ. ಸರ್ಕಾರಿ ಆಸ್ಪತ್ರೆಯಲ್ಲಿ ಹಂಗಿರಲ್ಲ, ದುಡ್ಡುಪೀಕಿದರೂ ಧಿಮಾಕಿನಿಂದ ಕಣ್ಣು ಕೈಯ್ಯಲೇ ಮಾತಾಡಿಸ್ತವೆ. ಈ ಹಾಳು ಹಂದಿ ರೋಗದಿಂದ ಯಾರ್‍ಯಾರಿಗೆ ಸಲಾಂ ಹೊಡೀಬೇಕಾಗಿದೆಯೋ ಶಿವನೆ ಅಂದುಕೊಂಡು ಆಸ್ಪತ್ರೆಗೆ ಹೊರಟೆ.

ದೊಡ್ಡ ಆಸ್ಪತ್ರೆಯಲ್ಲಿ ಬಾರಿಬಾರಿ ಡಾಕ್ಟರುಗಳು ಇದ್ದರು. ಹಂದಿ ಜ್ವರ ತಪಾಸಣೆಗೆಂದೇ ಬೇರೆ ವಿಭಾಗ ಇತ್ತು. ಕಾರ್ಯಪ್ರವೃತ್ತರಾಗಿದ್ದ ಡಾಕ್ಟರುಗಳು ಮಾತ್ರ ಅಲ್ಲ, ಇತರೆ ಸಿಬ್ಬಂದಿಯೂ ಮುಖಕ್ಕೆ ಮುಖವಾಡ ಧರಿಸಿದ್ದರು. ಅವರನ್ನು ನೋಡಿದಾಗ ಹಬ್ಬ ಜಾತ್ರೆಗಳಲ್ಲಿ ಹೆಂಗಸರು ಬಾಯಿ ಬೀಗ ಹಾಕಿಕೊಳ್ಳುವುದು ನೆನಪಾಯಿತು. ಅವರು ಅದನ್ನ ಹಾಕಿಕೊಂಡಂತೆ ಇವರು 'ಹಂದಿ ಬೀಗ' ಹಾಕಿಕೊಂಡಿದ್ದರು! ಒಂದು ರೀತಿ ಹಂದೀನೆ ನೋಡಿದ ಹಾಗೆ ಆಯಿತು. ಸರದಿ ಬಂದಾಗ ಹೋಗಿ ಅವರ ಮುಂದೆ ನಿಂತೆ. ಕೇಳುವುದಕ್ಕೆ ಮುನ್ನವೇ ಪ್ರವರ ಒಪ್ಪಿಸಿದೆ. ಒಬ್ಬ ಡಾಕ್ಟರು ಅದೇನೋ ಹೇಳಿದರು. ಗುಹೆಯ ಒಳಗಿಂದ ಬಂದಂತಿತ್ತು ಆ ದನಿ.

ಕಿವಿ ಕೊಟ್ಟು ಆಲಿಸಿದೆ.

'ನೀವು ಸಾಹೇಬರನ್ನ ಬೈದಿದ್ದೀರಾ?' ಗುಹೆಯ ಮಾತು.

ಯಾವ ಸಾಹೇಬ? ಏನು ಕತೆ? ಅವನನ್ನು ಬೈದಿದ್ದಕ್ಕೂ ಹಂದಿಜ್ವರಕ್ಕೂ ಏನು ಸಂಬಂಧ? ಒಂದೂ ತಿಳಿಯದೆ ಪೆಕರನಂತೆ ನಿಂತೆ.

'ರೆಡ್ಡಿ ಬ್ರದರ್ಸ್ ಶಾಪ ನೀಡಿದ್ದರಾ?'

ಪೆದ್ದುಪೆದ್ದಾಗಿ 'ಇಲ್ಲ' ಅಂದೆ.

'ನಿಮಗೆ ಹಂದಿ ಜ್ವರ ಇಲ್ಲ' ಅಂದಿತು ಗುಹೆ!


ಒಂದು ರೀತೀಲಿ ಖುಷಿ ಆಯಿತು. ಟೆಸ್ಟ್ ಮಾಡಿ ಆದಿಲ್ಲ ಅಂದಿದ್ದರೆ ಚೆನ್ನಾಗಿರುತ್ತಿತ್ತು. ಅದನ್ನೇ ಅವರಿಗೆ ತಿಳಿಸಿದೆ.

'ಅದರ ಅವಶ್ಯಕತೆ ಇಲ್ಲ' ಗುಹಾವಾಣಿ!

ಅಡುಗೆಮನೆಯಲ್ಲಿ ಏನೋ ಬಿದ್ದ ಶಬ್ಧ. ತಕ್ಷಣ ಎಚ್ಚರ ಆಯಿತು. ಹಾಳಾದ ನಿದ್ದೆ. ಬೀಳಬಾರದ ಕನಸುಗಳೆಲ್ಲ ಬೀಳ್ತವೆ. ಪತ್ರಿಕೆಗಳನ್ನು ಓದಿದ್ದರ ಫಲ ಇದು. ಅನುಭವಿಸಲೇಬೇಕು.

ಏನಾಗಿತ್ತು ಅಂದರೆ....

ಹಂದಿ ಜ್ವರ ವ್ಯಾಪಕವಾಗಿ ಹರಡುತ್ತಿತ್ತು. ನಮ್ಮ ಆರೋಗ್ಯ ಮಂತ್ರಿಗಳಿಗೇ ಅನಾರೋಗ್ಯ ಅಂತೆ. ಮಹಮದ್ ಬಿನ್ ತೊಘಲಕ್ ಅನ್ನೋನು ರಾಜಧಾನೀನ ದೆಹಲಿಯಿಂದ ದೇವಗಿರಿಗೆ ಬದಲಾಯಿಸಿಕೊಂಡಂತೆ ಈ ಸಾಹೇಬರು ತಮ್ಮ ಪೀಠವನ್ನ ಬೆಂಗಳೂರಿನಿಂದ ಬಳ್ಳಾರಿಗೆ ಬದಲಾಯಿಸಿಕೊಂಡಿದ್ದರು. ಇದು ಅನಧಿಕೃತವೇ ಇರಬಹುದು. ಇದರಿಂದ ಏನೂ ವ್ಯತ್ಯಾಸ ಕಂಡುಬರಲಿಲ್ಲ. ಇಲಾಖೆಯ ಕೆಲಸ ಕಾರ್ಯಗಳು ಸಲೀಸಾಗಿ ನಡೀತಾನೆ ಇದ್ದವು. ಇಲ್ಲಿದ್ದಾಗಲೂ ವಿಧಾನಸೌಧಕ್ಕೆ ಬರುತ್ತಿರಲಿಲ್ಲ. ಈಗಲೂ ಅಷ್ಟೆ. ಮಾಹಿತಿ ಸಂಪರ್ಕ ಜಾಲ ಎಷ್ಟು ಘನವಾಗಿ ಬೆಳೆದಿದೆ ಅಂದ್ರೆ, ಬೆರಳತುದಿಯಲ್ಲಿ ಬೇಕಾದ ಮಾಹಿತಿ ಸಿಗುತ್ತೆ. ಮಂತ್ರಿವರ್ಯರು ಬಳ್ಳಾರಿಯಿಂದಲೇ ಇಲಾಖೆಗೆ ಸಂಬಂಧಿಸಿದ ಮಾಹಿತಿ ಎಲ್ಲವನ್ನೂ ಪಡೆದು ಅಧಿಕಾರ ಚಲಾಯಿಸುತ್ತಿದ್ದರು. ಹಂದಿಜ್ವರ ಬಂದು ಯಾರೋ ಒಂದೆಂಟತ್ತು ಜನ ಸತ್ತರು ಅಂತ ತಮ್ಮ ರಾಜಧಾನಿ ಬದಲಾಯಿಸಿಕೊಳ್ಳಬೇಕಾ? ಅಲ್ಲಿಂದಲೇ ದಕ್ಷತೆ ಮೆರೀತೀನಿ ಅನ್ನೋದು ಅವರ ಅಭಿಮತ.



ಮಂತ್ರಿವರ್ಯರ 'ದಕ್ಷ ಆಡಳಿತ'ದ ಪರಿ ಸಿದ್ಧರಾಮಯ್ಯಗೆ ಹಿಡಿಸಲಿಲ್ಲ. ಅವರ ಕಾರ್ಯವೈಖರಿಯನ್ನು ಖಂಡಿಸಿದರು. ರಾಜೀನಾಮೆಗೆ ಆಗ್ರಹಿಸಿದರು.

ವಾಕ್ ಸಮರಕ್ಕೆ ನಾಂದಿ ಹಾಡಿದಂತಾಯಿತು.

ಸಿಡಿದೆದ್ದಿತ್ತು ರೆಡ್ಡಿ ಬಣ.

(ಗಾಳಿ ಎಂದರೆ ದೆವ್ವ ಅನ್ನುವ ಅರ್ಥವೂ ಇದೆ. ಹುಚ್ಚುಚ್ಚಾಗಿ ಕಿರುಚಾಡ್ತಾ ಇದ್ದರೆ 'ಅವನಿಗೆಲ್ಲೋ ಗಾಳಿ ಹಿಡ್ದದೆ' ಅಂತಾರೆ. ಜನಾರ್ದನ ರೆಡ್ಡಿ ಹೆಸರಿಗೆ ಮುನ್ನ 'ಜಿ' ಅಂತ ಇದೆ. ಹಂಗಂದರೆ 'ಗಾಲಿ'ನೋ 'ಗಾಳಿ'ನೋ ತಿಳಿಯದು ಅವರ ಮಾತಿನ ಆರ್ಭಟ ನೋಡಿದರೆ...)

'ಸಿದ್ದರಾಮಯ್ಯಗೆ ಹಂದಿ ಜ್ವರ ಬರಲಿ' ಶಪಿಸಿದರು ಜಿ.'

ಯಾಕೆ ಬರಬೇಕು ಹಂದಿ ಜ್ವರ?

ಶ್ರೀರಾಮುಲು ಅಂತಹ ಮುಗ್ಧ ವ್ಯಕ್ತಿಯನ್ನ

ಮಂತ್ರಿಯನ್ನ ರಾಜೀನಾಮೆ ಕೇಳಿದ್ದಕ್ಕೆ! ಟೀಕಿಸಿದ್ದಕ್ಕೆ!

ಹಂದಿಜ್ವರ ನಿಯಂತ್ರಣ ಮಂತ್ರಿಯ ಕೈಲಿ ಇ...

ಇನ್ನು ಯಾರ ಕೈಲಿ ಇದೆ?

ದೇವರ ಕೈಲಿ!

ನಿಯಂತ್ರಣ ಬೇಕಾದರೆ ದೇವರನ್ನು ಬೇಡಿಕೊ... ಮಂತ್ರಿವರ್ಯರನ್ನು ಟೀಕಿಸೀರಿ ಹುಷಾರ್!

ಇದು 'ಜಿ' ಎಚ್ಚರಿಕೆ.

ಸಿದ್ದರಾಮಯ್ಯನವರೆ ನಿಮಗೆ ಹಂದಿಜ್ವರ ಬ... ಇರಬೇಕಾದರೆ ಟೀಕಿಸುವುದನ್ನು ನಿಲ್ಲಿಸಿ ದೇವರನ್ನು ಪ್ರಾರ್ಥಿ...

ಏನೇ ಇರಲಿ. ಇದುವರೆವಿಗೂ ಶಾಪ ಫಲಿಸಿದಂ...

ಇದಕ್ಕೇನೆನ್ನುತ್ತಾರೆ ಸಿದ್ದರಾಮಯ್ಯ?

ಇತ್ತೀಚಿನ ಪತ್ರಿಕಾ ಭಾಷೆಯನ್ನು ಬಳಸುವುದಾ... 'ಸಿದ್ದರಾಮಯ್ಯ ತಿರುಗೇಟು'! ಆರೋಪಗಳ ಉತ್ತರ... ಪತ್ರಿಕಾ ಭೂಪರಿಗೆ 'ತಿರುಗೇಟು' ಆಗುತ್ತೆ!

'ತಿರುಗೇಟು'ಗೆ 'ತಿರುಗೇಟು' ಬರಬಹು...

'ಆ ರೆಡ್ಡಿ ಅನಾಗರೀಕ, ಅಸಂಸ್ಕೃತ'

ಅಸಂಸ್ಕೃತ ಅಂದರೆ ಸಂಸ್ಕೃತಕ್ಕೆ ಅವಮಾನ ಎಂದು ತಿಳಿದರೇನೋ ಭವಿಷ್ಯ ನುಡಿದರು-


'ಸಿದ್ದರಾಮಯ್ಯಗೆ ಕೇಡುಗಾಲ ಶುರು ಆ...

ಇಷ್ಟಕ್ಕೇ ನಿಲ್ಲಿಸಲಿಲ್ಲ. ಭಾಷೆಯೊ... ಸಿದ್ಧರಾಮಯ್ಯ ಗುತ್ತಿಗೆಯೇ? ನೀಡಿದ... ತಿರುಗೇಟು- 'ಸಿದ್ಧರಾಮಯ್ಯಗೆ ನೈತಿಕತೆ, ನಾ... ಇಲ್ಲ!'

ಒಬ್ಬ ಅನಾಗರಿಕ. ಇನ್ನೊ... ನಾಚಿಕೆಗೆಟ್ಟವನು. ಇದನ್ನು ಅವರವ... ಹೇಳ್ತಿದಾರೆ. 'ಅವರು ಗೂಂಡಾ ಆದರೆ ನಾ... ಗೂಂಡಾಗಳೆ' ಅಂತ ಮಂತ್ರಿವರ್ಯರಾದ 'ಜಿ' ಅ... ಅಪ್ಪಣೆ ಕೊಡಿಸಿದ್ದಾರೆ. ಇವರ ಸಹವಾಸವೇ ಬ... ಅಂತಿರೋರು ತೀರ್ಮಾನ ಹೇಳುವುದು ಹೇಗೆ? ಅದ... 'ಜಿ'ಯವರು ಮಾರ್ಗ ಸೂಚಿಸಿದ್ದಾರೆ. ಮಾಧ್ಯಮಗಳೆದು... ಬಿಜೆಪಿ ಬಣಕ್ಕೂ ಕಾಂಗ್ರೆಸ್ ಬಣಕ್ಕೂ ವಾಕ್ ಸ... ನಡೆಯಲಿ ಎಂದು. ನನ್ನದೊಂದು ನಮ್ರ ವಿನಂತಿ. ಮ... 'ಜಿ'ಯವರೆ, ತಾವು ತಾಕತ್ತಿದ್ದರೆ ಬನ್ನಿ ಎಂ... ಸವಾಲೆಸೆದಿದ್ದೀರಿ. ಇದು ಜನರಿಗೆ ಅಷ್ಟು ಮನರಂ... ನೀಡಲಾರದು. ಹೇಗಿದ್ದರೂ ನಾವು ಗೂಂಡಾಗಳೆ ಅ... ಹೇಳಿದ್ದೀರಿ.... ಎರಡೂ ಬಣದವರು ಲಾಂಗ್ ಹಿಡಿ... ಹೊಡೆದಾಟಕ್ಕೆ ನಿಂತರೆ..... ಶಾಸನಸಭೇನ ಬೀದಿಗೆ ತ... ಕೀರ್ತಿ ತಮಗೆ ಸಲ್ಲುತ್ತೆ. ಜನರಿಗೂ ಸಖತ್ ಮನರಂ... ಸಿಗುತ್ತೆ. ಏನಂತೀರಿ.....

# ಮರೆಯಲಾಗದಿರುವ ಸುಬ್ಬಯ್ಯನವರ ಕೊಡುಗೆ

ವಿಜಯ್ ಪೂಣಚ್ಚ ತಂಬಂಡ ಅವರ 'ಎ.ಕೆ. ಸುಬ್ಬಯ್ಯ-75' ಈ ಲೇಖನ ಹೋರಾಟಶೀಲನ ಬದುಕಿನ ಒಂದಷ್ಟು ಒಳ್ಳೆಯ ವಿವರಗಳನ್ನು ಕೊಟ್ಟಿದೆ. ಅವರ ಚಳವಳಿ ಹೋರಾಟಗಳ ಇನ್ನಷ್ಟು ವಿವರಗಳನ್ನು ಕಟ್ಟಿಕೊಟ್ಟಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಆದರೂ ತಂಬಂಡರಿಗೆ, ಪತ್ರಿಕೆಗೆ ಧನ್ಯವಾದಗಳನ್ನು ಹೇಳದೆ ಇರುವಂತಿಲ್ಲ.



ಆದರೆ ಎಲ್ಲ ವಿವರಗಳಿಗಿಂತಲೂ ನನ್ನ ದೃಷ್ಟಿಯಲ್ಲಿ ಸಂಘಪರಿವಾರದ ಫ್ಯಾಸಿಸ್ಟರು 1992 ರ ಡಿಸೆಂಬರ್ 6 ರಂದು ಬಾಬರಿ ಮಸೀದಿಯನ್ನು ಉರುಳಿಸಿ ದೇಶದ ಇಡೀ ಜನಮಾನಸದ ಮೇಲೆಯೇ ಬರ್ಬರ ಅತ್ಯಾಚಾರ ಮಾಡಿಬಿಟ್ಟರಲ್ಲ, ಆಗ ಎ.ಕೆ. ಸುಬ್ಬಯ್ಯನವರು ಹಾಗೂ ನಮ್ಮ ಕರ್ನಾಟಕದ ಮತ್ತೊಬ್ಬ ಗೌರವಾರ್ಹ ಹಿರಿಯರಾದ ಕೋ. ಚೆನ್ನಬಸಪ್ಪನವರು ಕೂಡಿಕೊಂಡು, ಸುಮಾರು ಮೂರ್‍ನಾಲ್ಕು ತಿಂಗಳ ಕಾಲ ಇಡೀ ರಾಜ್ಯ ಸುತ್ತಿ, ಸೌಹಾರ್ದ ಬದುಕನ್ನು ಪ್ರತಿಪಾದಿಸಿ ಜನಜಾಗೃತಿಗೆ ಪ್ರಯತ್ನಿಸಿದರು. ಅದನ್ನು ಕರ್ನಾಟಕದ ಜನರಷ್ಟೇ ಅಲ್ಲ, ಇಡೀ ದೇಶದ ಸೌಹಾರ್ದ ಪ್ರಿಯರ್‍ಯಾರೂ ಮರೆಯುವಂತಿಲ್ಲ, ಕೃತಜ್ಞತೆಯಿಂದ ಸ್ಮರಿಸದೆ ಇರುವಂತಿಲ್ಲ.

ಪ್ರತಿ ಶನಿವಾರ-ಭಾನುವಾರ ಈ ಇಬ್ಬರು ದಿಟ್ಟರು ರಾಜ್ಯದ ಒಂದಲ್ಲ ಒಂದು ಭಾಗದಲ್ಲಿ ನಾಲ್ಕಾರಾದರೂ ದೊಡ್ಡದೊಡ್ಡ ಬಹಿರಂಗ ಬೀದಿ ಸಭೆಗಳನ್ನು ನಡೆಸುತ್ತಿದ್ದರು. ಇಡೀ ರಾಜ್ಯದ, ದೇಶದ ಪ್ರಜ್ಞಾವಂತ, ಸೌಹಾರ್ದಪ್ರಿಯ ಸಮುದಾಯದವರೆಲ್ಲ (ನಾವೆಲ್ಲಾ) ಏನು ಮಾಡುವುದೆಂದು ತಿಳಿಯದೆ, ಫ್ಯಾಸಿಸ್ಟರೆದುರು ಸದ್ಯ ಏನೂ ಮಾಡಲು ಸಾಧ್ಯವಿಲ್ಲ ಎಂತಲೇ ಅಂದುಕೊಳ್ಳುತ್ತಾ, ಆದರೆ ಪೃಚ್ಛೆ-ಮನಸ್ಸುಗಳಿಗಾದ ವರ್ಣಿಸಲಾಗದ ಘಾಸಿಯಿಂದ ತೊಳಲಾಡುತ್ತಿದ್ದಾಗ ಈ ಇಬ್ಬರು ಹಿರಿಯರು ನಮ್ಮೆಲ್ಲರ ಭಾವನೆಗಳನ್ನೂ ಪ್ರತಿಭಟನೆಯನ್ನೂ ಬೀದಿಗೆ ತರಲು ಮಾರ್ಗ ತೆರೆದು ನಾಯಕತ್ವ ವಹಿಸಿದರು. ಯಾವ್ಯಾವ ಊರಿನಲ್ಲಿ ಯಾರದೋ ಒಬ್ಬಿಬ್ಬರು ಪ್ರಜ್ಞಾವಂತರ ಪರಿಚಯವಿರುತ್ತಿತ್ತೋ ಅವರನ್ನು ಸಂಪರ್ಕಿಸಿ ಸಭೆ ಏರ್ಪಡಿಸುವಂತೆ ಧೈರ್ಯ, ಮಾರ್ಗದರ್ಶನ ಕೊಟ್ಟು ಇವರುಗಳು ಅಲ್ಲಿಗೆ ತೆರಳಿ ಬಹಳ ಮನಮುಟ್ಟುವಂತೆ, ಅಷ್ಟೇ ವಿಚಾರಪ್ರಚೋದಕವಾಗಿ ಜನರೊಂದಿಗೆ ಸಂವಾದ ನಡೆಸಿದರು. (ಮುಂದೆ ಮುಂದೆ ಆಸಕ್ತರೇ ಸಭೆ ಏರ್ಪಾಡು ಮಾಡಿ ಇವರನ್ನು ಸಂಪರ್ಕಿಸುವುದು ನಡೆಯುತ್ತಾ ಇದೊಂದು ಚೈನ್ ಆಕ್ಷನ್ ಆಗಿ ಬೆಳೆಕೊಂಡು ಹೋಯ್ತು) ಸ್ಥಳೀಯ ಪ್ರಜ್ಞಾವಂತರು ಈ ಅವಕಾಶವನ್ನು ಸದುಪಯೋಗ ಮಾಡಿಕೊಂಡು, ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಆದಷ್ಟೂ ಜನಾಭಿಪ್ರಾಯ ರೂಪಿಸುವ ಈ ಕ್ರಿಯೆಗೆ ತಾವೂ ಕೈಗೂಡಿಸಿದರು (ದೆವ್ವ).

ಈ ವಿಚಾರವನ್ನು ಹೇಳದಿದ್ದರೆ ಸುಬ್ಬಯ್ಯನವರ ದಿಟ್ಟ ನಿಲುವಿನ, ಹೋರಾಟದ ಬದುಕಿನ ಚಿತ್ರಣ ಪೂರ್ಣವಾಗುವುದಿಲ್ಲ ಎಂದೇ ನನ್ನ ಅನಿಸಿಕೆ.

-ನಾರಾಯಣ್, ಬೆಂಗಳೂರು

## ಹೊಗಳಿಕೆ ತೆಗಳಿಕೆ

ಆಗಸ್ಟ್ 26, 2009 ರ ಸಂಚಿಕೆಯ ತಮ್ಮ ಸಂಪಾದಕೀಯ 'ನ್ಯಾಯಾಂಗದಲ್ಲಿ ಮಾತ್ರ ಭರವಸೆ ಉಳಿದಿರುವಾಗ.....' ಬಗ್ಗೆ ಒಂದು ವೈಯಕ್ತಿಕ/ಪೂರಕ ನಿಲುವನ್ನು ಮಾಧ್ಯಮರಂಗದ ಸಾಮಾಜಿಕ ಬದ್ಧತೆಯ ಮತ್ತು ಸದ್ವರ್ತನೆಯ ನೆಲೆಗಳಲ್ಲಿ ವ್ಯಕ್ತಪಡಿಸುತ್ತಿದ್ದೇನೆ.

ವಸ್ತುನಿಷ್ಠತೆ (objectivity) ಅನ್ನುವುದು ಅತಿ ಸೂಕ್ಷ್ಮವಾದುದು. ಗ್ರಹಿಕೆಯ ಸಂದರ್ಭದಲ್ಲಿ ಕೊಂಚ ವ್ಯತ್ಯಾಸವಾದರೂ ಅಪಾರ್ಥವಾಗುವ ಸಾಧ್ಯತೆಯಿದೆ. ಇವೆಲ್ಲ ಮಾನವ ಸಹಜವಾದವು. ತಮ್ಮ ಪತ್ರಿಕೆಯ ವಾಸ್ತವ ಉದ್ದೇಶ ಮತ್ತು ಸದಾಶಯವನ್ನು ಸ್ಥಿತ ಪ್ರಜ್ಞತೆಯಿಂದ ಅರ್ಥ ಮಾಡಿಕೊಂಡಾಗ ಸತ್ಯದ ದರ್ಶನವಾಗುವುದು... ಆ ವರದಿ ತೆರೆದ ಮನಸ್ಸಲ್ಲಿ ಗ್ರಹೀತವಾದಾಗ......

ಬದ್ಧತೆ-ಸಮಾನಮನಸ್ಕತೆ-ಕ್ರಿಯಾಶೀಲವಾದ ಒಳಗೊಳ್ಳುವಿಕೆ ಇವೆಲ್ಲ ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಕ್ರಿಯಾರಂಗದಲ್ಲಿ ಆತ್ಮವಿಮರ್ಶೆ ಬಹುದೊಡ್ಡ ಸದ್ಗುಣ. ಆ ಕಾರಣದಿಂದಲೇ ಗ್ರೀಕ್ ದಾರ್ಶನಿಕ ಸಾಕ್ರಟೀಸ್ 'ಆತ್ಮವಿಮರ್ಶೆಯಿಲ್ಲದ ಜೀವನ ಬಾಳಲು ಯೋಗ್ಯವಲ್ಲ' ಎಂದಿರುವುದು.


ನೈತಿಕತೆ ಮರೀಚಿಕೆಯಾಗಿ ಗೋಚರಿಸುತ್ತಿರುವ ಈ ದಿನಗಳಲ್ಲಿ ಎಲ್ಲರೂ ಸ್ವಇಚ್ಛೆಯಿಂದ ನೀತಿಸಂಹಿತೆಯನ್ನು ಅಳವಡಿಸಿಕೊಂಡರೆ ಜಗತ್ತು ಎಷ್ಟು ಸುಂದರವಾಗಬಲ್ಲದು, ಅಲ್ಲವೇ?...

ನ್ಯಾಯಾಂಗದಲ್ಲಿ ಮಾತ್ರ ಭರವಸೆ ಉಳಿದಿರುವಾಗ... ನಮ್ಮ ಸಮಗ್ರ ವ್ಯವಸ್ಥೆಯ ವಿಮರ್ಶೆ ಈ ಒಂದು ವಾಕ್ಯದಲ್ಲಿ ಅಡಗಿರುವಾಗ, ಜನಪರ ನಿಲುವಿನ ಮಾನ್ಯ ನ್ಯಾಯಮೂರ್ತಿ ಮೋಹನ ಶಾಂತನಗೌಡರ್ ಅವರ ಪಾತ್ರವೂ ಅತಿ ಮುಖ್ಯವಾದದ್ದು ಎಂಬ ನಂಬಿಕೆ, ನಾವೆಲ್ಲ ಅವರ ವ್ಯಕ್ತಿತ್ವದ ಮೇಲಿಟ್ಟ ಗೌರವಯುತ ನಂಬಿಕೆ.

ತಮ್ಮ ವೈಯಕ್ತಿಕ ನಿಲುವನ್ನು ಪ್ರಸ್ತಾಪಿಸುವುದರೊಂದಿಗೆ ಪತ್ರಿಕಾಧರ್ಮವನ್ನು ಮತ್ತು ಸದ್ವರ್ತನೆಯನ್ನು ಏಕಕಾಲದಲ್ಲಿ ತೆರೆದಿಟ್ಟಿದ್ದೀರಿ. ಇದು 'ಲಂಕೇಶ್' ಪರಂಪರೆ. ಒಂದು ಪುಟ್ಟ ಪತ್ರಿಕೆಯ ಉನ್ನತ ಧ್ಯೇಯಗಳಲ್ಲಿ ನಾವು ಸದಾ ಒಂದಾಗಿರುತ್ತೇವೆ.

True happiness comes from
doing what's right not
just doing what makes
you feel good.

-ವಿದ್ಯಾಧರ ರೈ. ಎಂ.ಆರ್., ಮಡಿಕೇರಿ



# ಮಾತು ಮಂಥನದಲ್ಲಿ ಹಂಸ ಚರಿತೆ

...ರಿಂದು ಹಂಸಲೇಖ ಅವರು ಮಾತು ಮುಗಿಸಿ ಕೈಗಡಿಯಾರ ನೋಡಿದಾಗ ಸುಮಾರು ...ೂವರೆ ಗಂಟೆ ಆಗಿಹೋಗಿತ್ತು. ಇದು ನಡೆದದ್ದು ಸಿನಿಮಾ ಪತ್ರಕರ್ತರ ಮಾತುಮಂಥನ ...ಕ್ರಮದಲ್ಲಿ. ಸಾಧಾರಣವಾಗಿ ಅತಿಥಿಗಳಿಗೆ ಮಾತನಾಡಲು ಒಂದು ಗಂಟೆಯ ಕಾಲಾವಕಾಶ ...ತ್ತದೆ. ಆದರೆ ಹಂಸ್ ಎರಡೂವರೆ ಗಂಟೆ ನಿರರ್ಗಳವಾಗಿ ಮಾತನಾಡಿದ್ದರಿಂದ ಒಂದು ...ಾ ನೋಡಿದ ಅನುಭವವಾಯಿತು. ಯಾಕೆಂದರೆ ಅವರ ಮಾತಿನಲ್ಲಿ ಹಾಸ್ಯ ಹಾಡು, ನಗು, ... ದ್ವೇಷ, ಬಂಡಾಯ ಎಲ್ಲವೂ ಮೇಳೈಸಿತ್ತು.

...ಾಗೆ ನೋಡಿದರೆ ಹಂಸಲೇಖ ತನ್ನ ಬಾಲ್ಯ-ಹುಟ್ಟು-ನಾಟಕ-ಅಲೆಮಾರಿತನ ಮತ್ತು ಸಿನಿಮಾಕ್ಕೆ ...ಯಾದ ವಿಷಯದತನಕ ಮಾತ್ರ ಮಾತನಾಡಿದರು. 'ಪ್ರೇಮಲೋಕ' ಸಿನಿಮಾದಿಂದ ಮುಂದೆ ... ಮಾತುಗಳು ಸಾಗಲೇ ಇಲ್ಲ. ಅವರ ಮಾತಿನ ಸಾರಾಂಶ ಹೀಗಿದೆ: ಅವರು ತಮ್ಮ ...ಅಮ್ಮರಿಗೆ ಹುಟ್ಟಿದ 13ನೇ ಮಗು. "ಅಪ್ಪ-ಅಮ್ಮಂಗೆ ಸ್ವಲ್ಪ ಬೇಸರವಾಗಿದ್ದರೂ ನಾನು ...ಫಿಲ್ಮ್ ಇಂಡಸ್ಟ್ರಿಗೆ ದೊರಕುತ್ತಿರಲಿಲ್ಲ" ಎಂದು ತನ್ನ ಹುಟ್ಟಿನ ಬಗ್ಗೆ ಹಾಸ್ಯ ಚಟಾಕಿ ಹಾರಿಸಿದರು. ...ನಾನು ಹುಟ್ಟಿದ ಘಳಿಗೆ ತುಂಬಾ ಕೆಟ್ಟದ್ದಾಗಿತ್ತಂತೆ. ಅದು ಯಮಗಂಡ ಕಾಲವಂತೆ. ...ುದೇ ಕಾರಣಕ್ಕೆ ನಾನು ಬದುಕಿರಲು ಸಾಧ್ಯವೇ ಇರಲಿಲ್ಲ ಎಂಬುದೇ ಅನೇಕ ಜ್ಯೋತಿಷಿಗಳ ...ಾಯವಾಗಿತ್ತಂತೆ. ಆದರೆ ಅವೆಲ್ಲವನ್ನೂ ಸುಳ್ಳು ಮಾಡಿ ನಾನಿನ್ನೂ ನಿಮ್ಮ ಮುಂದೆ ನಿಂತಿದ್ದೇನೆ" ... ಹಂಸಲೇಖ ನುಡಿದರು. ಅವರ ಮಾತಿನ ಒಳಾರ್ಥ ಅವರು ಹುಟ್ಟು ಬಂಡುಕೋರರು ...



ಹಂಸಲೇಖ ಅವರೇ ಹೇಳುವಂತೆ ಏಳನೇ ವಯಸ್ಸಿಗೆಲ್ಲಾ ಅವರು ಬಾಲಪ್ರತಿಭೆಯಾಗಿ ಹೊರಹೊಮ್ಮಿದರಂತೆ. ಆಗಲೇ ಹಂಸಲೇಖ ಮೂರುನಾಲ್ಕು ವಾದ್ಯಗಳನ್ನು ನುಡಿಸಲು ಕಲಿತಿದ್ದರು. ಪಾಶ್ಚಾತ್ಯ ಮತ್ತು ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದ್ದರು.

ಅನಂತರ ಏಳನೇ ತರಗತಿಯಲ್ಲಿದ್ದಾಗ 'ಹಂಸಲೇಖನಿ' ಕಾವ್ಯನಾಮದಲ್ಲಿ ನಾಟಕವೊಂದನ್ನು ಬರೆದು ನಿರ್ದೇಶಿಸಿ ಹಲವಾರು ಪ್ರಶಸ್ತಿಗಳನ್ನು ಪಡೆದು ಮೆಚ್ಚುಗೆ ಪಡೆದಿದ್ದರು. ಆಗ ಅವರ ಮೇಷ್ಟ್ರು 'ಹಂಸಲೇಖನಿ' ಬದಲು 'ಹಂಸಲೇಖ' ... ಕಾವ್ಯನಾಮವನ್ನು ಪುನರ್‌ನಾಮಕರಣ ಮಾಡಿದರು. ಅದಾದನಂತರ ಹಂಸಲೇಖ ಜೀವನ ...ೊಂದು ಘಟ್ಟ ತಲುಪಿತು.

...ಅವರು ತನ್ನ ಸಹೋದರ ಬಾಲಕೃಷ್ಣ ಜೊತೆ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮೊಳೆಗಳನ್ನು ಜೋಡಿಸುವ ...ದಲ್ಲಿ ತೊಡಗಿಸಿಕೊಂಡರು. ಆ ಸಂದರ್ಭದಲ್ಲಿ ಅನೇಕ ತೆಲುಗು ಮತ್ತು ಕನ್ನಡದ ಶ್ರೇಷ್ಠ ...ಕ ಕೃತಿಗಳಿಗೆ ಮೊಳೆ ಜೋಡಿಸುತ್ತಾ ಅಕ್ಷರಜ್ಞಾನ ಮತ್ತು ಪ್ರೀತಿಯನ್ನು ಬೆಳೆಸಿಕೊಂಡರು.

...ಅದೇ ಸಂದರ್ಭದಲ್ಲಿ ನಾಟಕ ಗೀಳು ಹೆಚ್ಚು ಅಂಟಿಸಿಕೊಂಡ ಹಂಸಲೇಖ ಹಳ್ಳಿಗಳಲ್ಲಿ ...ವಾಡುತ್ತಾ ಅನೇಕ ರಾತ್ರಿಗಳನ್ನು ಆರಾಮವಾಗಿ ಕಳೆಯುತ್ತಿದ್ದರು. ಇಂತಹ ಅಲೆಮಾರಿತನದ ...ಲ್ಲೇ "ನಾವು ಯಾಕೆ ಕಾರ್ನಾಡ್ ಮತ್ತು ಕಾರಂತ್‌ರಂತೆ ಕಲಾಕ್ಷೇತ್ರದಲ್ಲಿ ನಾಟಕವಾಡಬಾರದು?" ...ನಿಸಿತಂತೆ. ಅದರ ಫಲವಾಗಿಯೇ ಚಂದ್ರಶೇಖರ್ ಕಂಬಾರರ 'ಜೋಕುಮಾರಸ್ವಾಮಿ' ನಾಟಕ ... ಬತ್ತಳಿಕೆಯಿಂದ ಹೊರಬಂತು. ಆ ನಾಟಕದಲ್ಲಿ ದೇವರನ್ನು ಅವಾಚ್ಯ ಶಬ್ದಗಳಿಂದ ಪ್ರಶ್ನಿಸುವ, ...ವ ದೃಶ್ಯದಿಂದಾಗಿ ಅವರ ನಾಟಕ ವಿವಾದಕ್ಕೂ ಒಳಗಾಯಿತು. ಆದರೂ ರಾಜ್ಯಾದ್ಯಂತ ...ಕ ಪ್ರದರ್ಶನವಾಗಿ ಏಕಕಾಲದಲ್ಲಿ ಜನರ ಮೆಚ್ಚುಗೆ ಮತ್ತು ಆಕ್ರೋಶಕ್ಕೆ ಒಳಗಾಯಿತು. ಇಲ್ಲೂ ... ಅವರ ಬಂಡಾಯ ಪ್ರವೃತ್ತಿ ಅವರಿಗೆ ಹೊಸ ಇಮೇಜ್ ತಂದುಕೊಟ್ಟಿತ್ತು.

...ಅದಾದನಂತರ ಎನ್.ಎಸ್.ರಾವ್ ಅವರ ಮುಖಾಂತರ ಹಂಸಲೇಖ ಅವರು ರವಿಚಂದ್ರನ್‌ರವರ ... ವೀರಾಸ್ವಾಮಿಯವರಿಗೆ ಪರಿಚಯವಾದರು. "ನಾನು ಸಿನಿಮಾ ಲೋಕಕ್ಕೆ ಬಂದದ್ದು ದೊಡ್ಡ ...ಾಗಬೇಕೆಂದು. ಆದರೆ ಆಗ ಕನ್ನಡ ಚಿತ್ರೋದ್ಯಮದಲ್ಲಿ ಒಂದು ದೊಡ್ಡ ನಿರ್ವಾಣ ಪರಿಸ್ಥಿತಿ ...ದರಿಂದ ಅನಿವಾರ್ಯವಾಗಿ ಗೀತರಚನಾಕಾರ ಮತ್ತು ಸಂಗೀತ ನಿರ್ದೇಶಕನಾದೆ" ಎಂದು ...ಲೇಖ ಚಿತ್ರರಂಗಕ್ಕೆ ಬಂದ ಬಗ್ಗೆ ವಿವರಿಸಿದರು.

...ತನ್ನ ಸಂಗೀತ ನಿರ್ದೇಶನದ 'ಪ್ರೇಮಲೋಕ' ಚಿತ್ರದ ಮುಖಾಂತರ ಹಂಸಲೇಖ ಮತ್ತೊಮ್ಮೆ ...ಂಡಾಯದ ಹವ್ಯಾಸವನ್ನು ಮುಂದುವರೆಸಿದರು. ಅಲ್ಲಿತನಕ ಬಾನು, ಬೆಳದಿಂಗಳು... ಮೊದಲಾದ ...ಂಜಗಳಿಂದಲೇ ಹಾಡುಗಳು ರಚಿತವಾಗುತ್ತಿದ್ದವು. ಹಂಸಲೇಖ ಕಾಲಿಡುತ್ತಲೇ ಸರಳವಾದ ...ನ್ನು ಬಳಸಿ ಜನಸಾಮಾನ್ಯರಿಗೆ ಅರ್ಥವಾಗುವ ಆಡುಭಾಷೆಗಳಲ್ಲಿ ಗೀತರಚನೆ ಕೈಗೆತ್ತಿಕೊಂಡು ...ಯರಾದರು. ಅದಕ್ಕೆ ಅವರು ನೀಡುವ ಕಾರಣ: ದೊಡ್ಡ ದೊಡ್ಡ ಶಬ್ದಗಳನ್ನು ಬಳಸಿದರೆ ...ದ್ರನ್ ಅವರಿಗೆ ಅರ್ಥವಾಗುತ್ತಿರಲಿಲ್ಲವಂತೆ! ಆ ಕಾರಣಕ್ಕೆ ಅವರು ಸರಳಭಾಷೆಯನ್ನೇ ...ಬಳಸುತ್ತಾ ಹೊರಟರಂತೆ....

...ಾಗೆ ನೋಡಿದರೆ 'ಪ್ರೇಮಲೋಕ'ಕ್ಕಿಂತ ಮೊದಲು 'ತ್ರಿವೇಣಿ' ಎಂಬ ಚಿತ್ರದಲ್ಲಿ 'ನೀನಾ.... ...ತಾ...' ಎಂದು ದೇವರನ್ನು ಮೂದಲಿಸುತ್ತಾ ಮೊದಲ ಹಾಡು ಬರೆದು ಚಿತ್ರರಂಗಕ್ಕೆ ...ದ್ದರು. ವಿಶೇಷವೆಂದರೆ ಈ ಹಾಡನ್ನು ಹಾಡಿದ್ದು ಅವರ ಸಹೋದರ ಬಾಲಕೃಷ್ಣ.

...ಗೆ ಅಂದು ಹಂಸಲೇಖ ಚಿತ್ರರಂಗಕ್ಕೆ ಬರುವ ಮೊದಲಿನ ತನ್ನ ದಿನಗಳನ್ನು ಸವಿವರವಾಗಿ ...ುತ್ತಾ ಹೋದರು. 'ಪ್ರೇಮಲೋಕ' ಚಿತ್ರದ ನಂತರ ಸುಮಾರು ಹತ್ತು ವರ್ಷಗಳ ಕಾಲ ...ಲೇಖ ಕನ್ನಡ ಚಿತ್ರರಂಗವನ್ನು ರಾಜನಂತೆ ಆಳಿದ್ದು ಈಗ ಇತಿಹಾಸ. ಅಂತಹ ಹಂಸಲೇಖ ...ಗೆ ಹೊಸಬರ ಆಗಮನದಿಂದ ಮೂಲೆಗುಂಪಾದದ್ದು ಕೂಡಾ ಒಂದು ಇತಿಹಾಸ. ಆದರೂ ...ಲೇಖ ಕನ್ನಡ ಚಿತ್ರರಂಗ ಕಂಡ ಅತ್ಯಂತ ಪ್ರತಿಭಾವಂತ ಗೀತರಚನಾಕಾರ ಮತ್ತು ಸುಗಮಗೀತೆ ...ಶಕ ಎಂದರೆ ತಪ್ಪಾಗಲಾರದು. ನಿಂತ ನೀರಾಗಿಹೋಗಿದ್ದ ಕನ್ನಡ ಸಂಗೀತ ಲೋಕಕ್ಕೆ ಒಂದು ... ಆಯಾಮವನ್ನು ನೀಡಿದ ಹಂಸಲೇಖ ತನ್ನ ಬರಹ ಮತ್ತು ಟ್ಯೂನ್‌ಗಳಿಂದ ಕನ್ನಡಿಗರಿಗೆ ... ಅನುಭವ ನೀಡಿದರು. ಮತ್ತೆ ಅವರ ಬಂಡಾಯ ಪ್ರವೃತ್ತಿ ಜಾಗೃತವಾದ ಕಾರಣದಿಂದಲೋ ... ಹಂಸಲೇಖ ಸಿನಿಮಾ ಜಗತ್ತಿನಿಂದ ಸ್ವಲ್ಪ ದೂರ ಹೋಗಿ, ಈಗ ಶೈಕ್ಷಣಿಕ ರಂಗಕ್ಕೆ ಕಾಲಿಟ್ಟು ... ಕಲಾ ಮತ್ತು ಪ್ರದರ್ಶನ ಶಾಲೆಯನ್ನು ಆರಂಭಿಸಿದ್ದಾರೆ. ಹಂಸಲೇಖ ಬತ್ತಳಿಕೆಯಲ್ಲಿ ಇನ್ನೇನು ...ಯೋ ಗೊತ್ತಿಲ್ಲ...

● ಶೆಣೈ





## ಹಳೆಯ ನಂಟು–ಖಾರದಪುಡಿ (ಹರಿಶ್ಚಂದ್ರ) ಘಾಟು!

ಬಿಪಿ ಜೊತೆ ಈಗ ಆರ್ಬಿ ಸೇರಿಕೊಂಡಿದ್ದಾರೆ. ಯಾವ ಬಿಪಿ, ಇದ್ಯಾವ ಆರ್ಬಿ ಎಂದು ಕನ್‌ಫ್ಯೂಸ್ ಆಗಬೇಡಿ!

'ಮುಸ್ಸಂಜೆ ಗೆಳತಿ' ಕುಖ್ಯಾತಿಯ ಬಿ.ಪಿ.ಶ್ರೀನಿವಾಸ್ ನಿರ್ದೇಶಿಸುತ್ತಿರುವ ಹೊಸ ಚಿತ್ರ 'ಹರಿಶ್ಚಂದ್ರ ಘಾಟ್'ನಲ್ಲಿ ಪತ್ರಕರ್ತ ರವಿ ಬೆಳಗೆರೆ ನಟಿಸುವ ಮೂಲಕ ಮತ್ತೊಮ್ಮೆ ಮುಖಕ್ಕೆ ಬಣ್ಣ ಹಚ್ಚಿದ್ದಾರೆ. 'ವಾರಸ್ದಾರ' ಚಿತ್ರದಿಂದ ನಟನಾವೃತ್ತಿಗೂ ಕಾಲಿಟ್ಟ ಬೆಳಗೆರೆ ನಂತರ ರವಿ ಶ್ರೀವತ್ಸ ನಿರ್ದೇಶಿಸಿದ್ದ 'ಮಾದೇಶ' ಚಿತ್ರದಲ್ಲೂ ನಟಿಸಿದ್ದರು. 'ಮಾದೇಶ' ಚಿತ್ರ ಎಷ್ಟೇ ದರಿದ್ರವಾಗಿದ್ದರೂ ರವಿ ಬೆಳಗೆರೆ ಅವರ 'ಕಾಮಿಕ್ ವಿಲನ್' ಪಾತ್ರ ಮಾತ್ರ ವೈನಾಗಿತ್ತು!

'ಹೃದಯಗಳಾ ವಿಷಯ' ಎಂಬ ಚಿತ್ರದಲ್ಲಿ ಬೆಳಗೆರೆ ನಟಿಸುತ್ತಾರೆಂಬ ಮಾತು ಕೇಳಿಬಂದಿತ್ತು, ಆದರೆ ಅದೇನು ಸಮಸ್ಯೆಯೋ, ಬೆಳಗೆರೆ ಆ ಚಿತ್ರದಲ್ಲಿ ನಟಿಸುವುದಕ್ಕೆ ಹಿಂದೇಟು ಹಾಕಿದ್ದರು. ಕಳೆದೊಂದು ವರ್ಷದಿಂದ ಯಾವ ಸಿನಿಮಾದಲ್ಲೂ ಮುಖ ತೋರಿಸದೆ ಸೈಲೆಂಟಾಗಿದ್ದ ಬೆಳಗೆರೆ ಈಗ ಶ್ರೀನಿವಾಸನ 'ಹರಿಶ್ಚಂದ್ರ ಘಾಟ್'ನಲ್ಲಿ ಹೆಂಡತಿಯನ್ನು ಕಳಕೊಂಡ ವಿಧುರನ ಪಾತ್ರದಲ್ಲಿ ಕಾಣಿಸುತ್ತಿದ್ದಾರಂತೆ. ಶ್ರೀನಿವಾಸ್ ಮತ್ತು ಬೆಳಗೆರೆ ಹಳೆಯ ಸ್ನೇಹಿತರು ಮಾತ್ರವಲ್ಲದೆ, ಈ ಚಿತ್ರದ ವಿಧುರನ ಪಾತ್ರವನ್ನು ಬೆಳಗೆರೆ ಹೊರತಾಗಿ ಯಾರಿಂದಲೂ ನಿರ್ವಹಿಸಲು ಸಾಧ್ಯವಿಲ್ಲ ಎನ್ನುತ್ತಿದ್ದಾನೆ ಬಿಪಿ. ಹೀಗಾಗಿ ಬೆಳಗೆರೆಯನ್ನು ಒಪ್ಪಿಸಿ ಹರಿಶ್ಚಂದ್ರ ಘಾಟಿಗೆ 'ಕರೆ ತಂದಿದ್ದಾರೆ' ಖಾರದ ಪುಡಿ ಶ್ರೀನಿವಾಸು!

## 81ರ ಅಜ್ಜನ 18ರ ಮನಸ್ಸು!




ಮೊನ್ನೆ 16ರಂದು 81ರ ಪುಟ್ಟ ಹುಡುಗನ ಹುಟ್ಟುಹಬ್ಬ ಅದ್ದೂರಿಯಾಗಿ ನಡೆಯಿತು. ಹಾಗೆ ಆಡಿ ಕುಣಿವ ಪೋರನಂತೆ ಬರ್ತ್‌ಡೇ ಸೆಲಬರೇಟ್ ಮಾಡಿಕೊಂಡವರು ಸಕಲ ಪುರಾತನ ಪತ್ರಕರ್ತ, ರಂಗನಿರ್ದೇಶಕ, ನಟ.... ಹೀಗೆ ಬಹಳಷ್ಟು ಬಿರುದಾಂಕಿತರಾದ ಎ.ಎಸ್.ಮೂರ್ತಿ.

ಅಭಿನಯ ತರಂಗ ಎಂಬ ನಟನಾ ಶಾಲೆಯಿಂದ ಪ್ರತೀವರ್ಷ ಚಿತ್ರರಂಗಕ್ಕೆ ಹತ್ತಾರು ಪ್ರತಿಭೆಗಳನ್ನು ಧಾರೆಯೆರೆಯುವ ಮೂರ್ತಿ ಇಂದಿಗೂ ಸಿನಿಮಾ ಮಂದಿ ನಡೆಸುವ ಪತ್ರಿಕಾಗೋಷ್ಠಿಗಳಿಗೆ ಹಾಜರಾಗಿ ವೇದಿಕೆಯಲ್ಲಿರುವವರ ಕಾಲೆಳೆಯುತ್ತಾ ಕೆಲವೊಮ್ಮೆ ತಮ್ಮವರನ್ನೇ ಛೇಡಿಸುತ್ತಾ ಎಂಜಾಯ್ ಮಾಡುತ್ತಾರೆ.

ದೇಹಕ್ಕೆ ವಯಸ್ಸಾದಂತೆ ಮನಸ್ಸು ಕುಂಠಿತವಾಗುತ್ತದೆ, ಬುದ್ಧಿ ಮಂದವಾಗುತ್ತದೆ. ಆದರೆ ಮೂರ್ತಿಗಳ ವಿಷಯದಲ್ಲಿ ಅದು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ. ಯಾಕೆಂದರೆ ಈ ಅಜ್ಜನಿಗೆ ವಯಸ್ಸು ಎಂಭತ್ತೊಂದಾದರೂ ಮನಸ್ಸು ಮಾತ್ರ ಹದಿನೆಂಟರಲ್ಲೇ ಇದೆ!

ಈ ತರುಣ ಅಜ್ಜನ ಕೀಟಲೆ, ಕಿತಾಪತಿಗಳು ಇನ್ನಷ್ಟು ಕಾಲ ಹೀಗೇ ಮುಂದುವರೆಯಲಿ!!

## ಲಾಭ–ನಷ್ಟದ ಲೆಕ್ಕಾಚಾರದಲ್ಲಿ...



'ಎದ್ದೇಳು ಮಂಜುನಾಥ' ಚಿತ್ರದ ಯಶಸ್ಸು ಅದರ ನಿರ್ಮಾಪಕ ಸನತ್ ಕುಮಾರ ಮತ್ತು ನಿರ್ದೇಶಕ ಗುರುಪ್ರಸಾದ್ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸಿದೆ.

"ಈ ಚಿತ್ರ ಐವತ್ತನೇ ದಿನ ತಲುಪಿದಾಗ ಉದ್ಯಮದ ಕಲಾವಿದರಿಗಾಗಿ ನಾನೊಂದು ವಿಶೇಷ ಶೋ ಏರ್ಪಡಿಸುತ್ತೇನೆ" ಎನ್ನುತ್ತಾರೆ ಗುರುಪ್ರಸಾದ್. ಆದರೆ "ಆ ಶೋ ಏರ್ಪಡಿಸಲು ಅವರಿಗೆ ಪ್ರಿಂಟ್ ಯಾರು ಕೊಡುತ್ತಾರಂತೆ?" ಎಂದು ಕೇಳುತ್ತಾರೆ ಸನತ್‌ಕುಮಾರ್. ಹೀಗಿದೆ ಸದ್ಯಕ್ಕೆ ಅವರ ಜಗಳ.

ಒಟ್ಟಾರೆ ಈ ಚಿತ್ರದ ಯಶಸ್ಸಿನಿಂದ ನಿರ್ದೇಶಕ ಗುರುಪ್ರಸಾದ್ ಅವರಿಗೆ ಸಾಕಷ್ಟು ಲಾಭವಾಗಿದೆ. ಯಾಕೆಂದರೆ ಸದ್ಯಕ್ಕೆ ಅವರಿಗೆ ಹಲವಾರು ನಿರ್ದೇಶನದ ಆಫರ್‌ಗಳು ಬರುತ್ತಿವೆ. ಗುರುಪ್ರಸಾದ್ ಎಷ್ಟು ಸಂಭಾವನೆ ಕೇಳುತ್ತಿದ್ದಾರೆ ಗೊತ್ತಾ? ಕೇವಲ 63 ಲಕ್ಷ ರೂ.ಗಳು! ಅದಕ್ಕೂ ಎಸ್ ಎನ್ನುತ್ತಾ ನಿರ್ಮಾಪಕರು ಮುಂದೆ ಬರುತ್ತಿರುವುದು ಗುರು ಸಂತೋಷವನ್ನು ಇಮ್ಮಡಿಗೊಳಿಸಿದೆ.






## ಸೆಂಟಿಮೆಂಟ್ ಸಮಾರಂಭ

ಮೊನ್ನೆ ಒಂದು ಎಮೋಷನಲ್ ಸಮಾರಂಭ ನಡೆಯಿತು. 'ವಾಯುಪುತ್ರ' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭವದು. ಅದರ ನಿರ್ದೇಶಕ ಕಿಶೋರ್ ಸರ್ಜಾ ಇತ್ತೀಚೆಗೆ ನಿಧನ ಹೊಂದಿದ್ದರಿಂದ ಅಲ್ಲಿ ಸಂತಸ, ಸಂಭ್ರಮದ ಬದಲು ಒಂದು ರೀತಿಯ ಸೆಂಟಿಮೆಂಟ್ ವಾತಾವರಣವಿತ್ತು.


'ವಾಯುಪುತ್ರ'ದ ನಾಯಕ ಚಿರಂಜೀವಿ ಸರ್ಜಾ ಬೇರ್‍ಯಾರು ಅಲ್ಲ, ಅರ್ಜುನ ಸರ್ಜಾನ ಅಕ್ಕನ ಮಗ. ಅಂದರೆ ಸೋದರಳಿಯ. ಶಕ್ತಿ ಪ್ರಸಾದ್ ನಂತರ ಸರ್ಜಾ ಸಹೋದರರು ಉದ್ಯಮಕ್ಕೆ ಬಂದರು. ಇದೀಗ ಮೂರನೇ ತಲೆಮಾರಿನ ಕುಡಿಯಾಗಿ ಚಿರಂಜೀವಿ ಸರ್ಜಾ ಉದ್ಯಮಕ್ಕೆ ಕಾಲಿಡುತ್ತಿದ್ದಾನೆ. ಈತನ ಚಿತ್ರವನ್ನು ಮುಗಿಸಿ ಅದು ತೆರೆ ಕಾಣುವ ಮೊದಲೇ ಮಾವ ಕಿಶೋರ್ ಸರ್ಜಾ ನಿಧನ ಹೊಂದಿದ್ದು ಇಡೀ ಕುಟುಂಬದವರಿಗೆಲ್ಲ ಬೇಸರ ತಂದಿದೆ.

ವಿಶೇಷವೆಂದರೆ ಇದೇ ಸಮಾರಂಭದಲ್ಲಿ ಕಿಶೋರ್ ಸರ್ಜಾ ಅವರ ಹಿರಿಯ ಮಗ ಸ್ವಂತ ಆಸಕ್ತಿಯಿಂದ ಮಾಡಿದ ಆಲ್ಬಂನ್ನು ನಟ ಸುದೀಪ್ ಬಿಡುಗಡೆಗೊಳಿಸಿದರು. ಅಂತೂ ಅಪ್ಪನ ಹೆಸರನ್ನು ಅಜರಾಮರ ಮಾಡಲು ಮಗ ಉದ್ಯಮದಲ್ಲಿ ಒಂದು ಪುಟ್ಟ ಹೆಜ್ಜೆ ಇರಿಸಿದ್ದಾನೆ. ಅಂದಿನ ಸಮಾರಂಭದಲ್ಲಿ ಭಾವನೆಯ ಕಟ್ಟೆಯೊಡೆದು ಅರ್ಜುನ್ ಸರ್ಜಾ ತನ್ನ ಸಹೋದರನನ್ನು ನೆನೆಯುತ್ತಾ ಅತ್ತೇಬಿಟ್ಟರು. ಹೀಗೆ ರಂಗುರಂಗಿನ ಸಂಭ್ರಮದ ಸಮಾರಂಭವೊಂದು ಈ ರೀತಿ ಭಾವನಾತ್ಮಕ ಸಂಚನ ನೆಲೆಯಲ್ಲಿ ನಡೆಯಿತು.

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 2-08-2009 RNI No. KARKAN2005/14

# 'ರಾಜ್' ಹೆಸರಿಗೆ ಪ್ರೇಮ್ ಮಸಿ!





ತಿರುಬೋಕಿಯೊಬ್ಬನ ಕೈಗೆ ಗುಲಗಂಜಿ ಸಿಕ್ಕಂತಾಗಿದೆ ನಿರ್ದೇಶಕ ಪ್ರೇಮ್ ಕಥೆ. ತನ್ನ 'ರಾಜ್' ಚಿತ್ರದ ತುಂಬಾ ಅಣ್ಣಾವ್ರ ಹೆಸರು, ಅವರ ಸಿನಿಮಾ ತುಣುಕುಗಳು, ಅವರೊಂದಿಗೆ ನಟಿಸಿದ್ದ ಹಿರಿಯ ನಾಯಕಿಯರಿಗೆ ಪಾತ್ರ, ನಾಯಕನ ಪಾತ್ರಕ್ಕೆ ಮುತ್ತುರಾಜ್ ಎಂಬ ಹೆಸರು, ನಾಯಕಿಗೆ ಪಾರೂ ಎಂದು ನಾಮಕರಣ... ಇಷ್ಟೆಲ್ಲ ಮಾಡಿ ರಾಜ್‌ಕುಮಾರ್ ಅವರ ಹೆಸರಿಗೆ ಮಣ್ಣು ಬಳಿದಿರುವ ಪ್ರೇಮ್ ಈಗ ಎಲ್ಲ ಕನ್ನಡ ಚಿತ್ರಾಸಕ್ತರಿಂದ ಛೀ.. ಥೂ ಎಂದು ಉಗಿಸಿಕೊಳ್ಳುತ್ತಿದ್ದಾನೆ.

ಡಾ. ರಾಜ್‌ಕುಮಾರರ ಹೆಸರಿನ ಮೌಲ್ಯವೇ ಗೊತ್ತಿಲ್ಲದ ಪ್ರೇಮ್ ಅವರ ಹೆಸರನ್ನು ಹೀಗೆ ಸಿಕ್ಕಸಿಕ್ಕಲ್ಲೆಲ್ಲಾ ಸೀಟಿಕೊಂಡು ಹೊಲಸೆಬ್ಬಿಸಿ ಬಿಸಾಡಿರುವುದು ಎಲ್ಲ ಕನ್ನಡಿಗರಿಗೆ ಅವಮಾನ ಮಾಡಿದಂತೆಯೇ ಸರಿ. ಯಾಕೆಂದರೆ 'ರಾಜ್' ಚಿತ್ರವನ್ನು ನೋಡಿರುವ ಪ್ರತಿಯೊಬ್ಬರೂ ಕೇಳುತ್ತಿರುವ ಪ್ರಶ್ನೆ: "ಈ ಚಿತ್ರಕ್ಕೆ 'ರಾಜ್' ಹೆಸರೇ ಯಾಕೆ ಬೇಕಿತ್ತು?" ಎಂದು.

ಪುನೀತ್ ಎಂಬ ಪವರ್‌ಸ್ಟಾರ್‌ನ ಕಾಲ್‌ಶೀಟು ಸಿಕ್ಕಿತೆಂದ ಮಾತ್ರಕ್ಕೆ 'ರಾಜ್' ಎಂಬ ಕರ್ನಾಟಕದ ಆಸ್ತಿಯನ್ನು ಇಷ್ಟು ಕೀಳಾಗಿ ಬಳಸಿಕೊಳ್ಳುವುದಾ? ಚಟಾಕು ಗಾತ್ರದ ಕಥೆಯನ್ನಿಟ್ಟುಕೊಂಡು 'ರಾಜ್' ಹೆಸರಿಗೆ ಈ ಪಾಟ ಅವಮಾನಾ ಮಾಡೋದಾ?

### ಬ್ಲಾಕ್ ಟಿಕೆಟೂ ಬೆದರಿತು!

'ರಾಜ್' ಬಿಡುಗಡೆಗೆ ಮುನ್ನ ಸೃಷ್ಟಿಸಿದ್ದ ಕ್ರೇಜ್ ಕಂಡು ನಾಲ್ಕು ವಾರ ಕಳೆದರೂ ಟಿಕೆಟ್ ಅಷ್ಟು ಸುಲಭವಾಗಿ ದೊರೆಯುವುದಿಲ್ಲ ಎನಿಸುತ್ತಿತ್ತು. ಆದರೆ ಮೊದಲ ಶೋ ಮುಗಿಯುವ ಹೊತ್ತಿಗೆ ಬ್ಲಾಕ್ ಟಿಕೆಟ್ ಬೆಲೆಯೇ ಕುಸಿದು ಬಿದ್ದಿತ್ತು. ಅಂದು ಬೆಳಗ್ಗೆ 800-1,000 ರೂಪಾಯಿಗಳ ತನಕ ಮಾರಾಟವಾಗುತ್ತಿದ್ದ ಬ್ಲಾಕ್ ಟಿಕೇಟ್‌ಗಳು ಮಧ್ಯಾಹ್ನದ ಶೋ ಹೊತ್ತಿಗೆ ನೂರು ರೂಪಾಯಿ ತಲುಪಿತ್ತು. ಕೊನೆಕೊನೆಗೆ ಬ್ಲಾಕ್ ಟಿಕೆಟ್ ಮಾರಾಟಗಾರರು ಸಂಜೆಯ ಶೋ ಹೊತ್ತಿಗೆ ಹಾಕಿದ ಬಂಡವಾಳದ ಮೇಲೆ ಹತ್ತಿಪ್ಪತ್ತು ಸಿಕ್ಕರೂ ಸಾಕು ಎಂದು ಟಿಕೆಟ್‌ಗಳನ್ನು ಮಾರಲಾರಂಭಿಸಿದ್ದರು.



ಇನ್ನು ಮೊದಲ ಪ್ರದರ್ಶನದ ಪ್ರತಿಕ್ರಿಯೆ ಕಂಡು ಗಾಬರಿಗೆ ಬಿದ್ದ ನಿರ್ಮಾಪಕರಲ್ಲೊಬ್ಬರಾದ ಶ್ರೀನಿವಾಸಮೂರ್ತಿ ಸೀದಾ ತಮ್ಮ ಕಚೇರಿಗೆ ಹೋಗಿ ಟೇಬಲ್ ಮೇಲೆ ತಲೆಯಿಟ್ಟು ಕೂತುಬಿಟ್ಟರು. ಸುರೇಶ್ ಗೌಡರಂತೂ ನಾಪತ್ತೆಯಾದರು.

### ಅಪ್ಪು ಇಮೇಜ್‌ಗೆ ಧಕ್ಕೆ!

ಪುನೀತ್ ಈವರೆಗೆ ನಟಿಸಿರುವ ಚಿತ್ರಗಳಲ್ಲಿ ಒಂದೆರಡು ಬಾಕ್ಸಾಫೀಸಿನಲ್ಲಿ ಹಿಟ್ ಆಗಿಲ್ಲದಿದ್ದರೂ ಉಳಿದ ಚಿತ್ರಗಳಿಗೆ, ಅವುಗಳಲ್ಲಿ ಪುನೀತ್ ನಿರ್ವಹಿಸಿದ ಪಾತ್ರಗಳಿಗೆ ಅದರದ್ದೇ ಆದ ತೂಕವಿತ್ತು. ಆದರೆ 'ರಾಜ್' ಚಿತ್ರ ಮತ್ತು ಅದರಲ್ಲಿನ ಕಳಪೆ ಪಾತ್ರ ನಿಜಕ್ಕೂ ಪುನೀತ್ ಕೆರಿಯರ್‌ಗೆ ದೊಡ್ಡ ಏಟೇ ನೀಡಿದೆ.

### 'ಕಲಾಕಾರ್' ಇದಕ್ಕಿಂತ ಬೆಟರು!



ಒಂದು ಆ್ಯಂಗಲ್‌ನಲ್ಲಿ 'ಜೋಗಿ' ಮತ್ತೊಂದು ಆ್ಯಂಗಲ್‌ನಲ್ಲಿ 'ಎಕ್ಸ್‌ಕ್ಯೂಸ್ ಮಿ' ಚಿತ್ರವನ್ನು 'ರಾಜ್' ಹೋಲುತ್ತದಾದರೂ ಅದಕ್ಕಿಂತ ಮುಖ್ಯವಾಗಿ ಇತ್ತೀಚೆಗೆ ಬಿಡುಗಡೆಗೊಂಡಿದ್ದ ಮತ್ತೊಂದು ಕನ್ನಡ ಚಿತ್ರವಾದ 'ಕಲಾಕಾರ್' ಚಿತ್ರದ ಇನ್ನೊಂದು ವರ್ಷನ್‌ನಂತಿದೆ. ಹರೀಶ್ ರಾಜ್ ಎಂಬ ಯುವಕ ನಿರ್ದೇಶಿಸಿ ನಟಿಸಿದ್ದ 'ಕಲಾಕಾರ್' ಚಿತ್ರ 'ರಾಜ್'ಗಿಂತಲೂ ಹತ್ತುಪಟ್ಟು ಚೆನ್ನಾಗಿತ್ತು, ಆದರೆ ಪ್ರಚಾರದ ಕೊರತೆ ಮತ್ತು ಸ್ಟಾರ್ ಪವರ್ ಇಲ್ಲದ ಕಾರಣ 'ಕಲಾಕಾರ್' ಹೇಳಹೆಸರಿಲ್ಲದಂತೆ ನೆಲಕಚ್ಚಿತು. ಬಹುಶಃ ನಿರ್ದೇಶಕ ಪ್ರೇಮ್‌ಗೆ ಸಿಕ್ಕಷ್ಟು ಹಣ ಮತ್ತು ಪ್ರಚಾರದ ಬೆಂಬಲವಿದ್ದಿದ್ದರೆ ಆ ಯುವಕ ಹರೀಶ್‌ರಾಜ್ 'ರಾಜ್'ಗಿಂತಲೂ ಅದ್ಭುತವಾದ ಸಿನಿಮಾವನ್ನೇ ಮಾಡುತ್ತಿದ್ದನೇನೋ?

ಒಟ್ಟಾರೆಯಾಗಿ 'ಆಡೋ ಹುಡುಗನಿಗೆ ಮದುವೆಮಾಡಿ ಮನೆಯೊಳಗೆ ಬಿಟ್ಟರೆ ಆ ಹುಡುಗ ಮಾಡೋ ಕೆಲಸ ಬಿಟ್ಟು ಇನ್ನೇನನ್ನೋ ಮಾಡಿದ.....!' ಎನ್ನುವಂತೆ ನಿರ್ದೇಶಕ ಪ್ರೇಮ್ ಪುನೀತ್‌ರಂಥ ಸ್ಟಾರ್ ನಟನ ಕಾಲ್‌ಶೀಟು, ಸುರೇಶ್ ಗೌಡ ಮತ್ತು ಶ್ರೀನಿವಾಸ ಮೂರ್ತಿ ತರಹದ 'ಪವರ್‌ಫುಲ್' ನಿರ್ಮಾಪಕರ ನೆರವಿದ್ದರೂ 'ರಾಜ್' ತರಹದ ಕಳಪೆ ಚಿತ್ರವನ್ನು ಮಾಡಿರುವುದು ಆತನ ಅಭಿರುಚಿಗೆ ಸಾಕ್ಷಿಯಂತಿದೆ.

● ಅರುಣ್

## ರಾಜ್ ಪ್ರತಿಮೆಯೋ ಎಸ್ಸೆಂ ಕೃಷ್ಣರ ಪುತ್ಥಳಿಯೋ



ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಸಂತೋಷ್ ಚಿತ್ರಮಂದಿರದ ಮುಂದೆ ಡಾ. ರಾಜ್‌ಕುಮಾರರ 60 ಅಡಿ ಎತ್ತರದ ಬೊಂಬೆ ನಿಲ್ಲಿಸಿ, ಅದು ಬಲಗೈಯನ್ನು ಅಲ್ಲಾಡಿಸುತ್ತಾ ಪ್ರೇಕ್ಷಕರನ್ನು ಕರೆಯುವಂತೆ ತೋರಿಸಿರುವ ಪ್ರೇಮ್‌ನ ಕೀಳು ದರ್ಜೆಯ ಪ್ರಚಾರವಂತೂ ಹೇಸಿಗೆ ಹುಟ್ಟಿಸುವಂತಿದೆ. ಆ ಬೊಂಬೆಯನ್ನು ನೋಡಿದ ಜನರೆಲ್ಲ "ಇದೇನಿದು ರಾಜ್ ಅವರ ಪ್ರತಿಮೆ ಎಸ್. ಎಂ. ಕೃಷ್ಣ ಥರ ಕಾಣಿಸ್ತಿದೆ" ಎಂದು ಲೇವಡಿ ಮಾಡುತ್ತಿರುವುದನ್ನಾದರೂ ಕೇಳಿ ರಾಜ್ ಭಕ್ತರು ಅದನ್ನು ಈಗಾಗಲೇ ತೆಗೆಸಬೇಕಿತ್ತು, ಹಾಗೆ ಮಾಡಿದಾಗ ಆವರು ರಾಜ್ ಅವರ ಮರ್ಯಾದೆಯನ್ನು ಈ ಪ್ರೇಮ್ ಎಂಬ ಹುಚ್ಚನ ಅವತಾರಗಳಿಂದ ಉಳಿಸಿದಂತಾಗುತ್ತದೆ.

ಪ್ರೇಮ್ ಇಷ್ಟೆಲ್ಲಾ ತಲೆಹರಟೆಗಳನ್ನು ಮಾಡುತ್ತಾ ರಾಜ್‌ರ ಹೆಸರನ್ನು ಬೇಕಾಬಿಟ್ಟಿ ಹರಾಜಿಗಿಟ್ಟಿದ್ದರೂ, ಇದನ್ನೆಲ್ಲ ಕಣ್ಣಾರೆ ಕಂಡೂ ತಾಯಿ ಪಾರ್ವತಮ್ಮನವರು ಹೇಗೆ ಸಹಿಸಿಕೊಂಡಿದ್ದಾರೆ?

## ಚಿತ್ರದ ಕತೆಯೋ ಪ್ರೇಮ್‌ನ ಜೀವನಗಾಥೆಯೋ

ಒಂದೇ ದಿನದಲ್ಲಿ ಮಕಾಡೆ ಮಲಗಿದ 'ರಾಜ್' ಚಿತ್ರದ ನಿರ್ದೇಶಕ ಪ್ರೇಮ್ ಬಗ್ಗೆ ಈ ಗಾಂಧಿನಗರದಲ್ಲಿ ಹಲವಾರು ಜೋಕ್‌ಗಳು ಜನ್ಮ ಪಡೆದು ಜನ ಎಲ್ಲೆಂದರಲ್ಲಿ ಉಗ್ಗಾಡಿಕೊಂ ನಗಾಡುತ್ತಿದ್ದಾರೆ.

ಅವುಗಳಲ್ಲಿ ಒಂದು ಹೀಗಿದೆ: "'ರಾಜ್' ಚಿತ್ರದ ಕಥೆ ಸ್ವತಃ ಪ್ರೇಮ್‌ನ ಬಯಾಗ್ ಚಿತ್ರದ ನಾಯಕನಂತೆ ಪ್ರೇಮ್ ಕೂಡ ಚಿತ್ರರಂಗದಲ್ಲಿ ನೆಲೆ ನಿಲ್ಲಬೇಕೆಂಬ ಕನಸು ಹೊ ಮಂಡ್ಯದಿಂದ ಬೆಂಗಳೂರಿಗೆ ಬಂದ ಹಳ್ಳಿಹೈದ. ಚಿತ್ರದ ಹೀರೋನಂತೆ ಪ್ರೇಮ್ ಕೂ ಸಾಕಷ್ಟು ಕಸರತ್ತು ಮಾಡಿ ಈ ಬಣ್ಣದ ಜಗತ್ತಿನಲ್ಲಿ ನೆಲೆನಿಂತವನು. ಹಾಗೆಯೇ ಚಿತ್ರರಂಗ ಒಬ್ಬಳು ಹುಡುಗಿಗೆ 'ಹೇ... ರಕ್ಷೂ... ಐ ಲವ್ ಯು ಅಂತ ಒಮ್ಮೆ ಹೇಳೇ...' ಎಂ ಹಿಂದೆಬಿದ್ದು ಆಕೆಯನ್ನು ಮದುವೆ ಕೂಡ ಆದ...



ಇನ್ನು ಚಿತ್ರದ ಕ್ಲೈಮ್ಯಾಕ್ಸಿಗೂ ಪ್ರೇಮ್‌ನ ನಿಜಜೀವನಕ್ಕೂ ಇರುವ ಹೋಲಿಕೆ ಏ ಗೊತ್ತ? ಚಿತ್ರದ ಹೀರೋನಂತೆ ಪ್ರೇಮ್ ಕೂಡ 'ರಾಜ್' ಎಂಬ ತೋಪು ಚಿತ್ರದ ನಂತರ ಗಂಟುಮೂಟೆ ಕಟ್ಟಿಕೊಂಡು ತನ್ನ ಪತ್ನಿಯೊಂದಿಗೆ ಹಳ್ಳಿಗೆ ಹಿಂದಿರುಗಿ ಕುರಿ ಮೇಯಿಸುವುದಂತೆ...!"

ಮತ್ತೊಂದು ಜೋಕ್: ಕಥೆಯೇ ಇಲ್ಲದ ಚಿತ್ರವನ್ನು ಹೇಗೆ ಮಾಡಬಹುದು ಎಂಬುದನ್ನು ಪ್ರಪಂಚಕ್ಕೆ ತೋರಿಸಿಕೊಟ್ಟ ಖ್ಯಾತಿ ಈಗ ಪ್ರೇಮ್‌ಗೆ ಸಲ್ಲುತ್ತದೆ. ಆದರೆ ಕತೆಯೇ ಇಲ್ಲದ ಚಿತ್ರವೆಂದರೆ ಆತ್ಮವೇ ಇಲ್ಲದ ದೇಹದಂತೆ ಎಂಬು ಪ್ರೇಮ್‌ಗೆ ಅರ್ಥವಾಗುವುದಕ್ಕೆ ಪಾಪ ನಿರ್ಮಾಪಕರು ಆರೂವರೆ ಕೋಟಿ ರೂಪಾ ಖರ್ಚು ಮಾಡಬೇಕಾಗಿದ್ದು ಮಾತ್ರ ಪ್ರೇಮ್ ಹೊರತಾಗಿ ಯಾರಲ್ಲೂ ನಗೆ ಹುಟ್ಟಿಸುತ್ತಿ


## ಪುನೀತ್ ಒಪ್ಪಿದ್ದು ಈ ಕತೆಯನ್ನೇ?



"ಇಂಥ ಕಥೆಯೇ ಇಲ್ಲದ ತಗಡು ಸಬ್ಜೆಕ್ಟ್‌ಅನ್ನು ಪುನೀತ್ ಒಪ್ಪಿದ್ದಾದರೂ ಹೇಗೆ?" ಎಂಬ ಪ್ರಶ್ನೆ ಅವರ ಅಭಿಮಾನಿಗಳನ್ನು ಕಾಡುತ್ತಿದೆ.

ವಾಸ್ತವ ಏನೆಂದರೆ: ಪುನೀತ್ ಈ ಚಿತ್ರವನ್ನ ಒಪ್ಪುವ ಮುನ್ನ ಕೇಳಿದ ಕಥೆಯೇ ಬೇರೆಯಾಗಿತ್ತು!

ಪ್ರೇಮ್‌ನ ಅಸೋಸಿಯೇಟುಗಳಾದ ಆನಂದ್ ಮತ್ತು ರಘು ಜೊತೆಗೂಡಿ ಅಚ್ಚುಕಟ್ಟ ಬರೆದಿದ್ದ ಕತೆಯನ್ನು ಪುನೀತ್ ಹಾಗು ರಾಘವೇಂದ್ರ ರಾಜ್‌ಕುಮಾರ್‌ಗೆ ಹೇಳಿದ್ದ ಅವರು ಹೇಳಿದ್ದ ಕಥೆ ವಿಭಿನ್ನವಾಗಿದ್ದರಿಂದ ಪುನೀತ್ ಮತ್ತು ರಾಘವೇಂದ್ರ ಮೆಚ್ಚಿ ' ಎಂದಿದ್ದರು. ಆ ನಂತರ ಸುಮಾರು ಮೂರ್ನಾಲ್ಕು ತಿಂಗಳ ಕಾಲ ಚಿತ್ರಕಥೆ ರೂಪಿಸ ಕೂರಲಾಯಿತು. ಆ ಸಂದರ್ಭದಲ್ಲಿ ಚಿತ್ರಕಥೆ ಬರೆಯುವ ಬದ ಗಿಮಿಕ್‌ಗಳನ್ನು ಸೇರಿಸಲು ಶುರುಮಾಡಿದ ಪ್ರೇಮ್ ಗಂಟೆಗೊ ಗಳಿಗೆಗೊಮ್ಮೆ ಕಥೆಯನ್ನು ತಿದ್ದೀ ತಿದ್ದೀ ಕೊನೆಗೆ ಅದು ಪುನಿ ಬಳಿ ಹೇಳಿದ ಕಥೆಗಿಂತ ಬೇರೆಯದ್ದೇ ರೂಪ ಪಡೆದುಬಿಟ್ಟ ಪ್ರೇಮ್‌ನ ಮಂಗಾಟಕ್ಕೆ ಇವತ್ತು ಪುನೀತ್ ಕೂಡ ಇಂ ಕೆಟ್ಟ ಚಿತ್ರದಲ್ಲಿ ನಟಿಸಿದ ಆರೋಪ ಹೊರಬೇಕಾಗಿದೆ.





PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44